ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಅಕ್ಟೋಬರ್ 22 ಬುಧವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 185 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಸ್ಥಳೀಯ ಸಂಸ್ಥೆಗಳ ಚುನಾವಣೆ ಹಿನ್ನೆಲೆ

ಶೀಘ್ರ ಬಿಜೆಪಿ–ಜೆಡಿಎಸ್ ಸಮನ್ವಯ ಸಮಿತಿ ರಚನೆ

- ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಘೋಷಣೆ
- ಕೇಂದ್ರ ಸಚಿವ ಕುಮಾರಸ್ವಾಮಿ ಭೇಟಿ; ದೀಪಾವಳಿ ಶುಭಾಶಯ ಕೋರಿದ ನಂತರ ಸುದ್ದಿಗಾರರಿಗೆ ಮಾಹಿತಿ



ವಿಜಯೇಂದ್ರ

ಬೆಂಗಳೂರು, ಅ.21 (ಕೆಎಂಶಿ)– ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆ ಹಾಗೂ ರಾಜ್ಯ ಸರ್ಕಾರದ ಭ್ರಷ್ಟಾಚಾರ ವಿರುದ್ಧ ಬಿಜೆಪಿ–ಜೆಡಿಎಸ್ ಸಂಘಟಿತ ಹೋರಾಟಕ್ಕೆ ನಿರ್ಧರಿಸಿವೆ. ಮೈತ್ರಿ ಪಕ್ಷಗಳ ಸಮನ್ವಯತೆ ಉದ್ದೇಶದಿಂದ ರಾಜ್ಯ ಮತ್ತು ಗ್ರೇಟರ್ ಬೆಂಗಳೂರಿಗೆ ಪ್ರತ್ಯೇಕ ಸಮನ್ವಯ ಸಮಿತಿಗಳನ್ನು ರಚಿಸಲು ತೀರ್ಮಾನಿಸಿವೆ.

ಕೇಂದ್ರ ಸಚಿವ ಹಾಗೂ ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ ದೀಪಾವಳಿ ಶುಭಾಶಯ ವಿನಿಮಯದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇನ್ನೆರಡು ವಾರದಲ್ಲಿ ಸಮನ್ವಯ ಸಮಿತಿಗಳು ರಚನೆ ಆಗಲಿವೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಆಡಳಿತ ವೈಖರಿ, ಭ್ರಷ್ಟಾಚಾರ ವಿರುದ್ಧ ಹೋರಾಟ, ಮುಂಬರುವ ಚುನಾವಣೆಗಳನ್ನು ಮೈತ್ರಿ ಪಕ್ಷಗಳು ಸಂಘಟಿತವಾಗಿ ಎದುರಿಸುವ ಸಂಬಂಧ ಸಮನ್ವಯ ಸಮಿತಿ ರಚಿಸುವಂತೆ ಕುಮಾರಸ್ವಾಮಿ ಸಲಹೆ ಮಾಡಿದ್ದಲ್ಲದೆ, ಇನ್ನು ಮೂರ್‍ನಾಲ್ಕು ದಿನದಲ್ಲಿ ಸಮಿತಿಯಲ್ಲಿ ಜೆಡಿಎಸ್ ಸದಸ್ಯರ ಹೆಸರನ್ನು ಕಳುಹಿಸುವುದಾಗಿ ತಿಳಿಸಿದ್ದಾರೆ.

> "ರಾಜ್ಯ ಕಾಂಗ್ರೆಸ್ ಸರ್ಕಾರದ ಆಡಳಿತ ವೈಖರಿಗೆ ರಾಜ್ಯದ ಜನ ಹಿಡಿಶಾಪ ಹಾಕುತ್ತಿದ್ದಾರೆ. ಮಹಾನಗರದ ಅವ್ಯವಸ್ಥೆ ನೀವೇ ನೋಡುತ್ತಿದ್ದೀರಿ. ಈಗ ತುಘಲಕ್ ಸರ್ಕಾರ ಇದೆ ಎಂಬುದಾಗಿ ಜನ ಹೇಳುತ್ತಿದ್ದಾರೆ. ಭ್ರಷ್ಟಾಚಾರದ ಹಣ ಬಿಹಾರ ಚುನಾವಣೆಗೆ ಬಳಕೆ ಆಗುತ್ತಿದೆ ಎಂಬುದಕ್ಕೆ ಸಾಕ್ಷಿ ಕೊಡಿ ಎನ್ನುತ್ತಿದ್ದಾರೆ. ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ಹಣದ ಬಳಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮರೆತು ಹೋಯಿತೇ.
>
> –ಬಿ.ವೈ.ವಿಜಯೇಂದ್ರ

ಬಿಜೆಪಿ ಪಕ್ಷದ ವರಿಷ್ಠರು, ನಾಯಕರೊಂದಿಗೆ ಈ ಸಂಬಂಧ ಚರ್ಚಿಸಿ ಸಮನ್ವಯ ಸಮಿತಿ ರಚಿಸುವುದಾಗಿ ತಿಳಿಸಿದರು.

ಗುಂಡಿ ಪ್ರಸ್ತಾಪಿಸಿದರೆ ಅಹಂಕಾರ ಪ್ರದರ್ಶನ: ಸಚಿವರು ಅಹಂಕಾರದಿಂದ ಮೆರೆಯುತ್ತಿದ್ದಾರೆ, ಮೋಹನ್‌ದಾಸ್ ಪೈ, ಕಿರಣ್ ಮಜುಂದಾರ್ ಷಾ ಅವರಂಥ ಹಿರಿಯರು ▶ 6ನೇ ಪುಟಕ್ಕೆ

ಕೋಮುಹತ್ಯೆ, ಹಿಂಸಾಚಾರ ತಡೆಗೆ ಸ್ಪೆಷಲ್ ಆಕ್ಷನ್ ಫೋರ್ಸ್

ನಿವೃತ್ತ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ಸೇವಾನಿಧಿಗೆ 10 ಕೋಟಿ; ಹುತಾತ್ಮ ಪೊಲೀಸ್ ಸಂಸ್ಮರಣಾ ದಿನಾಚರಣೆಯಲ್ಲಿ ಸಿಎಂ ಘೋಷಣೆ



ಬೆಂಗಳೂರಿನ ಮೈಸೂರು ರಸ್ತೆಯ ಸಿಎಆರ್ ಕೇಂದ್ರದಲ್ಲಿ ನಡೆದ ಪೊಲೀಸ್ ಸಂಸ್ಮರಣಾ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯ ಹುತಾತ್ಮರಾದ ಪೊಲೀಸರಿಗೆ ನಮನ ಸಲ್ಲಿಸಿದರು.



ಪೊಲೀಸರು ಮೂರು ಸುತ್ತು ಗುಂಡು ಹಾರಿಸಿ, ಹುತಾತ್ಮರಿಗೆ ವಂದಿಸಿದರು.

ಬೆಂಗಳೂರು,ಅ.21–ರಾಜ್ಯದಲ್ಲಿ ಕೋಮುಹತ್ಯೆ, ಹಿಂಸಾಚಾರ, ಪ್ರಚೋದನಾಕಾರಿ ಭಾಷಣ ಹಾಗೂ ನೈತಿಕ ಪೊಲೀಸ್‌ಗಿರಿಯಂತಹ ಪ್ರಕರಣಗಳನ್ನ ಹತ್ತಿಕ್ಕಲು ಸ್ಪೆಷಲ್ ಆಕ್ಷನ್ ಫೋರ್ಸ್ ರಚನೆ ಮಾಡಿದ್ದೇವೆಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಮೈಸೂರು ರಸ್ತೆಯ ಸಿಎಆರ್ ಕೇಂದ್ರದಲ್ಲಿ ನಡೆದ ಪೊಲೀಸ್ ಸಂಸ್ಮರಣಾ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಸೇವಾನಿಧಿಗೆ 10 ಕೋಟಿ

> "ನಿವೃತ್ತ ಪೊಲೀಸ್ ಅಧಿಕಾರಿಗಳು ಸಿಬ್ಬಂದಿಗಳ ಸೇವಾ ನಿಧಿಗೆ 10 ಕೋಟಿ ರೂ. ನೀಡುವುದಾಗಿ ಸಿಎಂ ಘೋಷಿಸಿದರು. ಅನುಕಂಪದ ಆಧಾರದಲ್ಲಿ 116 ಕುಟುಂಬದವರಿಗೆ ಕೆಲಸ ಒದಗಿಸಲಾಗಿದೆ. ಅಲ್ಲದೇ ಕೋಮುಹತ್ಯೆ, ಹಿಂಸಾಚಾರ, ಪ್ರಚೋದನಕಾರಿ ಭಾಷಣ ನೈತಿಕ ಪೊಲೀಸ್ ಗಿರಿಯಂತಹ ಪ್ರಕರಣಗಳನ್ನ ತಡೆಯಲು ರಾಜ್ಯದಲ್ಲಿ ಸ್ಪೆಷಲ್ ಆಕ್ಷನ್ ಫೋರ್ಸ್ ರಚನೆ ಮಾಡಿದ್ದೇವೆ. ಮಾದಕ ದ್ರವ್ಯಕ್ಕೆ ಕಡಿವಾಣ ಹಾಕಲು ಕ್ರಮ ಕೈಗೊಳ್ಳಲಾಗಿದೆ. ನಂದಿಬೆಟ್ಟದಲ್ಲಿ 2 ಭಾರತೀಯ ಮೀಸಲು ಪಡೆ ಆರಂಭಕ್ಕೆ ಒಪ್ಪಿಗೆ ನೀಡಲಾಗಿದೆ. ಹೊಸದಾಗಿ 2 ಬಾಂಬ್ ಸ್ಕ್ಯಾಡ್ ಮಾಡಲಾಗಿದೆ. ಮನೆ ಮನೆಗೆ ಪೊಲೀಸ್ ವ್ಯವಸ್ಥೆ ಜಾರಿ ಮಾಡಿದ್ದೇವೆ. ಎಸ್ಸಿ–ಎಸ್ಟಿ ಜನರ ರಕ್ಷಣೆಗೆ ಡಿಸಿಆರ್–ಎ ಠಾಣೆ ತಂದಿದ್ದೇವೆ.

ಇದಕ್ಕೂ ಮುನ್ನ ಕರ್ತವ್ಯದ ವೇಳೆ ಹುತಾತ್ಮರಾದ ಪೊಲೀಸರಿಗೆ ಸಿಎಂ, ಗೃಹ ಸಚಿವರು ಗೌರವ ಸಲ್ಲಿಸಿದರು. ಬಳಿಕ ಮಾತನಾಡಿ, ರಾಜ್ಯದ ಘನತೆ, ಅಭಿವೃದ್ಧಿ ಮತ್ತು ಪ್ರಗತಿಗೆ ಕಂಟಕವಾಗಿದ್ದ ಸಂವಿಧಾನ ವಿರೋಧಿ ಅನೈತಿಕ ಪೊಲೀಸ್‌ಗಿರಿಗೆ ರಾಜ್ಯದಲ್ಲಿ ಕಡಿವಾಣ ಬಿದ್ದಿದೆ. ಇದರ ಶ್ರೇಯಸ್ಸು ಪೊಲೀಸ್ ಇಲಾಖೆಗೆ ಸಲ್ಲಬೇಕು. ಪೊಲೀಸ್ ಇಲಾಖೆ ಶಾಂತಿ–ಸುವ್ಯವಸ್ಥೆ ಕಾಪಾಡಿದರೆ ರಾಜ್ಯದ ಅಭಿವೃದ್ಧಿ ▶ 6ನೇ ಪುಟಕ್ಕೆ

ಶುಭಾಶಯಗಳು



ನಾಡಿನ ಸಮಸ್ತರಿಗೂ ದೀಪಾವಳಿ ಹಬ್ಬದ ಶುಭಾಶಯಗಳು

ಬಿಡುವು

ದೀಪಾವಳಿ ಹಬ್ಬದ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ 23–10–2025ರ ಗುರುವಾರದ 'ಮೈಸೂರು ಮಿತ್ರ' ಸಂಚಿಕೆ ಪ್ರಕಟವಾಗುವುದಿಲ್ಲ.

–ಸಂಪಾದಕರು

ಕೇವಲ 12 ದಿನದಲ್ಲಿ 23 ಲಕ್ಷಕ್ಕೂ ಹೆಚ್ಚು ಭಕ್ತರಿಂದ ಹಾಸನಾಂಬೆಯ ದರ್ಶನ

- 20 ಕೋಟಿ ಆದಾಯ; ಉತ್ಸವದಲ್ಲಿ ಹೊಸ ಇತಿಹಾಸ
- ಇಂದು ದರ್ಶನಕ್ಕೆ ತೆರೆ



ಹಾಸನ: ಇಡೀ ದೇಶವನ್ನೆ ತನ್ನತ್ತ ಸೆಳೆಯುತ್ತಿರುವ ರಾಜ್ಯದ ಶಕ್ತಿಕೇಂದ್ರ ಹಾಸನಾಂಬೆಯ ತವರು ಹಾಸನದಲ್ಲಿ ಮೇಳೈಸುತ್ತಿರುವ ಹಾಸನಾಂಬೆ ಉತ್ಸವಕ್ಕೆ ನಾಳೆ ತೆರೆಬೀಳಲಿದೆ. ಅ.10ರಿಂದ ಆರಂಭವಾಗಿರುವ ಸಾರ್ವಜನಿಕ ದರ್ಶನ ಅ.22 ಅಂದರೆ ನಾಳೆ ಕೊನೆಯಾಗಲಿದೆ. ಕೇವಲ 12 ದಿನಗಳಲ್ಲಿ ಬರೋಬ್ಬರಿ 23 ಲಕ್ಷಕ್ಕೂ ಹೆಚ್ಚು ಭಕ್ತರು ದೇವಿ ದರ್ಶನ ಮಾಡಿದರೆ, ಟಿಕೆಟ್ ಹಾಗೂ ಲಡ್ಡು ಪ್ರಸಾದ ಮಾರಾಟದಿಂದ ಬರೋಬ್ಬರಿ 20 ಕೋಟಿ ರೂ. ಹೆಚ್ಚು ಆದಾಯ ಹರಿದು ಬಂದಿದೆ. ಆ ಮೂಲಕ ಹಾಸನಾಂಬೆ ದರ್ಶನೋತ್ಸವದ ಈವರೆಗಿನ ಎಲ್ಲಾ ದಾಖಲೆಗಳನ್ನು ಮೀರಿಸಿದೆ. ಕಳೆದ 12 ದಿನಗಳಿಂದ ದೇಶದ ಮೂಲೆ ಮೂಲೆಗಳಿಂದ ಹರಿದು ಬಂದ ಭಕ್ತ ಸಾಗರ ಹಾಸನಾಂಬೆಯ ▶ 6ನೇ ಪುಟಕ್ಕೆ

ಮೈಸೂರು ಜಿಲ್ಲೆಯಲ್ಲಿ ಮುಂಗಾರು ವೈಫಲ್ಯ ಬಿತ್ತನೆ ಪ್ರಮಾಣದಲ್ಲಿ ಭಾರೀ ಕುಸಿತ

- ಮುಂಗಾರು ಆರಂಭದಲ್ಲಿ ಉತ್ತಮವಾಗಿದ್ದರೂ ಬಳಿಕ ಇಳಿಮುಖ
- ಆಗಸ್ಟ್‌ನಲ್ಲಷ್ಟೇ ವಾಡಿಕೆ ಮಳೆ ಪ್ರಮಾಣ



ಮೈಸೂರು, ಅ.21(ಎಸ್‌ಬಿಡಿ)– ಮೈಸೂರು ಜಿಲ್ಲೆಯಲ್ಲಿ ಮುಂಗಾರು ಮಳೆ ವೈಫಲ್ಯದಿಂದಾಗಿ ವಿವಿಧ ಬೆಳೆಗಳ ಬಿತ್ತನೆ ಪ್ರಮಾಣದಲ್ಲಿ ಭಾರೀ ಕುಸಿತವಾಗಿದೆ.

ಪ್ರಸಕ್ತ ಸಾಲಿನಲ್ಲಿ ಮುಂಗಾರು ಹಂಗಾಮು ಆರಂಭದಲ್ಲಿ ಆಶಾದಾಯಕವಾಗಿತ್ತಾದರೂ ಜುಲೈ ಹಾಗೂ ಸೆಪ್ಟೆಂಬರ್‌ನಲ್ಲಿ ತೀವ್ರ ಮಳೆ ಕೊರತೆ ಉಂಟಾಗಿದ್ದರಿಂದ ಬಿತ್ತನೆ ಕಾರ್ಯಕ್ಕೆ ಭಾರೀ ಹಿನ್ನಡೆಯಾಗಿದೆ. ಜನವರಿಯಿಂದ ಈವರೆಗೆ ಒಟ್ಟಾರೆ 656 ಮಿ.ಮೀ. ವಾಡಿಕೆ ಮಳೆಯಾಗಬೇಕಿತ್ತು. ಸದ್ಯ 617 ಮಿ.ಮೀ. ಆಗಿದ್ದು, ಈ ಪ್ರಮಾಣದ ವ್ಯತ್ಯಾಸವನ್ನು ಕೊರತೆ ಎಂದು ಪರಿಗಣಿಸುವುದಿಲ್ಲ. ಆದರೆ ಪೂರ್ವ ಮುಂಗಾರು ಹಾಗೂ ಮುಂಗಾರು ಎಂದು ವಿಂಗಡಿಸಿ ನೋಡಿದರೆ ಕೊರತೆ ಅರಿವಾಗುತ್ತದೆ. ಮಾರ್ಚ್‌ನಿಂದ ಮೇವರೆಗೆ ಪೂರ್ವ ಮುಂಗಾರು ಆಶಾದಾಯಕವಾಗಿತ್ತು. ಆ ಅವಧಿಯಲ್ಲಿ ▶ 6ನೇ ಪುಟಕ್ಕೆ

> "ಮೈಸೂರು ಜಿಲ್ಲೆಯಲ್ಲಿ ಮುಂಗಾರು ಕೊರತೆಯಿಂದಾಗಿ ಪ್ರಮುಖ ಆಹಾರ ಧಾನ್ಯಗಳಾದ ಭತ್ತ, ರಾಗಿ ಜೊತೆಗೆ ಹುರುಳಿ, ಅವರೆ, ಹತ್ತಿ ಸೇರಿದಂತೆ ಬಹುತೇಕ ಎಲ್ಲಾ ಬೆಳೆಗಳ ಬಿತ್ತನೆ ಗುರಿ ಸಾಧನೆ ಕಡಿಮೆಯಾಗಿದೆ. ಹಲವು ರೈತರು ಹತ್ತಿ ಬೆಳೆ ಕ್ಷೇತ್ರದಲ್ಲಿ ಮುಸುಕಿನ ಜೋಳ ಬಿತ್ತನೆ ಮಾಡಿರುವುದರಿಂದ ಈ ಬೆಳೆಯ ಬಿತ್ತನೆ ಶೇ.18ರಷ್ಟು ಹೆಚ್ಚಾಗಿದೆ.
>
> –ಕೆ.ಹೆಚ್.ರವಿ,
> ಜಂಟಿ ನಿರ್ದೇಶಕರು, ಕೃಷಿ ಇಲಾಖೆ

ಮಹದೇಶ್ವರ ಬೆಟ್ಟದಲ್ಲಿ ವೈಭವದ ದೀಪಾವಳಿ ಜಾತ್ರೆ

- ಮಾದಪ್ಪನಿಗೆ ಅದ್ದೂರಿ ಹಾಲರವಿ ಉತ್ಸವ
- 101 ಕಳಸ ಹೊತ್ತ ಬೇಡಗಂಪಣ ಸಮುದಾಯದ ಹೆಣ್ಣು ಮಕ್ಕಳು
- ಲಕ್ಷಾಂತರ ಭಕ್ತರು ಭಾಗಿ
- ಮೊಳಗಿದ ಉಘೇ ಮಾದಪ್ಪ ಉಘೇ ಘೋಷಣೆ



ಹನೂರು: ತಾಲೂಕಿನ ಪ್ರಸಿದ್ಧ ಯಾತ್ರಾ ಸ್ಥಳವಾದ ಶ್ರೀ ಮಲೆ ಮಹದೇಶ್ವರ ಬೆಟ್ಟದಲ್ಲಿ ದೀಪಾವಳಿ ಜಾತ್ರೆ ಆರಂಭವಾಗಿದ್ದು, ಮಂಗಳವಾರ ಅದ್ದೂರಿ ಹಾಲರವಿ ಉತ್ಸವ ನಡೆಯಿತು.

ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ಐದು ದಿನಗಳ ಕಾಲ ನಡೆಯುವ ಈ ಜಾತ್ರೆಯು ಭಾನುವಾರ ರಾತ್ರಿ ಆರಂಭವಾಗಿದ್ದು, 3ನೇ ದಿನವಾದ ಇಂದು (ಮಂಗಳವಾರ) ಬೇಡಗಂಪಣ ಸಮುದಾಯದ 101 ಕಳಸ ಹೊತ್ತ ಹೆಣ್ಣು ಮಕ್ಕಳು ತಂಬಡಿಗೇರಿ ಬೀದಿಯಿಂದ ದೇವಸ್ಥಾನದವರೆಗೆ ವಾದ್ಯಮೇಳಗಳೊಂದಿಗೆ ಸಾಗಿ, ದೇವಸ್ಥಾನಕ್ಕೆ ಬಂದು ಹಾಲರವಿಯನ್ನು ಸಮರ್ಪಿಸಿದರು. ▶ 6ನೇ ಪುಟಕ್ಕೆ

ಇಂದಿನಿಂದ ರಾಜ್ಯದಲ್ಲಿ 10 ದಿನ ಭಾರೀ ಮಳೆ

ಏಳು ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್



ಬೆಂಗಳೂರು, ಅ.21–ರಾಜ್ಯದಲ್ಲಿ ವರುಣಾರ್ಭಟ ಮುಂದುವರೆದಿದ್ದು ಮುಂದಿನ 10 ದಿನಗಳ ಕಾಲ ರಾಜ್ಯಾದ್ಯಂತ ಮಳೆ ಮುಂದುವರೆಯುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ. ರಾಜ್ಯದಲ್ಲಿ ಮಳೆ ಮತ್ತಷ್ಟು ದಿನ ಮುಂದುವರಿಯುವ ಸಾಧ್ಯತೆ ಇದ್ದು, ಮುಂದಿನ 10 ದಿನಗಳ ಕಾಲ ರಾಜ್ಯದಲ್ಲಿ ಮಳೆ ಮುಂದುವರೆಯಲಿದೆ. ಕರಾವಳಿ ಜಿಲ್ಲೆಗಳಲ್ಲಿ ವರುಣ ಅಬ್ಬರಿಸಲಿದ್ದು, ಚಾಮರಾಜನಗರದಲ್ಲೂ ಉತ್ತಮ ಮಳೆಯಾಗುವ ನಿರೀಕ್ಷೆ ಇದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ನಾಳೆ ಭಾರಿ ಮಳೆ ಸಾಧ್ಯತೆ: ಪ್ರಮುಖವಾಗಿ ನಾಳೆ ರಾಜ್ಯದಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇದ್ದು, 7 ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ಉಳಿದ 24 ಜಿಲ್ಲೆಗಳಲ್ಲಿಯೂ ಸಾಧಾರಣ ಮಳೆಯಾಗಲಿರುವ ಹಿನ್ನಲೆಯಲ್ಲಿ ಯೆಲ್ಲೋ ಅಲರ್ಟ್ ಇರಲಿದೆ. ದಕ್ಷಿಣ ಒಳನಾಡು ಭಾಗದಲ್ಲೂ ಮಳೆಯಾಗಲಿದ್ದು, ಚಿಕ್ಕಮಗಳೂರು, ಶಿವಮೊಗ್ಗ, ಕೊಡಗು, ಚಾಮರಾಜನಗರ ಮತ್ತು ಹಾಸನದಲ್ಲಿ ಆರೆಂಜ್ ಅಲರ್ಟ್ ಇರಲಿದೆ.

ಕರಾವಳಿಗೆ ಅಲರ್ಟ್: ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿಯಲ್ಲಿ ಭಾರಿ ಪ್ರಮಾಣದ ಮಳೆಯಾಗಲಿದ್ದು, ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ಮಳೆ ಜೊತೆ ಹೆಚ್ಚಿನ ಪ್ರಮಾಣದ ಗಾಳಿಯೂ ಬೀಸುವ ಸಾಧ್ಯತೆ ಹಿನ್ನಲೆ ಮುನ್ನೆಚ್ಚರಿಕೆಯಾಗಿ ಸಮುದ್ರಕ್ಕೆ ಇಳಿಯದಂತೆ ಮೀನುಗಾರರಿಗೆ ಸೂಚಿಸಲಾಗಿದೆ.

ಬೆಂಗಳೂರಲ್ಲಿ ನಾಳೆ ಗಾಳಿಸಹಿತ ಸಾಧಾರಣ ಮಳೆ ಮುನ್ಸೂಚನೆ ಇದೆ. ಶೇ.86ರಷ್ಟು ಮಳೆಯಾಗುವ ಸಾಧ್ಯತೆ ಇದ್ದು, ಗಾಳಿಯ ವೇಗ ಗಂಟೆಗೆ 11–20 ಕಿ.ಮೀ. ಇರಲಿದೆ. ನಗರದ ಗರಿಷ್ಠ ಉಷ್ಣಾಂಶ 24 ಡಿಗ್ರಿ ಸೆಲ್ಸಿಯಸ್, ಕನಿಷ್ಠ ಉಷ್ಣಾಂಶ 20 ಡಿಗ್ರಿ ಸೆಲ್ಸಿಯಸ್ ದಾಖಲಾಗಲಿದೆ. ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ತುಮಕೂರಲ್ಲಿ ಸಣ್ಣ ಪ್ರಮಾಣದ ಮಳೆಯಾಗಲಿದೆ ಎನ್ನಲಾಗಿದೆ.

ಮೈಸೂರು ಅರಸರಿಂದ ದೇವಿರಮ್ಮನಿಗೆ ಬಾಗಿನ



ಮೈಸೂರು, ಅ.21(ಬಿಎಲ್‌ಯು)– ಚಿಕ್ಕಮಗಳೂರಿನ ದೇವಿರಮ್ಮನ ಬೆಟ್ಟದ ಜಾತ್ರಾ ಮಹೋತ್ಸವದಲ್ಲಿ ಮೈಸೂರು ರಾಜವಂಶಸ್ಥರು ಮಂಗಳವಾರ ದೇವಿರಮ್ಮಗೆ ಬಾಗಿನ ಅರ್ಪಿಸಿದರು.

ದೇವಿರಮ್ಮ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಮೈಸೂರು ಅರಸರು ಅನಾದಿ ಕಾಲದಿಂದಲೂ ಬಾಗಿನ ಅರ್ಪಿಸುವ ಸಂಪ್ರದಾಯವನ್ನು ಅನುಸರಿಸಿಕೊಂಡು ಬಂದಿದ್ದಾರೆ. ಅದರಂತೆ ಮೈಸೂರು ಅರಸರ ಪರವಾಗಿ ದಿನೇಶ್ ಅವರು ದೇವಿಗೆ ಹಣ್ಣು, ಕಾಯಿ, ವಿಳ್ಯದೆಲೆ, ಸೀರೆ, ಅರಿಶಿನ, ಕುಂಕುಮ ಸೇರಿದಂತೆ ಹಲವು ವಸ್ತುಗಳಿರುವ ಬಾಗಿನವನ್ನು ಅರ್ಪಿಸಿದರು.

ರಾಕ್ಷಸನನ್ನು ಸಂಹಾರ ಮಾಡಿದ ಶಕ್ತಿ ದೇವತೆ ತಾಯಿ ಚಾಮುಂಡೇಶ್ವರಿ ಶಾಂತ ರೂಪ ತಾಳಿದ್ದು ಬಿಂಡಿಗಬೆಟ್ಟದಲ್ಲಿ ಎಂದು ಪುರಾಣ ಹೇಳುತ್ತದೆ. ಈ ಹಿನ್ನೆಲೆಯಲ್ಲಿ ಯದುವಂಶರ ಕುಲ ದೇವತೆಯಾದ ಚಾಮುಂಡೇಶ್ವರಿ ಹೆಸರಿನಲ್ಲಿ ಅರಸರು ಇಲ್ಲಿಯೂ ಬಾಗಿನ ಅರ್ಪಿಸುತ್ತಾರೆ. ಸುಮಾರು 70 ಸಾವಿರ ಭಕ್ತರು ಬರಿಗಾಲಿನಲ್ಲಿ ಬೆಟ್ಟ ಹತ್ತಿ ದೇವಿಯ ದರ್ಶನ ಪಡೆದಿದ್ದಾರೆ.

ಕುವೆಂಪು ವಿಶ್ವಮಾನವ ಸಂದೇಶ ಕುರಿತ ವಿಚಾರ ಸಂಕಿರಣ ಆಯೋಜನೆಗೆ ಮನವಿ



ದೆಹಲಿಯಲ್ಲಿ ರಾಷ್ಟ್ರಕವಿ ಕುವೆಂಪು ವಿಶ್ವಮಾನವ ಸಂದೇಶ ಕುರಿತ ವಿಚಾರ ಸಂಕಿರಣವನ್ನು ಆಯೋಜಿಸುವಂತೆ ಮನವಿ ಸಲ್ಲಿಸಲಾಯಿತು.

ಮೈಸೂರು, ಅ.21(ಎಂಕೆ)– ದೆಹಲಿಯಲ್ಲಿ ರಾಷ್ಟ್ರಕವಿ ಕುವೆಂಪು ವಿಶ್ವಮಾನವ ಸಂದೇಶ ಕುರಿತ ವಿಚಾರ ಸಂಕಿರಣವನ್ನು ಆಯೋಜಿಸುವಂತೆ ಡಾ.ನಿಶ್ಚಲಾನಂದ ನಾಥ ಸ್ವಾಮೀಜಿ ನೇತೃತ್ವದಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಸಿ.ಎಂ.ನಾಗರಾಜ್ ಅವರಿಗೆ ಮನವಿ ಸಲ್ಲಿಸಲಾಯಿತು.

ಡಿಸೆಂಬರ್, 12ರಂದು ರಾಷ್ಟ್ರಕವಿ ಕುವೆಂಪು ಅವರ ವಿಶ್ವಮಾನವ ಸಂದೇಶ ಕುರಿತು ವಿಚಾರ ಸಂಕಿರಣ ಏರ್ಪಡಿಸಬೇಕು. ಜೊತೆಗೆ ಕುವೆಂಪು ಅವರಿಗೆ ಮರಣೋತ್ತರ ಭಾರತರತ್ನ ಪ್ರಶಸ್ತಿ ನೀಡುವಂತೆ ಪ್ರಧಾನಿಗಳಿಗೆ ಒತ್ತಾಯಿಸಲು ತೀರ್ಮಾನಿಸಲಾಯಿತು.

ಹಾಗೆಯೇ ಕೇಂದ್ರ ಸಾಹಿತ್ಯ ಅಕಾಡೆಮಿ ಉಪಕಾರ್ಯದರ್ಶಿ ಡಾ.ಸುರೇಶ್ ಬಾಬು ಅವರನ್ನೂ ಬೇಟಿ ಮಾಡಿ, ದೆಹಲಿಯಲ್ಲಿ ವಾಸವಾಗಿರುವ ಅನ್ಯಭಾಷೆಗಳ ಲೇಖಕರು ಮತ್ತು ವಿದ್ವಾಂಸರನ್ನು ವಿಚಾರ ಸಂಕಿರಣದಲ್ಲಿ ಭಾಗವಹಿಸುವಂತೆ ವಿನಂತಿಸಲಾಯಿತು. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಮಾಜಿ ಅಧ್ಯಕ್ಷ ಹಾಗೂ ಮೈಸೂರು ಕುವೆಂಪು ವಿಶ್ವಮಾನವ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹೆಚ್.ಕೆ.ರಾಮು, ಮೈಸೂರು ವಿವಿ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಸಿ.ನಾಗಣ್ಣ, ಸರ್ಕಾರಿ ನೌಕರರ ಸಂಘದ ಮಾಜಿ ಕಾರ್ಯದರ್ಶಿ ಮಲ್ಲೇಶ್ ಅಣ್ಣೆಗೇರಿ ಉಪಸ್ಥಿತರಿದ್ದರು.

ಅ.25, ರಿಪಬ್ಲಿಕನ್ ಪಾರ್ಟಿಯ ಪದಾಧಿಕಾರಿಗಳ ಆಯ್ಕೆ

ಮೈಸೂರು,ಅ.21(ಜಿಎ)–ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದ ನೂತನ ಜಿಲ್ಲಾಧ್ಯಕ್ಷರ ಘೋಷಣೆ, ಪದಾಧಿಕಾರಿಗಳ ಆಯ್ಕೆ ಕಾರ್ಯಕ್ರಮವನ್ನು ಅ.25 ರಂದು ನಗರದ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ನಡೆಯಲಿದೆ ಎಂದು ರಾಜ್ಯಾಧ್ಯಕ್ಷ ಆರ್‌ಪಿಐ ಸತೀಶ್ ಹಾಸನ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 11 ಗಂಟೆಗೆ ನಗರದ ಎಫ್‌ಟಿಎಸ್ ವೃತ್ತದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಮೆರವಣಿಗೆ ಜಗನ್ಮೋಹನ ಅರಮನೆ ತಲುಪಿದ ಬಳಿಕ ವೇದಿಕೆ ಕಾರ್ಯಕ್ರಮ ಆರಂಭವಾಗಲಿದೆ, ಪದಾಧಿಕಾರಿಗಳನ್ನು ರಾಜ್ಯ ಕಾರ್ಯಾಧ್ಯಕ್ಷ ಡಾ.ಜಿ.ಗೋವಿಂದಯ್ಯ ಘೋಷಣೆ ಮಾಡಲಿದ್ದಾರೆ ಎಂದು ಹೇಳಿದರು.

ಪಕ್ಷದ ಎಲ್ಲ ನಾಯಕರು, ಯುವ ಘಟಕ, ಮಹಿಳಾ ಘಟಕದ ಮುಖಂಡರು ಆಗಮಿಸುತ್ತಿದ್ದಾರೆ. ಸುಮಾರು ಸಾವಿರ ಮಂದಿ ಸೇರುವ ನಿರೀಕ್ಷೆಯಿದೆ. ನಗರದಲ್ಲಿಯೂ ಪಕ್ಷ ಅಸ್ತಿತ್ವದಲ್ಲಿದ್ದು, ರಾಜ್ಯದಲ್ಲಿ ಇನ್ನಷ್ಟು ಬಲಾಢ್ಯಗೊಳಿಸುವ ಯತ್ನ ನಡೆದಿದೆ. ಈ ಮೂಲಕ ಮುಂದಿನ ವಿಧಾನಸಭಾ, ಲೋಕಸಭಾ ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳು ಆಯ್ಕೆಯಾಗಲು ಶ್ರಮಿಸಲಾಗುವುದು ಎಂದು ತಿಳಿಸಿದರು.

ಪದಾಧಿಕಾರಿ ಜಿ.ಸಿ.ವೆಂಕಟರಮಣಪ್ಪ ಮಾತನಾಡಿ, ಇದು ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಸ್ಥಾಪಿಸಿದ ಪಕ್ಷವಾಗಿದೆ. ತೆಲಂಗಾಣ, ಆಂಧ್ರ, ಕೇರಳ, ತಮಿಳುನಾಡುಗಳಿಂದಲೂ ಪಕ್ಷದ ಮುಖಂಡರು ಆಗಮಿಸಿ, ಅಂದಿನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಅಭಿಷೇಕ್, ಸುರೇಶ್, ರವಿಕುಮಾರ್, ಕಿರಣ್ ಮತ್ತಿತರರು ಉಪಸ್ಥಿತರಿದ್ದರು.

ವಿದ್ಯಾರ್ಥಿ ಮೇಲೆ ಶಿಕ್ಷಕನಿಂದ ಹಲ್ಲೆ; ನೊಂದು ಬಾಲಕ ಆತ್ಮಹತ್ಯೆ ಯತ್ನ



ಚಿತ್ರದುರ್ಗ: ವಿದ್ಯಾರ್ಥಿ ಮೇಲೆ ಹಲ್ಲೆ ನಡೆಸಿ ಮುಖ್ಯ ಶಿಕ್ಷಕ ಕ್ರೌರ್ಯ ಮೆರೆದಿರುವ ಘಟನೆ ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲೂಕಿನ ನಾಯಕನಹಟ್ಟಿ ಗ್ರಾಮದ ಸಂಸ್ಕೃತ ವೇದಾಧ್ಯಯನ ಶಾಲೆಯಲ್ಲಿ ನಡೆದಿದೆ. ಉತ್ತರ ಕರ್ನಾಟಕ ಮೂಲದ ವಿದ್ಯಾರ್ಥಿ ಮೇಲೆ ಮುಖ್ಯ ಶಿಕ್ಷಕ ವೀರೇಶ್ ಹಿರೇಮಠ್ ಮನಸೋ ಇಚ್ಛೆ ಹಲ್ಲೆ ನಡೆಸಿದ್ದ. ಈ ಕೇಸ್‌ಗೆ ಈಗ ಟ್ವಿಸ್ಟ್ ಸಿಕ್ಕಿದೆ. ಘಟನೆಯಿಂದ ನೊಂದ ಬಾಲಕ ಆತ್ಮಹತ್ಯೆಗೆ ಯತ್ನಿಸಿದ್ದ ಎಂಬ ವಿಚಾರವನ್ನು ಸ್ಥಳೀಯರು ಬಹಿರಂಗಪಡಿಸಿದ್ದಾರೆ.

ವಿದ್ಯಾರ್ಥಿ ಮೇಲೆ ಹಲ್ಲೆ ವಿಷಯ ತಿಳಿಯುತ್ತಿದ್ದಂತೆ ಸ್ಥಳೀಯರು ಸಂಸ್ಕೃತ ಪಾಠ ಶಾಲೆಗೆ ಮುತ್ತಿಗೆ ಹಾಕಿದ್ದು, ಇಓ ಗಂಗಾಧರಪ್ಪರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಶಿಕ್ಷಕ ವೀರೇಶ್‌ಗೆ ಸಂಸ್ಕೃತ ಬರಲ್ಲ, ಶಾಲೆಯಲ್ಲಿ ಇರಲ್ಲ. ಬದಲಾಗಿ ಪೂಜೆ, ವಾಮಾಚಾರ ಮಾಡಲು ಹೋಗುತ್ತಾನೆ. ಮಕ್ಕಳ ಮೇಲೆ ನಿರಂತರ ಕ್ರೌರ್ಯ ಮೆರೆಯುತ್ತಿದ್ದಾನೆಂದು ಆರೋಪಿಸಿದ್ದಾರೆ. ಫೆ10, 2025ರಂದು ಈ ಪ್ರಕರಣ ನಡೆದಿದ್ದು, ನೊಂದ ಬಾಲಕ ಕೆರೆ ಬಳಿಗೆ ತೆರಳಿ ಆತ್ಮಹತ್ಯೆಗೆ ಮುಂದಾಗಿದ್ದ. ಆಟೋದವನೊಬ್ಬ ಆತನನ್ನು ರಕ್ಷಿಸಿದ್ದಾನೆ. ಬಳಿಕ ಕೂಡ್ಲಗಿ ತಾಲೂಕಿನ ಅಪ್ಪೇನಹಳ್ಳಿಯಿಂದ ಅಜ್ಜಿ ಬಂದು ಮೊಮ್ಮಗನನ್ನು ಕರೆದೊಯ್ದಿದ್ದಾಳೆ. ಸದ್ಯ ಬಾಲಕ ಗುಡಿಕೋಟೆ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾನೆ. ಎಲ್ಲ ಸೇರಿ ಪ್ರಕರಣ ಹೊರಬರದಂತೆ ಮುಚ್ಚಿ ಹಾಕಿದ್ದಾರೆ ಎಂದು ಸ್ಥಳೀಯರು ದೂರಿದ್ದಾರೆ.

ಬಾಲಕನ ಮೇಲೆ ಹಲ್ಲೆ ಅಕ್ಷಮ್ಯ: ಘಟನೆ ಸಂಬಂಧ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಕೂಡ ಪ್ರತಿಕ್ರಿಯಿಸಿದ್ದಾರೆ. ಇದು ಖಾಸಗಿ ಸಂಸ್ಕೃತ ಶಾಲೆಯಾಗಿದ್ದು, ನಮ್ಮ ಇಲಾಖೆ ವ್ಯಾಪ್ತಿಗೆ ಬರುತ್ತದೆ. 9 ವರ್ಷದ ಬಾಲಕನ ಮೇಲೆ ಮುಖ್ಯ ಶಿಕ್ಷಕ ಹಲ್ಲೆ ಮಾಡಿದ್ದು ಅಕ್ಷಮ್ಯ. ಈ ಸಂಬಂಧ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಬೇರೆ ಬೇರೆ ಶಾಲೆಗಳಿಂದ ಯಾವುದೇ ದೂರು ಬರದಿದ್ದರೂ ಎಲ್ಲ ಸಂಸ್ಕೃತ ಶಾಲೆಗಳ ಬಗ್ಗೆ ಗಮನಹರಿಸಲು ಹೇಳಿದ್ದೇವೆ ಎಂದಿದ್ದಾರೆ.

ನಮ್ಮ ಮನೆಯಂತೆ ನಗರದ ಸ್ವಚ್ಛತೆ ಅರಿವು ಎಲ್ಲರಲ್ಲೂ ಇರಬೇಕು

ಮೈಸೂರು ಮಹಾನಗರಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸೀಫ್ ಸಲಹೆ

● ನಮ್ಮ ಕಸ ನಾವೇ ವಿಲೇವಾರಿ ಮಾಡಬೇಕು ● ಕಸ ಸಂಗ್ರಹವನ್ನು ಪೌರಕಾರ್ಮಿಕರೊಬ್ಬರ ಹೆಗಲ ಮೇಲೆ ಹಾಕಬೇಡಿ ● ಸ್ವಚ್ಛ ಸರ್ವೇಕ್ಷಣಾ ಪೈಪೋಟಿಯಲ್ಲಿ ದೇಶದ 76 ನಗರ ಭಾಗಿ ● ರೆಡ್ಯೂಸ್, ರಿಸೈಕಲ್, ರೀಯೂಸ್ ಮಾಡೆಲ್ ಅನುಸರಿಸಿ ● ನಗರಾದ್ಯಂತ ಕಸ ಸಂಗ್ರಹಕ್ಕೆ 350 ತ್ರಿಚಕ್ರ ವಾಹನಗಳಿವೆ



ಸ್ವಚ್ಛತೆಯಲ್ಲಿ ಮೈಸೂರು ಪಾಲಿಕೆ ದೇಶದಲ್ಲೇ 3ನೇ ಸ್ಥಾನ ಪಡೆಯಲು ಕಾರಣಕರ್ತರಾದ ಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸೀಫ್, ಅಂತಾರಾಷ್ಟ್ರೀಯ ಬಾಸ್ಕೆಟ್‌ಬಾಲ್ ಆಟಗಾರ್ತಿ ಶ್ರಾವಣಿ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಅ.21(ಬಿಎಲ್‌ಯು)– ನಮ್ಮ ನಮ್ಮ ಮನೆಯಂತೆ ನಗರವೂ ಕೂಡ ಸ್ವಚ್ಛವಾಗಿರಬೇಕೆಂಬ ಮನೋಭಾವ ಹೊಂದಬೇಕೆಂದು ಮೈಸೂರು ನಗರಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸೀಫ್ ಕಿವಿಮಾತು ಹೇಳಿದರು.

ಮೈಸೂರು ನಗರ ಪಾಲಿಕೆಯ ಕೌನ್ಸಿಲ್ ಸಭಾಂಗಣದಲ್ಲಿ ಸ್ವಚ್ಛತೆಯಲ್ಲಿ ಮೈಸೂರು 3ನೇ ಸ್ಥಾನ ಪಡೆದಿರುವ ಹಿನ್ನೆಲೆಯಲ್ಲಿ ನಗರದ ಹಲವು ಸಂಘ ಸಂಸ್ಥೆಗಳಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಮೈಸೂರು ಸ್ವಚ್ಛತೆಯಲ್ಲಿ ದೇಶದಲ್ಲೆ 3 ನೇ ಸ್ಥಾನ ಪಡೆಯಲು ಪೌರ ಕಾರ್ಮಿಕರು ಸೇರಿದಂತೆ ನಗರ ಪಾಲಿಕೆ ಸಿಬ್ಬಂದಿಯ ಪರಿಶ್ರಮ ಮುಖ್ಯವಾಗಿದೆ.

ತಾವು ಎಸೆಯುವ ಕಸ ಬೇರೆಯವರೂ ಎಸೆಯುತ್ತಾರೆ ಎಂಬ ಜವಾಬ್ದಾರಿಯಿಂದ ನುಣಚಿಕೊಳ್ಳುವ ರೀತಿಯದ್ದಾಗಿರಬಾರದು. ತಾವು ಬೀಸಾಡುವ ಕಸವನ್ನು ತಾವೇ ವಿಲೇವಾರಿ ಮಾಡುವ ಮನೋಭಾವ ಹೊಂದಬೇಕು. ಈ ಮೂಲಕ ನಮ್ಮ ಮನೆಯಲ್ಲಿರುವ ಸ್ವಚ್ಛೆಯ ವಾತಾವರಣ ಇಡೀ ನಗರದಲ್ಲಿರಬೇಕೆಂಬ ಬದ್ಧತೆ ಹೊಂದಬೇಕು ಎಂದು ಷೇಕ್ ತನ್ವೀರ್ ಆಸೀಫ್ ತಿಳಿಸಿದರು.

ಮೈಸೂರು ನಗರಪಾಲಿಕೆ ವ್ಯಾಪ್ತಿಯಲ್ಲಿ ಮನೆ ಮನೆಗೆ ಬಂದು ಕಸ ಸಂಗ್ರಹಿಸಲು 350 ತ್ರಿಚಕ್ರ ವಾಹನಗಳಿವೆ. ರಿಪೇರಿ ಸೇರಿದಂತೆ ಏನಾದರೊಂದು ಕಾರಣಕ್ಕೆ ತ್ರಿಚಕ್ರ ವಾಹನ ಬರದಿದ್ದರೆ ಅಂದು ಕಸ ಹೊರಗೆ ಎಸೆಯಬಾರದು. ಅದನ್ನು ಸಂಗ್ರಹಿಸಿಟ್ಟುಕೊಂಡು ಮಾರನೆ ದಿನ ನೀಡಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಹಸಿ ಕಸ, ಒಣ ಕಸ ಎಂದು ಬೇರ್ಪಡಿಸಿ ನೀಡಬೇಕು. ಆಗ ವೈಜ್ಞಾನಿಕ ರೀತಿಯಲ್ಲಿ ಕಸ ವಿಲೇವಾರಿ ಮಾಡಲು ಸಾಧ್ಯವಾಗುತ್ತದೆ. ಈ ಮೂಲಕ ಆರ್ ಆರ್ ಆರ್ (ರೆಡ್ಯೂಸ್, ರಿಸೈಕಲ್, ರೀಯೂಸ್) ಮಾದರಿಯಲ್ಲಿ ಕಸ ವಿಲೇವಾರಿ ಮಾಡಬೇಕು ಎಂದು ತಿಳಿಸಿದರು.

ಒಂದು ದಿನ ಪೌರಕಾರ್ಮಿಕರು ಕೆಲಸಕ್ಕೆ ಗೈರಾದರೆ ನಗರದಲ್ಲಿ ಯಾವ ರೀತಿ ಪರಿಸ್ಥಿತಿ ಇರುತ್ತದೆ ಎಂದು ಅರಿಯಬೇಕು. ಕಸ ವಿಲೇವಾರಿ ಪೌರಕಾರ್ಮಿಕರು ಮಾತ್ರ ಮಾಡುವ ಕೆಲಸ ಎಂದು ಭಾವಿಸದೆ ಅಲ್ಲಿ ಬಿದ್ದ ಕಸವನ್ನು ಅಲ್ಲೆ ವಿಲೇವಾರಿ ಮಾಡಬೇಕು. ಈ ಮೂಲಕ ನಗರವನ್ನು ಸ್ವಚ್ಛವಾಗಿಟ್ಟುಕೊಳ್ಳಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಸ್ವಚ್ಛ ಸರ್ವೇಕ್ಷಣೆಗೆ ಕೇಂದ್ರ ತಂಡ ಆಗಮಿಸಿದಾಗ ಮೈಸೂರು ನಗರ ಪಾಲಿಕೆ ಅಧಿಕಾರಿ ಹಾಗೂ ಸಿಬ್ಬಂದಿ ಮುಂಜಾನೆ 6 ಗಂಟೆಯಿಂದ ರಾತ್ರಿ 12 ಗಂಟೆವರೆಗೆ ಕೆಲಸ ಮಾಡುತ್ತಾರೆ. ಈ ಮೊದಲು ಸ್ವಚ್ಛತೆಯಲ್ಲಿ ಅಗ್ರಸ್ಥಾನ ಪಡೆದ ಮೈಸೂರು ಪಾಲಿಕೆ ಈಗ 3ನೇ ಸ್ಥಾನಕ್ಕೆ ಕುಸಿದಿದೆ. ಆದರೆ ಈ ವರ್ಷ ಮೊದಲ ಸ್ಥಾನ ಪಡೆಯುವುದು ನಮ್ಮ ಗುರಿ ಮತ್ತು ಸವಾಲಾಗಿದೆ.

ಸ್ವಚ್ಛ ಸರ್ವೇಕ್ಷಣೆಯಲ್ಲಿ ಈ ಮೊದಲು ಬೆರಳಣಿಕೆಯಷ್ಟು ನಗರಗಳು ಮಾತ್ರ ಭಾಗಿಯಾಗಿರುತ್ತಿದ್ದವು. ಆದರೆ ಈಗ ದೇಶದ 76 ನಗರಗಳು ಭಾಗಿಯಾಗಿವೆ. ಇಷ್ಟು ನಗರವನ್ನು ನಾವು ಹಿಂದಿಕ್ಕಿ ಮೊದಲ ಸ್ಥಾನಕ್ಕೆ ಬರಲೇಬೇಕು. ಇದಕ್ಕೆ ನಗರ ಪಾಲಿಕೆಯ ಜೊತೆಗೆ ನಾಗರಿಕರು ಹಾಗೂ ಸಂಘ ಸಂಸ್ಥೆಗಳ ಪಾತ್ರ ಬಹುಮುಖ್ಯವಾಗುತ್ತದೆ ಎಂದು ಕೋರಿದರು. ಷೇಕ್ ತನ್ವೀರ್ ಆಸೀಫ್ ಜೊತೆಗೆ ಅಂತಾರಾಷ್ಟ್ರೀಯ ಬಾಸ್ಕೆಟ್ ಬಾಲ್ ಆಟಗಾರ್ತಿ ಶ್ರಾವಣಿ ಅವರಿಗೆ ಮೈಸೂರು ಪೇಟ ತೊಡಿಸಿ ಸನ್ಮಾನಿಸಲಾಯಿತು. ಸಭೆಯಲ್ಲಿ ನಗರ ಪಾಲಿಕೆ ಆರೋಗ್ಯಾಧಿಕಾರಿ ಡಾ.ವೆಂಕಟೇಶ್, ಮಾಜಿ ಮೇಯರ್ ಭೈರಪ್ಪ, ಮಾಜಿ ಕಾರ್ಪೋರೇಟರ್ ಮಲ್ಲೇಶ್, ನಗರದ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಇಂದೋರ್ ಮಾದರಿಯಲ್ಲಿ ಮೈಸೂರು ನಂ.1 ಆಗಬೇಕು

ಮಧ್ಯಪ್ರದೇಶದ ಇಂದೋರ್ ಮಾದರಿಯಲ್ಲಿ ಸ್ವಚ್ಛತೆ ಕಾಪಾಡಿಕೊಂಡು ಮೈಸೂರು ಸ್ವಚ್ಛತೆಯಲ್ಲಿ ದೇಶದಲ್ಲೆ ಅಗ್ರಸ್ಥಾನ ಪಡೆಯಬೇಕು ಎಂದು ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ಸಲಹೆ ನೀಡಿದರು.

ಮೈಸೂರು 3ನೇ ಸ್ಥಾನ ಪಡೆಯಲು ಪೌರಕಾರ್ಮಿಕರ ಶ್ರಮ ತುಂಬಾ ಇದೆ. ಆದರೆ ಸ್ವಚ್ಛ ಸರ್ವೇಕ್ಷಣಾ ತಂಡ ಮೈಸೂರಿಗೆ ಬರುವ ಮುನ್ನ ನಗರ ಪಾಲಿಕೆ ಆಯುಕ್ತರು ವರ್ಷ ಪೂರ್ತಿ ಹಲವು ಕಾರ್ಯಕ್ರಮ ರೂಪಿಸಿರುತ್ತಾರೆ. ಇದರ ಫಲವಾಗಿ ಸ್ವಚ್ಛತೆಯಲ್ಲಿ ಅತ್ಯುತ್ತಮ ಸ್ಥಾನ ಪಡೆಯುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ಪಾಲಿಕೆ ಆಯುಕ್ತ ಷೇಕ್ ತನ್ವೀರ್ ಆಸೀಫ್ ಅವರನ್ನು ಅಭಿನಂದಿಸಿದ್ದೇವೆ ಎಂದರು.

ಒಳಚರಂಡಿ, ವಿಶಾಲ ರಸ್ತೆ, ಅಗತ್ಯ ಉದ್ಯಾನವನ, ಸ್ಮಶಾನ, ಕಸ ವಿಲೇವಾರಿ ಘಟಕ ಸೇರಿದಂತೆ ಅಚ್ಚುಕಟ್ಟಾದ ವ್ಯವಸ್ಥೆಯನ್ನು ಮೈಸೂರು ಮಹಾರಾಜರು ಮಾಡಿದ್ದಾರೆ. ಈಗ ನಾವು ಇದನ್ನು ಕಾಪಾಡಿಕೊಂಡು ಹೋಗಬೇಕಷ್ಟೆ.

ಸ್ವಚ್ಛ ಸರ್ವೇಕ್ಷಣೆಯ ರ್‍ಯಾಂಕಿಂಗ್‌ನಲ್ಲಿ ಇಳಿಯುವ ಬದಲು ಮೇಲ್ಮುಖವಾಗಿ ಸಾಗಿ ಅಗ್ರಸ್ಥಾನ ಪಡೆಯಬೇಕು. ಈ ನಿಟ್ಟಿನಲ್ಲಿ ನಾಗರಿಕರು ಹಾಗೂ ಸಂಘ ಸಂಸ್ಥೆಗಳು ನಗರ ಪಾಲಿಕೆ ಜೊತೆಗೆ ಕೈಜೋಡಿಸಬೇಕು ಎಂದು ರಾಜೀವ್ ಮನವಿ ಮಾಡಿದರು.

ದೀಪಾವಳಿ ಸಂಭ್ರಮದಲ್ಲಿ ಅವಘಡ: ಬೆಂಗ್ಳೂರಲ್ಲಿ 68 ಮಂದಿ ಕಣ್ಣಿಗೆ ಗಾಯ

ಬೆಂಗಳೂರು: ಬೆಳಕಿನ ಹಬ್ಬ ದೀಪಾವಳಿ ಸಂಭ್ರಮ ಒಂದಡೆಯಾದರೆ, ಪಟಾಕಿ ಹಚ್ಚೋಕೆ ಹೋಗಿ, ಬೇರೆಯವರು ಸಿಡಿಸಿದ ಪಟಾಕಿ ಕಿಡಿ ಕಣ್ಣಿಗೆ ತಾಕಿ ಹಲವರ ಬದುಕು ಕತ್ತಲಾಗಿದೆ. ಕಳೆದೆರಡು ದಿನದಿಂದ ಬೆಂಗಳೂರಿನ ಮಿಂಟೋ ಆಸ್ಪತ್ರೆಯಲ್ಲಿ 25 ಜನ ಪಟಾಕಿ ಸಿಡಿದು ಕಣ್ಣಿಗೆ ಹಾನಿಯಾಗಿ ದಾಖಲಾಗಿದ್ದಾರೆ. ನಾರಾಯಣ ನೇತ್ರಾಲಯದಲ್ಲಿ 43 ಜನ ಪಟಾಕಿ ಸಿಡಿತದಿಂದ ಗಾಯಗೊಂಡು ಚಿಕಿತ್ಸೆ ಪಡೆದಿದ್ದಾರೆ. ಮೂರು ಜನರಿಗೆ ಶಸ್ತ್ರಚಿಕಿತ್ಸೆ ಮಾಡಲಾಗಿದೆ. ಮಿಂಟೋ ಆಸ್ಪತ್ರೆಯಲ್ಲಿ ದಾಖಲಾದ ನಾಲ್ಕು ಜನರಿಗೆ ಗಂಭೀರವಾಗಿ ಕಣ್ಣಿನ ಭಾಗಕ್ಕೆ ಗಾಯವಾಗಿದೆ. ಬಿಹಾರ ಮೂಲದ 16 ವರ್ಷದ ಬಾಲಕ ಪಟಾಕಿ ಸಿಡಿದು ದೃಷ್ಟಿ ಕಳೆದುಕೊಂಡಿದ್ದಾನೆ. 18 ವರ್ಷದ ಯುವಕನೊಬ್ಬ ಕುಡಿದು ಪಟಾಕಿ ಹಚ್ಚಲು ಹೋಗಿ, ಹಚ್ಚುತ್ತಿದ್ದ ವೇಳೆಯಲ್ಲಿಯೇ ಸ್ಫೋಟಗೊಂಡು ಕಣ್ಣಿಗೆ ಗಂಭೀರವಾಗಿ ಹಾನಿಯಾಗಿದೆ. 10 ವರ್ಷದ ಬಾಲಕನ ಮುಖದ ಬಳಿಯೇ ಪಟಾಕಿ ಸ್ಫೋಟಗೊಂಡು ಕಣ್ಣಿನ ರೆಪ್ಪೆ ಸುಟ್ಟುಹೋಗಿದೆ. ಇದರಿಂದ ದೃಷ್ಟಿ ಸಮಸ್ಯೆ ಎದುರಾಗಿದೆ. ಗಾಯಾಳುಗಳಿಗೆ ನಾರಾಯಣ ನೇತ್ರಾಲಯದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಇಂದು (ಅ.21) ಮಿಂಟೋ ಆಸ್ಪತ್ರೆಗೆ ಇಲ್ಲಿಯವರೆಗೂ, ಇಬ್ಬರು ಯುವಕರು, ಓರ್ವ ಯುವತಿ, ಒಂದು ಗಂಡು ಮಗುವನ್ನು ದಾಖಲಿಸಲಾಗಿದೆ. ಇದರಲ್ಲಿ ಎರಡು ಗಂಭೀರ, ಎರಡು ಸಾಧಾರಣ ಗಾಯಗಳಾಗಿವೆ. ಮೊದಲ ದಿನದಿಂದ ಇಲ್ಲಿ ತನಕ 17 ಜನರಿಗೆ ಹೆಚ್ಚಿನ ಗಾಯವಾಗಿದೆ ಎಂದು ತಿಳಿದು ಬಂದಿದೆ.



ಇಂಡಿಯನ್ ಫಾರ್ಮಾಸ್ಯುಟಿಕಲ್ ಅಸೋಸಿಯೇಷನ್, ಮೈಸೂರು ಸ್ಥಳೀಯ ಶಾಖೆ, ಜೆಎಸ್‌ಎಸ್ ಫಾರ್ಮಸಿ ಕಾಲೇಜು, ಕರ್ನಾಟಕ ಕ್ಯಾನ್ಸರ್ ಸೊಸೈಟಿ, ಮಹಾರಾಜ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಆಂತರಿಕ ದೂರು ಸಮಿತಿ, ಜೆಎಸ್‌ಎಸ್ ಆಸ್ಪತ್ರೆ ಸಹಯೋಗದೊಂದಿಗೆ ಬೆಳವಾಡಿಯ ಎಂಐಟಿ ಕ್ಯಾಂಪಸ್‌ನಲ್ಲಿ ಉಚಿತ ಗರ್ಭಕಂಠ ಮತ್ತು ಸ್ತನ ಕ್ಯಾನ್ಸರ್ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

22.10.2025 ಬುಧವಾರ, ಮಳೆ ನಕ್ಷತ್ರ: ಚಿತ್ತ 11.10.2025 ರಿಂದ 23.10.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಿನಿ ಮಾಸ, ಶುಕ್ಲ ಪಕ್ಷ,
ತಿಥಿ: ಪಾಡ್ಯ, ನಕ್ಷತ್ರ: ಸ್ವಾತಿ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಲಕ್ವ/ಪ್ಯಾರಾಲಿಸಿಸ್, ಕಾರ್ನಿಯಾದ ಅಪಾರದರ್ಶಕತೆ/ಕಣ್ಣಿನ ಹೂ (ಕಾರ್ನಿಯಲ್ ಒಪೇಸಿಟಿ)ಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ.
■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಹಿಳಾ ಮಾನಸಿಕ ಆರೋಗ್ಯ ಮತ್ತು ಭಾವನಾತ್ಮಕ ಸ್ವ–ಆರೈಕೆ ಶಿಬಿರ, ಗರ್ಭಸಂಸ್ಕಾರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.
■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.
■ **ಅನ್ನಪೂರ್ಣ ಕಣ್ಣಿನ ಆಸ್ಪತ್ರೆ:** ದೀಪಾವಳಿ ಪ್ರಯುಕ್ತ ಹಿರಿಯ ನಾಗರಿಕರಿಗೆ ಉಚಿತ ಕಣ್ಣಿನ ತಪಾಸಣಾ ಶಿಬಿರ, ಸ್ಥಳ: ಅನ್ನಪೂರ್ಣ ಕಣ್ಣಿನ ಆಸ್ಪತ್ರೆ, ಶಾರದಾದೇವಿನಗರ, ಬೆಳಗ್ಗೆ 10ರಿಂದ ಸಂಜೆ 6ರವರೆಗೆ
■ **ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನ, ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆ :** ಸ್ವಾತಿ ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ, ಬೆಳಿಗ್ಗೆ 8ಕ್ಕೆ ಸಂಕಲ್ಪ, 9ಕ್ಕೆ ಅಭಿಷೇಕ, 10.30ಕ್ಕೆ ಅಲಂಕಾರ, 11.30ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 12.30ಕ್ಕೆ ಶಾತ್ತುಮೊರೈ, 1 ಗಂಟೆಗೆ ತೀರ್ಥ ಪ್ರಸಾದ ವಿನಿಯೋಗ, ಸಂಜೆ 7.30ಕ್ಕೆ ಪ್ರಾಕಾರೋತ್ಸವ, ಸ್ಥಳ: ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನ, ಕಾಳಿದಾಸ ರಸ್ತೆ.


ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಭಾವ ಸೇತು–ಭಾಷೆ ಬದಲಾದರು ಭಾವ ಬದಲಾಗದಿರಲಿ ಬಾನುಲಿ ಸರಣಿ, ಪ್ರಸ್ತುತಿ–ಸಿ.ಎಸ್. ಪೂರ್ಣಿಮಾ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರೀ ಹಾಗೂ ಜಿ.ಪುಷ್ಪಲತಾ, ವ್ಯಾಖ್ಯಾನ–ಕೆ.ಎಲ್. ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ರತ್ನಮಾಲಾ ಪ್ರಕಾಶ್, 8.30 ಚಿತ್ರಗೀತೆಗಳು, 9.05 ರೇಷ್ಮೆ ಸಿರಿ, 9.20 ಸ್ತನ ಕ್ಯಾನ್ಸರ್ ಕುರಿತು ಜಾಗೃತಿ–ಪ್ರಾಯೋಜಿತ ಕಾರ್ಯಕ್ರಮ, 9.25 ವೃತ್ತಿ ಮಾರ್ಗದರ್ಶನ –ಭೌತಶಾಸ್ತ್ರ ಅಂದರೆ ಫಿಸಿಕ್ಸ್ ವಿಷಯದಲ್ಲಿ ಇರುವ ಅಧ್ಯಯನ, ಸಂಶೋಧನೆ ಮತ್ತು ವೃತ್ತಿಪರ ಅವಕಾಶಗಳು ಕುರಿತು ಮೈಸೂರಿನ ಮಹಾರಾಣಿ ಮಹಿಳಾ ಕಾಲೇಜಿನ ಸ್ನಾತಕೋತ್ತರ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರು ಹಾಗೂ ಡೀನ್ ಅಕಾಡೆಮಿಕ್ಸ್ ಡಾ.ಎಚ್.ಆರ್.ಶ್ರೀಪಾದ್ ಅವರೊಂದಿಗೆ ಮಾತುಕತೆ ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಪಂಡಿತ್ ಶಿವಕುಮಾರ್ ಶರ್ಮಾ–ಸಂತೂರ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು–ಪಿ.ಎಸ್. ರಂಜನಿ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಚಂದನ ಬಾಲ– ಹಾಡುಗಾರಿಕೆ, 4.00 ಮಹಿಳಾ ರಂಗ–ಮೈಸೂರಿನ ಸದ್ಗುರು ಕಲಾತಂಡದವರಿಂದ ದೀಪಾವಳಿ ಹಬ್ಬ ಕುರಿತು ಕಾರ್ಯಕ್ರಮ ವೈವಿಧ್ಯ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, ಪ್ರಸ್ತುತಿ –ಶಾಂತಾಕಿಣಿ, 6.50 ಕೃಷಿರಂಗ–ಕೃಷಿಯಲ್ಲಿ ಕೃತಕ ಬುದ್ಧಿಮತ್ತೆಯ ಬಳಕೆ ಈ ಕುರಿತು ಮಂಡ್ಯ ಜಿಲ್ಲೆ, ವಿ.ಸಿ. ಫಾರಂ, ಕೃಷಿ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ. ಸದಾನಂದ ರಾಮಚಂದ್ರ ಇನಾಂದಾರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್. ಕೇಶವಮೂರ್ತಿ, 7.35 ಕನ್ನಡದಲ್ಲಿ ವಾರ್ತೆಗಳು, 7.45 ಕನ್ನಡ ಚಿತ್ರಗೀತೆಗಳು, 8.00 ವಿಶೇಷ ಕಾರ್ಯಕ್ರಮ ಸರಣಿ ಆಕಾಶವಾಣಿ 90–ನೆನಪುಗಳ ಹೊತ್ತು ತೊಂಬತ್ತರ ಹರೆಯದ ಹಿರಿಯ ರಂಗಕರ್ಮಿ ಶ್ರೀಮತಿ ಹರಿಪ್ರಸಾದ್ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಉಮೇಶ್ ಎಸ್. ಎಸ್., 8.30 ಹಿಂದಿ ಚಿತ್ರಗೀತೆಗಳು, 9.30 ಕ್ರೀಡಾಲೋಕ, 10.00 ಜನಪದ ಸಂಗೀತ, 10.30 ಸವಿನೆನಪು

ಮೈಸೂರು ಹಾಗೂ ಸುತ್ತಮುತ್ತ ನಾಳೆ...




ನಾಳಿನ ಪಂಚಾಂಗ

23.10.2025 ಗುರುವಾರ, ಮಳೆ ನಕ್ಷತ್ರ: ಚಿತ್ತ 11.10.2025ರಿಂದ 23.10.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಿನಿ ಮಾಸ, ಶುಕ್ಲ ಪಕ್ಷ,
ತಿಥಿ: ಬಿದಿಗೆ, ನಕ್ಷತ್ರ: ವಿಶಾಖ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಲಕ್ವ/ಪ್ಯಾರಾಲಿಸಿಸ್, ಕಾರ್ನಿಯಾದ ಅಪಾರದರ್ಶಕತೆ/ಕಣ್ಣಿನ ಹೂ (ಕಾರ್ನಿಯಲ್ ಒಪೇಸಿಟಿ)ಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ.
■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಹಿಳಾ ಮಾನಸಿಕ ಆರೋಗ್ಯ ಮತ್ತು ಭಾವನಾತ್ಮಕ ಸ್ವ–ಆರೈಕೆ ಶಿಬಿರ, ಗರ್ಭಸಂಸ್ಕಾರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.
■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.
■ **ಅನ್ನಪೂರ್ಣ ಕಣ್ಣಿನ ಆಸ್ಪತ್ರೆ :** ದೀಪಾವಳಿ ಹಬ್ಬದ ಪ್ರಯುಕ್ತ ಹಿರಿಯ ನಾಗರಿಕರಿಗೆ ಉಚಿತ ಕಣ್ಣಿನ ತಪಾಸಣಾ ಶಿಬಿರ, ಸ್ಥಳ: ಅನ್ನಪೂರ್ಣ ಕಣ್ಣಿನ ಆಸ್ಪತ್ರೆ, ಶಾರದಾದೇವಿನಗರ, ಬೆಳಗ್ಗೆ 10 ರಿಂದ ಸಂಜೆ 6 ರವರೆಗೆ
■ **ಅಮೃತಾಂಶು ಟ್ರಸ್ಟ್, ಮಣಿಪಾಲ್ ಆಸ್ಪತ್ರೆ, ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆ :** ಕಣ್ಣಿನ ತಪಾಸಣೆ ಮತ್ತು ಶಸ್ತ್ರ ಚಿಕಿತ್ಸಾ ಶಿಬಿರ, ಸ್ಥಳ: ಮೇದರಕೇರಿ 5ನೇ ಮೇನ್, ಚಾಮುಂಡಿಪುರಂ, ಬೆಳಗ್ಗೆ 10 ರಿಂದ.
■ **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಹೆಣ್ಣು ಮನಸು ಮಾಡಿದರೆ ಸಾಧಕ ಮಹಿಳೆಯರ ಪರಿಚಯ ಮಾಲಿಕೆ, ಪ್ರಸ್ತುತಿ : ಪ್ರೊಫೆಸರ್. ಸಿ.ನಾಗಣ್ಣ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಜಿ. ಪುಷ್ಪಲತಾ, ವ್ಯಾಖ್ಯಾನ–ಡಾ. ಬಿ.ವಿ. ವಸಂತಕುಮಾರ್, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು, 8.30 ಕನ್ನಡ ಚಿತ್ರಗೀತೆಗಳು, 9.05 ಸ್ತನ ಕ್ಯಾನ್ಸರ್ ಕುರಿತು ಜಾಗೃತಿ – ಪ್ರಾಯೋಜಿತ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಓ.ಎಸ್. ಅರುಣ್ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಾಡಿನಲ್ಲಿನ ಕಥೆಗಳು, ಪ್ರಸ್ತುತಿ : ಜಿ. ಶಾಂತಕುಮಾರ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಭಾರತ ಹಾಗೂ ನ್ಯೂಜಿಲೆಂಡ್ ತಂಡಗಳ ನಡುವೆ ಡಾ. ಡಿ.ವೈ. ಪಾಟೀಲ್ ಸ್ಪೋರ್ಟ್ಸ್ ಅಕಾಡೆಮಿ ನವಿ, ಮುಂಬೈ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯುವ ಐಸಿಸಿ ವಿಶ್ವಕಪ್ ಮಹಿಳಾ ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ

ಕಂಠ ಪೂರ್ತಿ ಕುಡಿದು ಬಿಲ್ ಪಾವತಿಸುವಂತೆ ರೌಡಿ ಶೀಟರ್ ಧಮ್ಕಿ

ಹಣ ಪಾವತಿಸದ ರಿಯಲ್ ಎಸ್ಟೇಟ್ ಏಜೆಂಟ್‌ಗೆ ಚಾಕು ಇರಿತ

ಮೈಸೂರು, ಅ.21(ಬಿಎಲ್‌ಯು)– ಬಾರ್ ನಲ್ಲಿ ಕಂಠ ಪೂರ್ತಿ ಕುಡಿದು ಬಿಲ್ ಪಾವತಿ ಮಾಡುವಂತೆ ಅವಾಜ್ ಹಾಕಿದ ರೌಡಿ ಶೀಟರ್ ಹಣ ನೀಡದ ರಿಯಲ್ ಎಸ್ಟೇಟ್ ಏಜೆಂಟ್‌ಗೆ ಚಾಕುವಿನಿಂದ ಇರಿದಿರುವ ಘಟನೆ ಮೈಸೂರಿನ ವಿಜಯನಗರದಲ್ಲಿ ಸಂಭವಿಸಿದೆ.



ವಿಜಯನಗರದ ರಿಯಲ್ ಎಸ್ಟೇಟ್ ಏಜೆಂಟ್ ಗುರು ಪ್ರಸಾದ್ ಚಾಕು ಇರಿತಕ್ಕೊಳಗಾದ ವ್ಯಕ್ತಿಯಾಗಿದ್ದಾರೆ. ಗುರುಪ್ರಸಾದ್ ಸ್ನೇಹಿತರೊಡನೆ ಭಾನುವಾರ ಬಾರ್‌ವೊಂದಕ್ಕೆ ಹೋಗಿದ್ದಾರೆ. ಈ ವೇಳೆ ಕಂಠ ಪೂರ್ತಿ ಕುಡಿದ ರೌಡಿಶೀಟರ್ ಕೌಶಿಕ್, ದೇವರಾಜ್ ಹಾಗೂ ಇತರರು ಅಲ್ಲೆ ಇದ್ದ ಗುರು ಪ್ರಸಾದ್‌ಗೆ ತಮ್ಮ ಬಿಲ್ ಸಹ ಪಾವತಿ ಮಾಡುವಂತೆ ತಾಕೀತು ಮಾಡಿದ್ದಾರೆ.ಇದಕ್ಕೆ ಗುರುಪ್ರಸಾದ್ ಒಪ್ಪದಿದ್ದಾಗ ನಾನ್ಯಾರು ಗೊತ್ತೇನೊ ಎಂದು ಧಮ್ಕಿ ಹಾಕಿದ್ದಾನೆ. ಆ ವೇಳೆ ಕೌಶಿಕ್ ಹಾಗೂ ಇತರರಿಂದ ಗುರು ಪ್ರಸಾದ್ ಹೇಗೋ ಎಸ್ಕೇಪ್ ಆಗಿದ್ದಾರೆ.


ಸಂಜೆ ಮತ್ತೆ ಅದೇ ಬಾರ್‌ಗೆ ಸ್ನೇಹಿತರ ಜೊತೆ ಹೋದ ಗುರುಪ್ರಸಾದ್‌ಗೆ ಕೌಶಿಕ್ ಎದುರಾಗಿದ್ದಾನೆ. ಮಧ್ಯಾಹ್ನ ಬಿಲ್ ಕಟ್ಟು ಅಂದರೆ ಎಸ್ಕೇಪ್ ಆಗಿದ್ದೀಯಾ. ಈಗ ಅದ್ಹೇಗೆ ತಪ್ಪಿಸಿಕೊಳ್ಳುತ್ತೀಯೊ ನೋಡೋಣ ಎಂದು ಜಗಳ ತೆಗೆದಿದ್ದಾನೆ.

ಆ ಸಂದರ್ಭದಲ್ಲಿ ಗುರುಪ್ರಸಾದ್ ಜೊತೆಗೆ ಬಂದಿದ್ದ ಸ್ನೇಹಿತರು ಹೆದರಿ ಅಲ್ಲಿಂದ ಪೇರಿ ಕಿತ್ತಿದ್ದಾರೆ. ಆ ವೇಳೆ ಒಬ್ಬಂಟಿಯಾಗಿದ್ದ ಗುರುಪ್ರಸಾದ್ ಮೇಲೆ ಕೌಶಿಕ್ ಮತ್ತು ಇತರರು ಅಟ್ಯಾಕ್ ಮಾಡಿದ್ದಾರೆ.

> ಮೈಸೂರು ನಗರದಲ್ಲಿ ರೌಡಿಗಳ ಅಟ್ಟಹಾಸ ಹತ್ತಿಕ್ಕಲು ಇತ್ತೀಚೆಗೆ ರೌಡಿ ಪ್ರತಿಬಂಧಕ ದಳ ರಚಿಸಲಾಗಿದೆ. ಆದರೆ ಪರಿಣಾಮಕಾರಿ ಕಾರ್ಯಾಚರಣೆ ಕೈಗೊಳ್ಳದ ಹಿನ್ನೆಲೆಯಲ್ಲಿ ರೌಡಿಗಳು ತಮ್ಮ ದಂಧೆಯನ್ನು ಮುಂದುವರೆಸಿದ್ದಾರೆ.

ಅಲ್ಲಿಂದ ತಪ್ಪಿಸಿಕೊಳ್ಳಲು ಯತ್ನಿಸಿದ ಗುರು ಪ್ರಸಾದ್‌ಗೆ ಕೌಶಿಕ್ ಚಾಕುವಿನಿಂದ ಇರಿದಿದ್ದಾನೆ. ತೀವ್ರ ರಕ್ತ ಸ್ರಾವದಿಂದ ಒದ್ದಾಡುತ್ತಿದ್ದ ಗುರುಪ್ರಸಾದ್‌ನನ್ನು ಅಪೋಲೊ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ವಿಜಯನಗರ ಪೊಲೀಸರು ಆರೋಪಿಗಳಾದ ಕೌಶಿಕ್, ದೇವರಾಜು ಹಾಗೂ ಇತರೆ ಮೂವರನ್ನು ಬಂಧಿಸಿದ್ದಾರೆ.



PUBLIC NOTICE

The Public at large is hereby notified that my client is intending to purchase the property bearing site No. 451, Property No. 7747280415, situated at 1st Phase, 4th Stage, Vijayanagara, Devaraja Mohalla. Mysore measuring East to West 18 meters and North to South 12 meters which is more fully described in the schedule herein below from its owner Pushpha M.R. W/o M.A.Ramakrishna R/at # 25, S.B. Road, Near Lal Bhag, Bangalore South, Bangalore.

If any person/persons has/have any right, title, interest or claim over the schedule property, they may lodge their claims/objections with the undersigned within 7 days from the date of this notification with supporting documents, failing which, our client will take it for granted that there are no claims / objections over the schedule property and he will Proceed to purchase the said property. Any claims / objections received after the stipulated period of 7 days will not be considered.

SCHEDULE PROPERTY

Property bearing site No: 451, Property No. 7747280415, Hootagalli Nagarasabe, 1st Phase, IV Stage, Vijayanagara, Devaraja Mohalla, Mysore measuring East to West 18 meters and North to South 12 meters (Totally 216 square meters) bounded to the
East by: Road
West by: MUDA Site
North by: Property No. 450
South by: Property No. 452.

Sd/- B.K. Mohan, B.A., LL.M., (I.P.R.) A.C.S
Advocate
11/A, 2nd Main, Paramahamsa Road,
Yadavagiri, Mysore-570 020
Mob : 98802 43114

Sd/- Dilip,
Prospective Purchaser

Date : 23.10.2025, Place : Mysore

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಸಾರ್ವಜನಿಕರ ಪ್ರಕಟಣೆ

ಈ ಮೂಲಕ ತಿಳಿಪಡಿಸುವುದೇನೆಂದರೆ ಆರ್.ಪಿ.ಬಸವರಾಜು ಬಿನ್ ಲೇ.ಪುಟ್ಟಬಸಪ್ಪ, ರಾಮಂದೂರು ಗ್ರಾಮ ಇವರ ನಮ್ಮ ಶಾಖೆಯಲ್ಲಿ ದಿನಾಂಕ:- 15-09-2020 ರಂದು ಉಳಿತಾಯ ಖಾತಾ ತೆರೆದಿದ್ದು, ಖಾತೆ ಸಂಖ್ಯೆ 112000354247 ಅಡಿಯಲ್ಲಿ ಕೆಲವು ಚಿನ್ನಾಭರಣಗಳನ್ನು ಗಿರವಿ ಇಟ್ಟು ರೂ.250000/-ಗಳನ್ನು ಸಾಲ ಪಡೆದಿದ್ದು, ನಾಮಿನಿದಾರರಾಗಿ ಮಮತ (ಮಗಳು) ಎಂದು ನಮೂದಿಸಿದ್ದು, ದಿನಾಂಕ:- 05-01-2024 ರಂದು ಮರಣ ಹೊಂದಿರುತ್ತಾರೆ. ಆರ್.ಪಿ.ಸದಾಶಿವ ಬಿನ್ ಲೇ.ಪುಟ್ಟಬಸಪ್ಪ, ರಾಮಂದೂರು ಗ್ರಾಮ ಇವರು ಶಾಖೆಗೆ ಬಂದು ಅರ್ಜಿ ಸಲ್ಲಿಸಿ ಮೇಲ್ಕಂಡ ಆರ್.ಪಿ.ಬಸವರಾಜು ಬಿನ್ ಲೇ.ಪುಟ್ಟಬಸಪ್ಪ, ಅವಿವಾಹಿತರಾಗಿದ್ದು, ನಾನು ಅವರ ಸಹೋದರ ಎಂದು ತಿಳಿಸಿದ್ದು ಮಮತ ಎನ್ನುವವರು ನಮ್ಮ ವಂಶವೃಕ್ಷದಲ್ಲಿ ಯಾರು ಇಲ್ಲ, ನಾನೇ ಅವರ ಏಕಮಾತ್ರ ವಾರಸುದಾರರೆಂದು, ಬ್ಯಾಂಕಿನಿಂದ ಪಡೆದಿರುವ ಸಾಲವನ್ನು ಮರುಪಾವತಿ ಮಾಡುವುದಾಗಿಯೂ ಬ್ಯಾಂಕಿಗೆ ಅರ್ಜಿ ಸಲ್ಲಿಸಿರುತ್ತಾರೆ. ಆರ್.ಪಿ.ಬಸವರಾಜು ಬಿನ್ ಲೇ.ಪುಟ್ಟಬಸಪ್ಪ, ರಾಮಂದೂರು ಗ್ರಾಮ ಇವರಿಗೆ ಮೇಲ್ಕಂಡ ಆರ್.ಪಿ.ಸದಾಶಿವ ಬಿನ್ ಲೇ.ಪುಟ್ಟಬಸಪ್ಪ, ರವರ ಹೊರತಾಗಿ ಬೇರೆ ಯಾರಾದರೂ ವಾರಸುದಾರರಿದ್ದರೆ ಅಥವಾ ನಾಮಿನಿದಾರರಿದ್ದರೆ ಈ ಪ್ರಕಟಣೆಯ ದಿನಾಂಕದಿಂದ 15 ದಿವಸದೊಳಗೆ ಸೂಕ್ತ ದಾಖಲೆಗಳೊಂದಿಗೆ ಬ್ಯಾಂಕ್ ಕೆಲಸದ ಸಮಯದಲ್ಲಿ ಭೇಟಿ ಮಾಡಿ ಅರ್ಜಿ ಸಲ್ಲಿಸಲು ಈ ಮೂಲಕ ತಿಳಿಯಪಡಿಸಲಾಗಿದೆ.

ಸಹಿ/–ವ್ಯವಸ್ಥಾಪಕರು,
ಎಂ.ಸಿ.ಡಿ.ಸಿ.ಸಿ.ಬ್ಯಾಂಕ್ ರಾಮಂದೂರು ಶಾಖೆ,
ಪಿರಿಯಾಪಟ್ಟಣ ತಾಲ್ಲೋಕು, ಮೈಸೂರು ಜಿಲ್ಲೆ.

ದಿನಾಂಕ: 17–10–2025

ನಕ್ಕರೆ ಅದೇ ಸ್ವರ್ಗ

ಸರ್ದಾರ್‌ಜೀ : ಡಾಕ್ಟ್ರೇ ನಂಗೆ ಬರೀ ಧ್ವನಿ ಮಾತ್ರ ಕೇಳಿಸುತ್ತೆ. ಆದರೆ ಮನುಷ್ಯರು ಮಾತ್ರ ಕಾಣಿಸಲ್ಲ.
ಡಾಕ್ಟರ್ : ಈ ರೀತಿ ಯಾವಾಗ ಆಗುತ್ತೆ?
ಸರ್ದಾರ್‌ಜೀ : ಫೋನ್‌ನಲ್ಲಿ ಮಾತಾಡುವಾಗ ಡಾಕ್ಟ್ರೇ!

ಮೈಸೂರು ಮಿತ್ರ
ಬುಧವಾರ, 22 ಅಕ್ಟೋಬರ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ......

ಒಳ್ಳೆಯ ಮಾತುಗಳನ್ನು ಆಡಿದರೆ ಸಾಲದು. ಆ ಮಾತುಗಳು ಒಳ್ಳೆಯ ಕೆಲಸಗಳನ್ನು ಪ್ರೇರೇಪಿಸುವಂತೆ ಇರಬೇಕು. – ಡಿ.ವಿ. ಗುಂಡಪ್ಪ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸಲುಗೆ ಕೊಟ್ಟರೆ ಸಾಕೂ ಹೆಗ್ಗಣವೂ ಏರುವುದು ಹೆಗಲಿಗೆ.

ನಿಮ್ಮ ಪತ್ರಗಳು

ಸಮೀಕ್ಷೆ ವಿಸ್ತರಣೆ ಮತ್ತು ಮೀಸಲಾತಿ

ಮಾನ್ಯರೆ,

ಕಳೆದ ತಿಂಗಳು 22 ರಿಂದ ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ನಡೆಯುತ್ತಿರುವ ಜಾತಿ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಮೀಕ್ಷೆಯನ್ನು ಇದೀಗ ಸರ್ಕಾರ 2ನೇ ಬಾರಿಗೆ ವಿಸ್ತರಿಸಿದೆ. ಸಮೀಕ್ಷೆಗೆ ಅಗತ್ಯ ವ್ಯವಸ್ಥೆ ಮಾಡಿಕೊಳ್ಳದೆ ಸಿಬ್ಬಂದಿಗಳಿಗೆ ಸೂಕ್ತ ತರಬೇತಿ ಇಲ್ಲದೆ, ಅತ್ಯಲ್ಪ ಅವಧಿಯಲ್ಲಿ ಸಮೀಕ್ಷೆ ನಡೆಸಲು ಸರ್ಕಾರ ಹಾಗೂ ಹಿಂದುಳಿದ ವರ್ಗಗಳ ಆಯೋಗ ನಿರ್ಧರಿಸಿದ್ದವು. ಇದೇ ಕಾರಣಕ್ಕೆ ಇದು ಕೋರ್ಟ್ ಮೆಟ್ಟಿಲು ಹತ್ತಿತು. ಕೋರ್ಟ್ ಕೂಡ ಇದನ್ನು ಪರಿಗಣಿಸದೆ ತಡೆ ನೀಡಲು ನಿರಾಕರಿಸಿತು. ಇದರ ಬೆನ್ನಲ್ಲೇ ನಾಳೆಯಿಂದಲೇ ಸಮೀಕ್ಷೆ ಆರಂಭ ಎಂದು ಘೋಷಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಯಾವುದೇ ಕಾರಣಕ್ಕೂ ಸಮೀಕ್ಷೆ ಅವಧಿಯನ್ನು ವಿಸ್ತರಿಸುವುದಿಲ್ಲ ಎಂದು ಖಡಾ ಖಂಡಿತವಾಗಿ ಹೇಳಿದ್ದರು. ಆದರೆ ಆ್ಯಪ್‌ನಲ್ಲಿನ ದೋಷಗಳು ಹಾಗೂ ಕ್ರಮವಾಗಿ ಇಲ್ಲದ ಕೆಇಬಿಯವರು ನೀಡಿದ್ದ, ಯುಎಚ್‌ಐಡಿ ಸಂಖ್ಯೆಗಳ ಗೊಂದಲ, ನೆಟ್‌ವರ್ಕ್ ಸಮಸ್ಯೆಗಳಿಂದ ಸಮೀಕ್ಷಕರು ಪರದಾಡುವಂತೆ ಆಯಿತು. ಆಗ ಸಮೀಕ್ಷೆಯನ್ನು ಅಕ್ಟೋಬರ್ 18 ರವರೆಗೂ ವಿಸ್ತರಿಸಿದರು. ಇದೀಗ ಅಕ್ಟೋಬರ್ 31 ರವರೆಗೆ ಎರಡನೇ ಬಾರಿಗೆ ವಿಸ್ತರಿಸಲಾಗಿದೆ. ಇದು ಸರ್ಕಾರ ಸಮೀಕ್ಷೆಗೆ ಸೂಕ್ತ ವ್ಯವಸ್ಥೆ ಮಾಡಿಕೊಂಡಿಲ್ಲ ಎನ್ನುವುದಕ್ಕೆ ಸ್ಪಷ್ಟ ನಿದರ್ಶನವಾಗಿದೆ. ಇಂತಹ ಸಮೀಕ್ಷೆಗೆ ಕನಿಷ್ಠ 3 ತಿಂಗಳು ಅವಧಿ ಬೇಕು. ಆದ್ದರಿಂದ ಸಮೀಕ್ಷೆಯನ್ನು ಬರುವ ಬೇಸಿಗೆ ರಜೆಯವರೆಗೆ ಮುಂದೂಡಿ ಎನ್ನುವುದು ವಿರೋಧ ಪಕ್ಷಗಳ ಒತ್ತಾಯವಾಗಿತ್ತು. ಆದರೆ ಸರ್ಕಾರ ಇದನ್ನು ಪರಿಗಣಿಸದೆ, ಹೇಗಾದರೂ ಆಗಲಿ ಕಾಟಾಚಾರದ ಸಮೀಕ್ಷೆಯ ದತ್ತಾಂಶಗಳಿಂದಲೇ ವರದಿ ತಯಾರಿಸಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಹೆಚ್ಚಿಸಲು ನಿರ್ಧರಿಸಿದಂತಿದೆ.

ಕೇವಲ ಹಿಂದುಳಿದ ವರ್ಗಗಳಿಗೆ ಸೌಲಭ್ಯ ನೀಡಲು ಎಲ್ಲಾ ಜಾತಿಗಳವರ ಸಮೀಕ್ಷೆ ಏಕೆ? ಎನ್ನುವುದು ಹಲವರ ಪ್ರಶ್ನೆಯಾಗಿದೆ. ಇದೇ ಕಾರಣಕ್ಕೆ ಕೆಲವರು ಇದರಿಂದ ದೂರ ಉಳಿದಿದ್ದಾರೆ. ಕೋರ್ಟ್ ಕೂಡ ಸಮೀಕ್ಷೆಗೆ ಮಾಹಿತಿ ನೀಡುವುದು ಕಡ್ಡಾಯವಲ್ಲ. ಐಚ್ಛಿಕ ಎಂದು ಸ್ಪಷ್ಟವಾಗಿ ಹೇಳಿದೆ. ಇದೇ ಕಾರಣದಿಂದ ಸುಧಾಮೂರ್ತಿ, ನಾರಾಯಣಮೂರ್ತಿಯವರು ಸಮೀಕ್ಷೆ ನಿರಾಕರಿಸಿದ್ದಾರೆ. ಆದರೆ ಇದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅವರೇನು ಬೃಹಸ್ಪತಿಗಳೇ? ಎಂದು ಲೇವಡಿ ಮಾಡಿದ್ದಾರೆ. ಇದು ಮುಖ್ಯ ಮಂತ್ರಿಗಳು ಹೇಳುವ ಮಾತಲ್ಲ.

ಯಾರು ಹಿಂದುಳಿದಿದ್ದಾರೆ, ಯಾರು ಮುಂದುವರಿದಿದ್ದಾರೆ ಎನ್ನುವುದನ್ನು ತಿಳಿಯಲು ಕೇವಲ ಬಿ ಪಿ ಎಲ್ ಕಾರ್ಡ್ ಮಾನದಂಡವೇ ಸಾಕಿತ್ತು. ಈಗ ಮಾಡುತ್ತಿರುವ ಸಮೀಕ್ಷೆ ಮೇಲ್ವರ್ಗದ ಜಾತಿ ಜನರನ್ನು ಸಂಪೂರ್ಣ ನಿರ್ಲಕ್ಷಿಸುವ ಗುರಿ ಹೊಂದಿದೆ ಎನ್ನುವ ಭಾವನೆ ಇದೆ. ಅಲ್ಲದೆ ಇದೇ ಸಮೀಕ್ಷೆಯ ಆಧಾರದ ಮೇಲೆ ರಾಜಕೀಯ ಮೀಸಲಾತಿ ಹೆಚ್ಚು ಮಾಡಲು, ಆ ಮೂಲಕ ವೋಟ್ ಬ್ಯಾಂಕ್ ಮಾಡಿಕೊಳ್ಳಲು ಸರ್ಕಾರ ನಿರ್ಧರಿಸಿದಂತೆ ಕಾಣುತ್ತಿದೆ.

ಮೀಸಲಾತಿ ಶೇ. 50ಕ್ಕಿಂತ ಹೆಚ್ಚಿರಬಾರದು ಎಂದು ಸುಪ್ರೀಂ ಕೋರ್ಟ್‌ನ ಸಂವಿಧಾನಿಕ ಪೀಠ ತೀರ್ಪಿತ್ತಿದೆ. ಇದೇ ವೋಟ್ ಬ್ಯಾಂಕ್ ಕಾರಣದಿಂದ ತಮಿಳುನಾಡು ಶೇ. 69ಕ್ಕೆ ಹೆಚ್ಚಿಸಿದೆ. (ತಮಿಳುನಾಡಿನ ಮೀಸಲಾತಿಗೆ ಇದೇ ವೋಟ್ ಬ್ಯಾಂಕ್ ಕಾರಣಕ್ಕೆ ಸಂಸತ್ತು ಕೂಡ ಒಪ್ಪಿಗೆ ನೀಡಿದೆ. ಕರ್ನಾಟಕ ಕೂಡ ಶೇ. 56ಕ್ಕೆ ಹೆಚ್ಚಿಸಿದೆ. ಇವುಗಳು ಪ್ರತಿಭಾ ಪಲಾಯನಕ್ಕೆ ಕಾರಣವಾಗಿವೆ.) ಕರ್ನಾಟಕದ ಮೀಸಲಾತಿ ಏರಿಕೆ ವಿಚಾರ ವಿಚಾರಣೆಯ ಹಂತದಲ್ಲಿದೆ.

–ಮುಳ್ಳೂರು ಪ್ರಕಾಶ್, ಕನಕದಾಸ ನಗರ, ಮೈಸೂರು.

ಎತ್ತ ಸಾಗುತ್ತಿದೆ ನಮ್ಮ ಸಾಂಸ್ಕೃತಿಕ ನಗರಿ ಮೈಸೂರು

ಮಾನ್ಯರೆ,

ಪಾರಂಪರಿಕ ಕಲೆ, ಸಂಸ್ಕತಿಗೆ ಹೆಸರುವಾಸಿಯಾಗಿರುವ ಮೈಸೂರಿನಲ್ಲಿ ಇತ್ತೀಚಿನ ದಿನಗಳಲ್ಲಿ ನಡೆದಂತಹ ಘಟನೆಗಳು ಸಾಮಾನ್ಯ ಜನರ ನೆಮ್ಮದಿಯನ್ನು ಕೆಡಿಸುವುದರ ಜೊತೆಗೆ ಸಾಂಸ್ಕೃತಿಕ ರಾಜಧಾನಿ ಎಂಬ ಹೆಸರಿಗೂ ಮಸಿ ಬಳಿಯುವಂತಹ ಕೆಲಸಗಳನ್ನು ಕೆಲವು ಕಿಡಿಗೇಡಿಗಳು ಮಾಡಿದ್ದಾರೆ. ಇತ್ತೀಚಿನ ದಿನಗಳಲ್ಲಿ ನಡೆದ ಕೊಲೆಗಳು ಹಾಗೂ ಬಲೂನ್ ಮಾರಲು ಬಂದಿದ್ದ ಹುಡುಗಿಯ ಅತ್ಯಾಚಾರ ಹಾಗೂ ಕೊಲೆಯಂತು ಮೈಸೂರಿನ ಜನತೆಯನ್ನು ಬೆಚ್ಚಿ ಬೀಳಿಸಿದೆ. ಇಂತಹ ಅಪರಾಧಗಳು ಮುಂದೆ ಜರುಗದಂತೆ ಸಂಬಂಧಿಸಿದ ಅಧಿಕಾರಿಗಳು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ಈ ಕೃತ್ಯಗಳಿಗೆ ಕಾರಣರಾದವರನ್ನು ಘೋರ ಶಿಕ್ಷೆಗೆ ಒಳಪಡಿಸಬೇಕು. ಅಂತಹ ಕೃತ್ಯ ಮಾಡಲು ಮುಂದಾಗುವವರ ಮನಸ್ಸಲ್ಲಿ ಭಯವನ್ನು ಹುಟ್ಟಿಸಬೇಕು. ಶಾಂತಿಯುತ ವಾತಾವರಣಕ್ಕೆ ಕಾರಣರಾಗಬೇಕು. ಯುವ ಪೀಳಿಗೆ ಸರಿಯಾದ ಮಾರ್ಗದಲ್ಲಿ ನಡೆದು ಅವರ ಬದುಕನ್ನು ಕಟ್ಟಿಕೊಳ್ಳಬೇಕು. ನಮ್ಮ ಮೈಸೂರು ನಮ್ಮ ಹೆಮ್ಮೆ. ಅದಕ್ಕೆ ಧಕ್ಕೆ ತರುವ ಯಾವ ಘಟನೆಗಳು ಜರುಗದಂತೆ ಸಂಬಂಧಿಸಿದ ಅಧಿಕಾರಿಗಳು ಕಾನೂನು ಕ್ರಮ ಕೈಗೊಳ್ಳಬೇಕು.

–ಶಶಾಂಕ ಹೆಚ್ ಎಸ್., ಹೆಬ್ಯಾ ಗ್ರಾಮ, ಮೈಸೂರು

ಪಟಾಕಿಗಳಿಂದ ವಾಯುಮಾಲಿನ್ಯ, ಶಬ್ದ ಮಾಲಿನ್ಯ

ಮಾನ್ಯರೇ,

ಪ್ರತಿ ವರ್ಷ ದೀಪಾವಳಿ ಬಂತೆಂದರೆ, ದೀಪಗಳ ಸಾಲಿನ ಬದಲು ಪಟಾಕಿಗಳ ಅಬ್ಬರ ಮತ್ತು ಹೊಗೆಯ ರಾಶಿಯೇ ಹೆಚ್ಚು ಆವರಿಸುತ್ತದೆ. ನಮ್ಮ ಸಂಸ್ಕೃತಿಯಲ್ಲಿ 'ಬೆಳಕಿನ ಹಬ್ಬ' ಎಂದು ಕರೆಯಲ್ಪಡುವ ಈ ಹಬ್ಬ ಇಂದು 'ಪಟಾಕಿಗಳ ಅಬ್ಬರದ ಹಬ್ಬ'ವಾಗಿ ಮಾರ್ಪಟ್ಟಿರುವುದು ವಿಷಾದನೀಯ. ಪಟಾಕಿಗಳ ಈ ಅತಿಯಾದ ಹಾವಳಿಯಿಂದ ವಾಯು ಮಾಲಿನ್ಯ ಮತ್ತು ಶಬ್ದ ಮಾಲಿನ್ಯವು ಅಪಾಯಕಾರಿ ಮಟ್ಟವನ್ನು ತಲುಪುತ್ತದೆ. ಇದು ನಮ್ಮ ಉಸಿರಾಟದ ವ್ಯವಸ್ಥೆ ಮತ್ತು ಶ್ರವಣ ಸಾಮರ್ಥ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಅಲ್ಲದೆ, ಪಟಾಕಿಗಳಿಗಾಗಿ ಖರ್ಚು ಮಾಡುವ ಸಾವಿರಾರು ರೂಪಾಯಿ ಹಣ ಬೂದಿಯಾಗುತ್ತದೆ ಮತ್ತು ಆರೋಗ್ಯವೂ ಹಾಳಾಗುತ್ತದೆ. ಅಕಸ್ಮಾತ್ತಾಗಿ ಕಣ್ಣು ಕಳೆದುಕೊಂಡರೆ, ಆ ಕುಟುಂಬದ ದುಃಖ ಹೇಳತೀರದು.

ದೀಪಾವಳಿಯ ನಿಜವಾದ ಸಾರ ಇರುವುದು ಕತ್ತಲೆಯ ವಿರುದ್ಧದ ಬೆಳಕಿನ ವಿಜಯದಲ್ಲಿ, ದುಷ್ಟಶಕ್ತಿಗಳ ವಿರುದ್ಧದ ಸದ್ಗುಣಗಳ ಗೆಲುವಿನಲ್ಲಿ. ಆದುದರಿಂದ, ಪಟಾಕಿಗಳ ಅಬ್ಬರದಿಂದ ಪರಿಸರವನ್ನು ಹಾಳು ಮಾಡುವ ಬದಲು, ದೀಪಗಳನ್ನು ಹಚ್ಚುವ ಮೂಲಕ ನಮ್ಮ ಮನೆ–ಮನಗಳ ಕತ್ತಲನ್ನು ದೂರ ಮಾಡಿ, ಬದುಕಿನಲ್ಲಿ ನೆಮ್ಮದಿ ಮತ್ತು ಪ್ರೀತಿಯ ಬೆಳಕನ್ನು ಸ್ವಾಗತಿಸೋಣ.ಪರಿಸರ ಸ್ನೇಹಿ ದೀಪಾವಳಿಯನ್ನು ಆಚರಿಸಿ, ನಮ್ಮ ಆರೋಗ್ಯ ಮತ್ತು ಪರಿಸರವನ್ನು ರಕ್ಷಿಸೋಣ ಎಂದು ಸಮಸ್ತ ಸಾರ್ವಜನಿಕರಲ್ಲಿ ವಿನಂತಿಸುತ್ತೇನೆ. –ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಡಿವಿಜಿ ಅವರ ಎರಡು ಪತ್ರಗಳು

ಡಿವಿಜಿ (ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪ) ಅವರು ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯ ಪ್ರಪಂಚದ ಮೇರು ಶಿಖರಗಳಲ್ಲೊಬ್ಬರು. ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ವಿಪುಲವೂ, ವಿಶಾಲವೂ ಆದ ಸಾಹಿತ್ಯವನ್ನು ಸೃಷ್ಟಿಸಿ ಸರ್ವರ ಗೌರವಕ್ಕೆ ಪಾತ್ರರಾಗಿದ್ದ ಡಿವಿಜಿ ಸಮಾಜದ ಹಿತಕ್ಕಾಗಿ ಸರ್ವಸ್ವವನ್ನು ಅರ್ಪಿಸಿದ ತ್ಯಾಗಿ. ಅವರು ಇಂದು ಜಗತ್ತಿನಲ್ಲಿ ಅತ್ಯಂತ ಹಿರಿಮೆಯನ್ನು ಪಡೆದಿರುವುದು ಮಂಕುತಿಮ್ಮನ ಕಗ್ಗದಿಂದ. ಅದೇ ಅವರ ಹೆಗ್ಗುರುತು ಎಂಬ ವಿಷಯದಲ್ಲಿ ಸಂಶಯವಿಲ್ಲ. ಆದರೆ ನಾನಾ ರೀತಿಯ ಪ್ರತಿಭೆಯನ್ನು ಪ್ರಜ್ಞೆಯನ್ನೂ ಪಡೆದಿದ್ದ ಅವರು ಆಡಿದ ಒಂದೊಂದು ಮಾತು, ಅವರು ಬರೆದ ಒಂದೊಂದು ಸಾಲು ಕೂಡ ಮೌಲ್ಯವತ್ತಾಗಿದೆ ಎಂಬುದನ್ನು ಮರೆಯುವಂತಿಲ್ಲ. ಅವರು ಯಾವ ಯಾವ ಸಂದರ್ಭದಲ್ಲೋ ಬರೆದಿದ್ದ ಕಾಗದಗಳನ್ನು ಸಂಗ್ರಹಿಸಿ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ (Gokhale Institute of Public Affairs) DVG through letter ಎಂಬ ಪುಸ್ತಕವನ್ನು ಲೋಕಕ್ಕೆ ಅರ್ಪಿಸಿದೆ. ಪತ್ರಗಳ ಸಂಗ್ರಹ ಮತ್ತು ಸಂಪಾದನೆಯನ್ನು ಮಾಡಿರುವವರು ನಾಡೋಜ ಎಸ್.ಆರ್. ರಾಮಸ್ವಾಮಿ ಮತ್ತು ಬಿ.ಎನ್. ಶಶಿಕಿರಣ್. ವಿಶ್ವವಿಖ್ಯಾತರಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯ, ವಿ.ಎಸ್. ಶ್ರೀನಿವಾಸಶಾಸ್ತ್ರಿ, ಎ.ಆರ್. ಬ್ಯಾನರ್ಜಿ ಮುಂತಾದ ಮಹಾವ್ಯಕ್ತಿಗಳಿಗೆ ಡಿವಿಜಿ ಬರೆದಿದ್ದ ಪತ್ರಗಳೂ ಈ ಪುಸ್ತಕದಲ್ಲಿವೆ. ಅವೆಲ್ಲ ಇಂಗ್ಲೀಷ್‌ನಲ್ಲಿವೆ. ಡಿವಿಜಿ ತಮ್ಮ ಪತ್ನಿಗೂ ಬಂಧು ಮಿತ್ರರಿಗೂ ಬರೆದಿದ್ದ ಕನ್ನಡದ ಪತ್ರಗಳೂ ಈ ಪುಸ್ತಕದಲ್ಲಿವೆ. ಅವು ಗದ್ಯದಲ್ಲಿದ್ದು ಆತ್ಮೀಯತೆಯಿಂದ ಬರೆದುವಾಗಿವೆ.

ಪ್ರಸ್ತುತ ಈ ಲೇಖನದಲ್ಲಿ ನಾನು ಗಮನಿಸಿರುವುದು ಡಿವಿಜಿ ತಮ್ಮ ಕಾಲದ ಇಬ್ಬರು ಶ್ರೇಷ್ಠ ಕವಿಗಳಿಗೆ ಬರೆದಿದ್ದ ಎರಡು ಪತ್ರಗಳಲ್ಲಿ ಒಂದು ಪತ್ರ ಕುವೆಂಪು ಅವರಿಗೆ 1928ರ ಫೆಬ್ರವರಿ ತಿಂಗಳಿನಲ್ಲಿ ಇಪ್ಪತ್ತಾರನೆಯ ತಾರೀಖು ಬರೆದದ್ದು. ಆಗ ಕುವೆಂಪು ಇನ್ನೂ ಇಪ್ಪತ್ನಾಲ್ಕರ ತರುಣ. ಆಗಲೇ ಅವರ ಕವಿತಾ ಕೀರ್ತಿ ಕನ್ನಡ ನಾಡಿನಲ್ಲಿ ಹರಡಿತ್ತು. ಅವರನ್ನು ಡಿವಿಜಿ ಕನ್ನಡದ ಭವಿಷ್ಯನ್ಮಹಾಕವಿ ಎಂದು ಗುರುತಿಸಿದ್ದರು. ಅಷ್ಟೇ ಅಲ್ಲ ಕುವೆಂಪು ಅವರಿಗೆ ಇಷ್ಟವಾಗಿದ್ದ ಛಂದಸ್ಸನ್ನೂ ಇಷ್ಟಪಟ್ಟಿದ್ದರು. ಕುವೆಂಪು ಅವರ ಯಮನ ಸೋಲು ಆಗಲೇ ಪ್ರಕಟವಾಗಿತ್ತು. ಅದನ್ನು ಓದಿ ಆನಂದಪಟ್ಟು ಡಿವಿಜಿ ಬರೆದ ಇಂಗ್ಲೀಷ್ ಪತ್ರ ಹೀಗಿದೆ –

My brother,

I hope you won't grouse at finding me write in English. Because I am fated to use this language more largely, the pen moves faster in it.

I have just a word to say. And that is a word of the heatiest and warmest congratulation on the poetic quality of ಯಮನ ಸೋಲು. The delicasy of conception and phraising are, if I may say so, superb-exceedingly so in several places. It is a work of careful and skillful art-dominated by a noble sentiment. May the gift grow in you I and may it be ours for long for very long -to enjoy the beauties of its output.


When you change to go through Bangalore, won't you remember to give me the pleasure of your company for some time?

With every good wish, I remain,
Sincerely yours
D.V. Gundappa

ನನ್ನ ಸೋದರ,

ನಾನು ಇಂಗ್ಲೀಷಿನಲ್ಲಿ ಬರೆಯುತ್ತಿದ್ದೇನೆಂದು ನೀನು ಬೇಸರ ಪಡುವುದಿಲ್ಲವೆಂದು ಭಾವಿಸಿದ್ದೇನೆ. ಈ ಭಾಷೆಯಲ್ಲಿ ಹೆಚ್ಚಾಗಿ ಬರೆಯಬೇಕಾಗಿರುವುದು ನನ್ನ ಹಣೆಯ ಬರೆಹವಾಗಿಬಿಟ್ಟಿದೆ. ಅದರಲ್ಲೇ ನನ್ನ ಲೇಖನಿ ಹೆಚ್ಚು ವೇಗದಿಂದ ಓಡುತ್ತದೆ.

ನಾನು ಒಂದು ಮಾತನ್ನು ಮಾತ್ರ ಹೇಳಬೇಕಾಗಿದೆ. ಅದು ಅತ್ಯಂತಹಾರ್ದವಾದ ಮತ್ತು ಆತ್ಮೀಯವಾದ ಅಭಿನಂದನೆ; ಯಮನ ಸೋಲು ಎಂಬ ಗ್ರಂಥದ ಕಾವ್ಯಗುಣದ ಬಗೆಗೆ ಅಭಿನಂದನೆ. ಅದರ ವಿಷಯ ಮತ್ತು ಶಬ್ದ ಗುಂಫನದ ಮಾರ್ದವ ಅತ್ಯುತ್ತಮ ಎಂದು ಹೇಳ ಬಯಸುತ್ತೇನೆ. ಅದು ಅತ್ಯುನ್ನತ ಭಾವೋತ್ಕರ್ಷದಿಂದ ಪ್ರಭಾವಿತವಾದ ಎಚ್ಚರಿಕೆಯಿಂದ ಮತ್ತು ನೈಪುಣ್ಯದಿಂದ ರಚಿತವಾದ ಕಲಾಕೃತಿ. ಈ ವರವು ನಿಮ್ಮಲ್ಲಿ ಬೆಳೆಯಲಿ. ಅದು ದೀರ್ಘ ಕಾಲ, ಬಹುದೀರ್ಘಕಾಲ ನಮ್ಮೆಲ್ಲರದ್ದಾಗಿರಲಿ. ಅದರ ಫಲದ ಸವಿಸೊಬಗನ್ನು ನಾವು ಸವಿಯುವಂತಾಗಲಿ.



ನೀವು ಬೆಂಗಳೂರಿನ ಮೂಲಕ ಹಾದು ಹೋಗುವಾಗ ಸ್ವಲ್ಪ ಕಾಲ ನಿಮ್ಮೊಡನೆ ಕಾಲವನ್ನು ಕಳೆಯುವ ಅವಕಾಶವನ್ನು ನನಗೆ ಕೊಡುವಿರಾ?

ಎಲ್ಲ ಶುಭಾಶಯಗಳೊಡನೆ,

ನಿಮ್ಮ ವಿಶ್ವಾಸಿ
ಡಿ.ವಿ. ಗುಂಡಪ್ಪ

ಎಷ್ಟು ಭಾವಭರಿತ ಪತ್ರ ! ಉದಯೋನ್ಮುಖ ಕವಿಗೆ ಎಂತಹ ಪ್ರೋತ್ಸಾಹದ ಮಾತು !

ಮತ್ತೆ 1937 ಮೇ ತಿಂಗಳಿನಲ್ಲಿ ಕುವೆಂಪು ಅವರ ವಿವಾಹದ ಆಮಂತ್ರಣ (ಮದುವೆಯ ಕರೆಯೋಲೆ) ಡಿವಿಜಿ ಅವರಿಗೆ ತಲುಪುತ್ತದೆ. ಮದುವೆಯ ಶುಭ ಸಮಾರಂಭಕ್ಕೆ ಸ್ವಯಂ ಹೋಗಲು ಆಗದಿದ್ದರೂ, ಡಿವಿಜಿ ಶುಭ ಕಾಮನೆಗಳನ್ನು ಕುವೆಂಪು ಅವರಿಗೆ ಇಷ್ಟವಾದ ಪಂಚಮಾತ್ರಾಗಣಗಳಿಂದ ಕೂಡಿದ ಛಂದಸ್ಸಿನ ಪದ್ಯದಲ್ಲೇ ಉತ್ತರವನ್ನು ಬರೆದರು. ಅದು ಹೀಗಿದೆ–

ಶ್ರೀಮಂತ ಕವಿ ಕೇ.ವಿ. ಪುಟ್ಟಪ್ಪ ಕೇಳಿದನು
ಸಿರಿವರಗಳೊಂದುಮಿಲ್ಲದ ಗುಂಡುರಗಳೆಯನು
ಗೆಳೆಯನೆ, ಸ್ವೀಕರಿಪುದೆನ್ನಯಭಿನಂದನೆಯ
ನಿನ್ನಂಯಾಹ್ವಾನಮೆನ್ನಂಯ ಹಸ್ತ–ಚಿತ್ತಗಳ
ಮುಟ್ಟಿಹುದು. ಸಂತಸಂ ಒಟ್ಟು ನಾಂ ವಂದಿಪೆನು.
ಪರೀಕ್ಷೆಯ ವಿಶೇಷ ಸಾಹಿತ್ಯೋತ್ಸವದ ದುಡಿತ–
ವೆನಗೆ ತಪ್ಪಿಸಿತು (ನೀನೇ ಶಂಕೆಪಟ್ಟಂತೆ)
ನಿನ್ನಂಯ ವಿಶೇಷ ಸಾಹಿತ್ಯೋತ್ಸವದ ಸೊಗವ.
ಕೆಳೆನುಡಿಯ ಬರೆಯಲುಂ ಬಿಡುವಿಲ್ಲದಂತಾಯ್ತು.
ನೀನೀಗಳಾನುಮೀ ಹರಕೆಯನು ಕೊಳ್ಳುವುದು–
ನಿನ್ನ ಬಾಳ್ಗೆರಡನೆಯ ಕಣ್ಣು ಬಂದಿಹುದೀಗ.
ಮೊಸಬಳ್ಳಿಯೊಂದೀಗ ನಿನ್ನಿರವನಪ್ಪಿಹುದು.
ಅದರ ತಳಿರಲರುಗಳ ಸವಿ–ಬೆಡಗು ಬಣ್ಣಗಳು
ನಿನ್ನ ತಿಳಿಗಣ್ಣಿನಿನ್ನಷ್ಟಲವರಳಿಸಲಿ
ಅದರ ಮೆಲ್ಲುಲಿಯ ನಸುನಗೆಯ ಸೆಲೆ–ಸುಳುಹುಗಳು
ನಿನ್ನ ಕಿವಿಗಿನ್ನಷ್ಟು ಸೂಕ್ಷ್ಮತೆಯ ಸೇರಿಸಲಿ.
ಅಂತು ನೀಂ ಜಗದ ಬದುಕಿನ ಮಹಿಮೆ–ಮರಮುಗಳ
ಕಾಣುತ್ತೆ, ಕೇಳುತ್ತೆ, ಪೇಳುತ್ತಲಿಹುದೆಮಗೆ.
ಆಲಿಸುತೆ, ಬಾಳೊಳ್ಳಿತೆನುತೆ, ನಾಂ ನಲಿಯುವೆವು
ನಿನ್ನ ಕೊರಲೊಡನೀಗ ಕೊರಲೊಂದು ಸೇರಿಹುದು
ಅರಿತಿನ್ನು ಪೊಸರಾಗದಿಂಬೊಂದು ಹೊಮ್ಮುವುದು
ಅದು ನಮ್ಮ ಕನ್ನಡದ ಜೀವವನು ತಣಿಸುವುದು

ಎಷ್ಟು ಚೆನ್ನಾಗಿರುವ ಆಶೀರ್ವಾದ! ಹೊಸ ದಾಂಪತ್ಯದ ಸೊಗಸನ್ನು ಅದ್ಭುತವಾಗಿ ಚಿತ್ರಿಸಿದ್ದಾರೆ ಡಿವಿಜಿ. ಒಬ್ಬ ಮಹಾಕವಿ ಇನ್ನೊಬ್ಬ ಮಹಾಕವಿಗೆ ಬರೆಯುವ ಪತ್ರ ಹೇಗಿರುತ್ತದೆ ಎಂಬುದಕ್ಕಿದು ಉದಾಹರಣೆ.

ಮಂಕುತಿಮ್ಮನ ಕಗ್ಗದ ಮೊದಲನೆಯ ಆವೃತ್ತಿ ಪ್ರಕಟವಾದಾಗ ಡಿವಿಜಿ ಅದನ್ನು ಕುವೆಂಪು ಅವರಿಗೆ ಕಳುಹಿಸಿದ್ದರಂತೆ. ಅದಕ್ಕೆ ಕುವೆಂಪು ಕಗ್ಗದ ಶೈಲಿಯ ಪದ್ಯದಲ್ಲೇ ಉತ್ತರಿಸಿದ್ದು ವಿಶೇಷ. ಆ ಪದ್ಯ –

ಹಸ್ತಕ್ಕೆ ಬರೆ ನಕ್ಕೆ; ಓದುತ್ತ ಓದುತ್ತ
ಮಸ್ತಕಕ್ಕಿಟ್ಟು ಗಂಭೀರವಾದೆ
ವಿಸ್ತರದ ದರ್ಶನದ ತುತ್ತ ತುದಿಯಲಿ ನಿನ್ನ
ಪುಸ್ತಕಕೆ ಕೈ ಮುಗಿದೆ ಮಂಕುತಿಮ್ಮ॥

ಇದನ್ನು ನೋಡಿ ಆನಂದಪಟ್ಟ ಡಿವಿಜಿ ಹೇಳುತ್ತಾರೆ –

'Your verse on ಮಂಕುತಿಮ್ಮನ ಕಗ್ಗ I will treasure as a rare gem'

ಡಿವಿಜಿ ವಿನಾಯಕ ಕೃಷ್ಣ ಗೋಕಾಕರಿಗೆ ಬರೆದ ಪದ್ಯರೂಪದ ಒಂದು ಪತ್ರವೂ ಪ್ರಸ್ತುತ ಪುಸ್ತಕದಲ್ಲಿದೆ. ಗೋಕಾಕರು ಡಿವಿಜಿಗೆ ಬರೆದ ಒಂದು ಪತ್ರವನ್ನು ಅವರು ಎಷ್ಟೋ ದಿನ ನೋಡಿರಲೇ ಇಲ್ಲ. ಆಮೇಲೆ ಅಕಸ್ಮಾತ್ ಆ ಪತ್ರವನ್ನು ನೋಡಿದಾಗ ಅದಕ್ಕೆ ಉತ್ತರವನ್ನು ಗೋಕಾಕರ ಶೈಲಿಯ ಪದ್ಯದಲ್ಲೇ ಡಿವಿಜಿ ಬರೆದರು. ಅದು –

ಗೆಳೆಯ,
ಅನ್ನ ಹಳಸುವುದುಂಟು
ಹಣ್ಣು ಕೊಳೆಯುವುದುಂಟು
ಕನ್ನೆ ಮುದಿಯಹುದುಂಟು
ಕೆಳೆಗೆ ಕುಂದುಂಟೆ?
ಹೂವು ಬಾಡುವುದುಂಟು
ಮಾವು ಹುಳಿಯುವುದಂಟು
ದೈವ ಮುಳಿವುದುಮುಂಟು
ಕೆಳೆಗೆ ಕುಂದುಂಟೆ?
ಏನೊ ಹವ್ಯಾಸದಲಿ
ಏನೋ ಹಂಗರಣದಲಿ
ಏನೋ ಬೇಸರದಲಿ
ಏನೋ ಬಳಲಿಕೆಯಲ್ಲಿ
ಮರೆತುದುಂಟು,
ಬರೆಯದಿದ್ದುದುಂಟು
ಎನಿತು ದಿನವಂತಿಹುದು
ನೆನಪೆನಿತು ನಿದ್ರುಪುದು?
ಎಚ್ಚರದೆ ನೆನಪು
ಚುಚ್ಚದೇ ಮನವ?
ಇಂದೆನಗೆ ಹಾಗಾಯ್ತು
ಚೆಂದ ಮನಕಾಯ್ತು
ಹಳೆಯ ದಫ್ತರಗಳೊಳದೇನನೋ ಹುಡುಕುತಿರೆ
ಹೊಳೆಯಿತೊಂದೋಲೆ ನೀಂ ಬರೆದಿದ್ದುದೆನಗೆ
ಏನೊಲವು ಬರಹವರು, ಏನು ಆ ನಲುಮೆ!
ಆನಂದವುಕ್ಕಿಪಾಳದ ತಿಳಿಯ ಚಿಲುಮೆ!
ನೆನಪುಕ್ಕಿತಾಗ,
ಮನವಳುಕಿತಾಗ,
ಅಳುಕು ಮರು ನಿಮಿಷದಲಿ
ಇಳಿದು ಮರೆಯಾಯ್ತು.
ಭರವಸೆಯು ತಲೆದೋರಿ
ಹರುಷ ತುಂಬಾಯ್ತು.
ಹರುಷದಾ ಲೆಕ್ಕಣಿಕೆ
ಕೆಳೆಯ ದೌತಿಯಲಿ
ಮುಳುಮುಳುಗಿ ಭರದಿಂದ
ಬರೆಯಿಸಿಹುದಿದನು–
ಸರಸಪತ್ರವೊ ಎನಿಪ
ತರಗುಪತ್ರೆಯನು
ಮನ್ನಿಸೈ ನೀನಿದನು ಕವಿದೃಷ್ಟಿಯಿಡುತ
ಕನ್ನಡದ ಕವಿ ಬೆನಕ, ರಸಕವಳವೆನುತ.

ವಿ.ಕೃ. ಗೋಕಾಕರ ಕಾವ್ಯನಾಮ ವಿನಾಯಕ. ಅದನ್ನು ಕನ್ನಡಿಸಿ ಡಿವಿಜಿ ಬೆನಕ ಎಂದು ಮಾಡಿದ್ದಾರೆ.

ಇಂತಹ ಸ್ವಾರಸ್ಯಮಯವಾದ ಹಲವು ಪತ್ರಗಳು DVG through letters ಎಂಬ ಪುಸ್ತಕದಲ್ಲಿವೆ. ಡಿವಿಜಿ ಅವರ ವೈವಿಧ್ಯಮಯ ವ್ಯಕ್ತಿತ್ವಕ್ಕೆ ಅವು ಕನ್ನಡಿಯನ್ನು ಹಿಡಿದಿವೆ. ಬಹುಪರಿಶ್ರಮದಿಂದ, ಜ್ಞಾನಪ್ರೀತಿಯಿಂದ ಈ ಪುಸ್ತಕವನ್ನು ಸಿದ್ಧಪಡಿಸಿ ಬೆಳಕಿಗೆ ತಂದ ನಾಡೋಜ ಎಸ್.ಆರ್. ರಾಮಸ್ವಾಮಿಗಳಿಗೂ, ಯುವ ವಿದ್ವಾಂಸ ಬಿ.ಎನ್. ಶಶಿಕಿರಣ ಅವರಿಗೂ ಸಂಸ್ಕೃತಿ ಪ್ರಿಯರ ನಮನಗಳು.

ದೀಪಾವಳಿ–ಆಯುರ್ವೇದ–ಆರೋಗ್ಯ



ಡಾ॥ ಸುಧಾ ಎಂ.ಎನ್
ಆಯುರ್ವೇದ ಮತ್ತು ಯೋಗ ತಜ್ಞರು
ಮೊ.: 9448071933.

ದೀಪಾವಳಿಯು ಅಗ್ನಿಮಹಾಭೂತ ಅಥವಾ ಪಂಚ ಮಹಾಭೂತಗಳಲ್ಲಿ ಒಂದಾಗಿರುವ ಅಗ್ನಿತತ್ವಕ್ಕೆ ಪ್ರಾಮುಖ್ಯ ನೀಡುವ ಹಬ್ಬವೆಂದರೆ ತಪ್ಪಾಗಲಾರದು. ಅಗ್ನಿ ಮತ್ತು ಪಿತ್ತ ಅಂದರೆ ಆಯುರ್ವೇದದ ಪ್ರಕಾರ ದೇಹದಲ್ಲಿ ಅಗ್ನಿಯಾಗಿ ಪಿತ್ತ ದೋಷವು ದೇಹದಲ್ಲಿ ಪ್ರಭಾವ ಹೊಂದಿದ ಈ ದೇಹಾಗ್ನಿಯು ಧಾತ್ವಾಗ್ನಿಯಾಗಿ ಪಚನಕಾರ್ಯ, ವಿಸರ್ಜನಾಕಾರ್ಯ ಮತ್ತು ಬೆಳವಣಿಗೆಯನ್ನುಂಟು ಮಾಡುವ ಅಗ್ನಿಯು ಪಿತ್ತದ ರೂಪದಲ್ಲಿ 5 ಪ್ರಕಾರಗಳಲ್ಲಿ ನಮ್ಮ ದೇಹದಲ್ಲಿ ಚಯಾಪಚಯ ಕ್ರಿಯೆ, ದೃಷ್ಟಿ, ವಿಸರ್ಜನಾಕ್ರಿಯೆ ಇತ್ಯಾದಿಗಳನ್ನು ನಿರ್ವಹಿಸುತ್ತದೆ.

ದೀಪಾವಳಿಯ ಕಾಲದಲ್ಲಿ ಶೀತಲತೆ, ಒಣ ಹವೆ ಇರುವುದರಿಂದ ತೈಲಾಭ್ಯಂಗದೊಂದಿಗೆ ಸ್ನಾನ ಮಾಡುವ ಪದ್ಧತಿಯನ್ನು ಆರಂಭಿಸಲಾಗುತ್ತದೆ. ಈ ದೀಪಾವಳಿಯಂದು ಪ್ರಾರಂಭಿಸುವ ತೈಲಾಭ್ಯಂಗವನ್ನು ಮತ್ತು ಸ್ನಾನವನ್ನು ನಿತ್ಯವೂ ಮುಂದುವರಿಸುವುದರಿಂದ ಹಸಿವೆ, ಜೀರ್ಣಶಕ್ತಿ, ಓಜಸ್, ತೇಜಸ್ ವೃದ್ಧಿಯಾಗಿ, ನಮ್ಮೆಲ್ಲ ಸಂಧಿಗಳೂ ಮಾಂಸಖಂಡಗಳೂ ಬಲಯುತವಾಗುತ್ತವೆ. ಚರ್ಮ, ಕೂದಲು, ಕಣ್ಣುಗಳು ಕಾಂತಿಯುತವಾಗುತ್ತವೆ. ಮನಸ್ಸು ಆಹ್ಲಾದಕರವಾಗಿ ಆತ್ಮ ಬಲ ಮತ್ತು ಮನಃಶಾಂತಿ ಲಭಿಸುತ್ತದೆ.

ನಮ್ಮೆಲ್ಲರಿಗೂ ತಿಳಿದಿರುವಂತೆ ನಾಡಿನಾದ್ಯಂತ ಸಂಭ್ರಮ ಸಡಗರದಿಂದ ಆಚರಿಸಲ್ಪಡುವ ದೀಪಾವಳಿಯು ಆಶ್ವೀಯುಜ ಮಾಸದ ಕಡೆಯ 3 ದಿನಗಳು ಮತ್ತು ಕಾರ್ತಿಕ ಮಾಸದ ಆರಂಭದ 2 ದಿನಗಳಲ್ಲಿ ಪ್ರಾರಂಭವಾಗುತ್ತದೆ. ಭಾರತದಾದ್ಯಂತ ಧನ್ವಂತರಿ ತ್ರಯೋದಶಿ ಅಥವಾ ಧನ್‌ತೇರಸ್ ಎಂದೂ ಆಚರಿಸಲಾಗುತ್ತದೆ. ಆಯುರ್ವೇದ ಪಿತಾಮಹ ಶ್ರೀ ಧನ್ವಂತರಿ ದೇವನು ಜನಿಸಿದ ಈ ದಿನದಲ್ಲಿ ವಿಶೇಷವಾಗಿ ಸಮೃದ್ಧಿ ಮತ್ತು ಬುದ್ಧಿಯ ಪ್ರತೀಕವಾದ ಶ್ರೀ ಲಕ್ಷ್ಮಿಯನ್ನು ಮತ್ತು ಗಣಪತಿಯನ್ನು ಹಾಗೆಯೇ ಸಂಪತ್ತಿನ ಅಧಿಪತಿಯಾದ ಕುಬೇರ ಮತ್ತು ಆರೋಗ್ಯದ ಅಧಿಪತಿಯಾದ ಶ್ರೀ ಧನ್ವಂತರಿಯನ್ನು ಪೂಜಿಸಲಾಗುತ್ತದೆ. ಅಮೃತ ಪ್ರಾಪ್ತಿಗಾಗಿ ದೇವತೆಗಳಿಗೂ ರಾಕ್ಷಸರಿಗೂ ಸಮುದ್ರಮಥನ ನಡೆದಾಗ ಧನ್ವಂತರಿದೇವನು ಅಮೃತದ ಕೊಡವನ್ನು ತಂದ ಕಥೆ ಎಲ್ಲರಿಗೂ ತಿಳಿದಿರುವುದೇ ! ಭಗವಾನ್ ವಿಷ್ಣುವು ಅವನ ಕೈಲಿದ್ದ ಅಮೃತವನ್ನು ಪಡೆದುಕೊಂಡು ಧನ್ವಂತರಿಯನ್ನು ದೇವತೆಗಳ ವೈದ್ಯನಾಗಿ ನೇಮಿಸಿ, ಸಸ್ಯಗಳು ಮತ್ತು ಔಷಧಿಗಳ ಅಧಿಪತಿಯಾಗುತ್ತಾನೆ.



“ಆಯುರ್ವೇದದ ಮೂಲ ಸಿದ್ಧಾಂತವಾದ ಮನಸ್ಸು, ಶರೀರ ಮತ್ತು ಆತ್ಮದ ಸಮತೋಲನವನ್ನು ಪರಿಗಣಿಸುವ ಆಯುರ್ವೇದದ ತತ್ವಕ್ಕೂ ಹೊಂದಾಣಿಕೆಯಾಗುವುದರಿಂದ, ಹಾಗೆಯೇ ವಿಶ್ವ ಸಾಮರಸ್ಯವನ್ನು ಸಂಕೇತಿಸಿ ಪ್ರತಿನಿಧಿಸುವ ವಿಷುವತ್ ಸಂಕ್ರಾಂತಿಯು ಆಯುರ್ವೇದದ ಸಾರವನ್ನು ಮತ್ತು ಪ್ರಕೃತಿಯೊಂದಿಗೆ ಸಮತೋಲನದಿಂದ ಬದುಕುವುದನ್ನು ಒತ್ತಿ ಹೇಳುತ್ತದೆ.

ಹೀಗೆ ಧನ್ವಂತರಿಯು ಪ್ರತ್ಯಕ್ಷನಾದ ದಿನವು ಆಶ್ವೀಯುಜ ಕೃಷ್ಣಪಕ್ಷದ ತ್ರಯೋದಶಿಯಾದ್ದರಿಂದ ಈ ದಿನವನ್ನು ಧನ್ವಂತರಿ ಜಯಂತಿ ಎಂದು ಕೇಂದ್ರ ಸರ್ಕಾರವು 'ರಾಷ್ಟ್ರೀಯ ಆಯುರ್ವೇದ ದಿನ' ಎಂದು 2016ರಲ್ಲಿ ಘೋಷಿಸಿ ಆಚರಿಸಿದೆ. ಅಮೃತವನ್ನು ಸಮುದ್ರಮಥನದಲ್ಲಿ ತಂದ ನಂತರ ದೇವತೆಗಳಿಗಷ್ಟೇ ಸೀಮಿತವಾಗಬಾರದೆಂದು ಜನಸಾಮಾನ್ಯರಿಗೂ ತಲುಪಬೇಕೆಂದು ಗಿಡ, ಮರ, ಬಳ್ಳಿ, ಬೇರುಗಳಿಗೂ ಔಷಧೀಯ ಗುಣಗಳನ್ನು ನೀಡಿದ ಧನ್ವಂತರಿ ದೇವರು ಆಯುರ್ವೇದ ವೈದ್ಯವನ್ನು ಪ್ರಪಂಚಕ್ಕೇ ನೀಡಿದರು ಅಲ್ಲವೇ?

ಧನ್ವಂತರಿ ಜಯಂತಿಯು ಅಂದರೆ ಧನ್‌ತೇರಸ್ ದಿನಾಂಕವು ಪ್ರತಿ ವರ್ಷವೂ ಪಂಚಾಂಗದ ಪ್ರಕಾರ ಬದಲಾಗುತ್ತಿರುವುದರಿಂದ ಆಯುರ್ವೇದ ದಿನವನ್ನು ನಿಗದಿತ ದಿನಾಂಕದಂದು ಆಚರಿಸಲು ಅಡಚಣೆಯಾಗುತ್ತಿದ್ದರಿಂದ ಇದನ್ನು ಪರಿಹರಿಸಲು ರಾಷ್ಟ್ರೀಯ ಮತ್ತು ಜಾಗತಿಕ ಆಚರಣೆಯ ದೃಷ್ಟಿಯಿಂದ ಆಯುಷ್ ಇಲಾಖೆಯು ಶರತ್‌ಕಾಲದ ವಿಷುವತ್ ಸಂಕ್ರಾಂತಿಯ ಹಗಲು ಮತ್ತು ರಾತ್ರಿ ಕಾಲವು ಸರಿಸಮಾನವಾಗಿದ್ದು, ಪ್ರಕೃತಿಯು ಸಮತೋಲನವನ್ನು ಸಂಕೇತಿಸುತ್ತದೆ. ಹಾಗೆಯೇ ಆಯುರ್ವೇದದ ಮೂಲ ಸಿದ್ಧಾಂತವಾದ ಮನಸ್ಸು, ಶರೀರ ಮತ್ತು ಆತ್ಮದ ಸಮತೋಲನವನ್ನು ಪರಿಗಣಿಸುವ ಆಯುರ್ವೇದದ ತತ್ವಕ್ಕೂ ಹೊಂದಾಣಿಕೆಯಾಗುವುದರಿಂದ, ಹಾಗೆಯೇ ವಿಶ್ವ ಸಾಮರಸ್ಯವನ್ನು ಸಂಕೇತಿಸಿ ಪ್ರತಿನಿಧಿಸುವ ವಿಷುವತ್ ಸಂಕ್ರಾಂತಿಯು ಆಯುರ್ವೇದದ ಸಾರವನ್ನು ಮತ್ತು ಪ್ರಕೃತಿಯೊಂದಿಗೆ ಸಮತೋಲನದಿಂದ ಬದುಕುವುದನ್ನು ಒತ್ತಿ ಹೇಳುತ್ತದೆ.

ಪ್ರತೀ ವರ್ಷವೂ ಸೆಪ್ಟೆಂಬರ್ 23ನೇ ತಾರೀಖಿನಂದು ಈ ಎಲ್ಲ ವಿಷಯಗಳನ್ನು ಪರಿಗಣಿಸಿ ನಮ್ಮ ಶ್ರೇಷ್ಠ ಸಂಸ್ಕೃತಿಯಲ್ಲಿ ಭಗವಾನ್ ಧನ್ವಂತರಿಯ ಜನ್ಮದಿನದ ಶ್ರೇಷ್ಠತೆಯೊಂದಿಗೆ ಆಯುರ್ವೇದವು ಜಗತ್ತಿನ ಮನುಕುಲದ ಒಳಿತಿಗೆ ಆರೋಗ್ಯಕರ ಜೀವನ ಪದ್ಧತಿಗೆ ಉಪಯುಕ್ತವೆಂದು ಆಯುರ್ವೇದ ದಿನವೆಂದು ಆಚರಿಸಲಾಗುತ್ತಿದೆ. ಹಾಗೆಯೇ ಭಗವಾನ್ ಧನ್ವಂತರಿ ಆಯುರ್ವೇದೋಕ್ತ ಜೀವನ ಶೈಲಿ ಮತ್ತು ದೀಪಾವಳಿಯ ಆಚರಣೆಯು ನಮ್ಮ ನಿಮ್ಮೆಲ್ಲರ ಆದ್ಯತೆಯು ಪರಿಸರ ಸ್ನೇಹಿ ಹಸಿರು ಪಟಾಕಿಯತ್ತ ಇರಲಿ ಅಲ್ಲವೇ?

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಕುಂಬಾರಕೊಪ್ಪಲಿನ ಶ್ರೀಮಲೆ ಮಹದೇಶ್ವರ ಜಾತ್ರಾ ಮಹೋತ್ಸವಕ್ಕೆ ಅದ್ಧೂರಿ ಚಾಲನೆ





ಕುಂಬಾರಕೊಪ್ಪಲಿನ ಶ್ರೀ ಮಲೆ ಮಹದೇಶ್ವರ ಜಾತ್ರಾ ಮಹೋತ್ಸವ ಅಂಗವಾಗಿ ಗ್ರಾಮಸ್ಥರು ಸರತಿ ಸಾಲಿನಲ್ಲಿ ನಿಂತು ಮಹದೇಶ್ವರ ಸ್ವಾಮಿಯ ದರ್ಶನ ಪಡೆದರು.

ಮೈಸೂರು, ಅ.21(ಎಸ್‌ಪಿಎನ್)– ಭಕ್ತಿ–ಭಾವೈಕ್ಯತೆ ಸಾರುವ ಕುಂಬಾರಕೊಪ್ಪಲು ಶ್ರೀ ಮಲೆ ಮಹದೇಶ್ವರ ಜಾತ್ರಾ ಮಹೋತ್ಸವ ಮಂಗಳವಾರ ಆರಂಭಗೊಂಡಿತು.

ಮೈಸೂರು ನಗರದ ಕುಂಬಾರಕೊಪ್ಪಲಿನಲ್ಲಿ ಅಭ್ಯುದಯ ಸಂಘದ ನೇತೃತ್ವದಲ್ಲಿ ನಡೆಯುವ ಶ್ರೀ ಮಲೆ ಮಹದೇಶ್ವರ ಜಾತ್ರಾ ಮಹೋತ್ಸವದಲ್ಲಿ ಗ್ರಾಮಸ್ಥರು ಸಂಭ್ರಮ–ಸಡಗರದಿಂದ ಪಾಲ್ಗೊಂಡು ತಮ್ಮ ಭಕ್ತಿ ಸಮರ್ಪಿಸಿದರಲ್ಲದೆ. ಗ್ರಾಮದ ಎಲ್ಲಾ ದೇವಸ್ಥಾನಗಳಲ್ಲೂ ವಿಶೇಷ ಪೂಜೆ ನೆರವೇರಿದವು.

ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನ ಸೇರಿದಂತೆ ಗ್ರಾಮದ ಎಲ್ಲಾ ದೇವಸ್ಥಾನಗಳು, ಪ್ರಮುಖ ಬೀದಿಗಳಲ್ಲಿ ದೀಪಾಲಂಕಾರದಿಂದ ಕಂಗೊಳಿಸಿದರೆ, ಮಂಗಳವಾರ ಮುಂಜಾನೆಯಿಂದಲೇ ಅಭಿಷೇಕ, ವಿವಿಧ ಧಾರ್ಮಿಕ ಕಾರ್ಯಗಳು ನೆರವೇರಿದವು.

ಬುಧವಾರ ರಾತ್ರಿ 7 ಗಂಟೆಗೆ ಕೆಆರ್‌ಎಸ್ ರಸ್ತೆಯಲ್ಲಿರುವ ತಿಪ್ಪಾಜಿ ಕೊಳದಿಂದ ಹಾಲರವಿ ಹಾಗೂ ಬಾಯಿಬೀಗ ಉತ್ಸವದಲ್ಲಿ ಅಪಾರ ಭಕ್ತರು ಪಾಲ್ಗೊಂಡಿದ್ದರು. ಈ ಉತ್ಸವದಲ್ಲಿ ಜಾನಪದ ಕಲಾತಂಡಗಳು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಾಗಿ, ಮತ್ತೆ ದೇವಸ್ಥಾನ ಆವರಣ ತಲುಪಿದವು. ಅಲ್ಲದೆ, ಮೈಸೂರಿನ ಕೆ.ಜಿ.ಕೊಪ್ಪಲು, ಟಿ.ಕೆ. ಬಡಾವಣೆ, ಅಗ್ರಹಾರ, ಜನತಾನಗರ ಸೇರಿದಂತೆ ಇತರೆಡೆ ಕೊಂಡೋತ್ಸವ ಹಮ್ಮಿಕೊಳ್ಳಲಾಗಿತ್ತು.

ಈ ಜಾತ್ರಾ ಮಹೋತ್ಸವ ದಲ್ಲಿ ಮಾಜಿ ಸಂಸದ ಪ್ರತಾಪ ಸಿಂಹ, ಬಿಜೆಪಿ ಚಾಮರಾಜ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ದಿನೇಶ್ ಗೌಡ, ಡಾ.ಶುಶ್ರೂತ್‌ಗೌಡ, ಜೆಡಿಎಸ್ ನಗರಾಧ್ಯಕ್ಷ ಚೆಲುವೇಗೌಡ, ನರಸಿಂಹ, ಪ್ರವೀಣ್, ಗ್ರಾಮದ ಮುಖಂಡರಾದ ಭೈರಪ್ಪ, ಕಿರಣ್‌ಗೌಡ, ಹೇಮಂತ್, ಉಮೇಶ್, ಮಹೇಶ್, ಸುರೇಶ್, ಪ್ರಕಾಶ್, ಹರೀಶ್, ನವೀತ್, ಕೀರ್ತಿ, ಹನುಮಂತು, ಮಂಜು ಸೇರಿದಂತೆ ಇತರೆ ಮುಖಂಡರು ಭಾಗವಹಿಸಿದ್ದರು.

ದಿ ಸಿಟಿ ಕೋ ಆಪರೇಟಿವ್ ಬ್ಯಾಂಕ್ ಚುನಾವಣಾ ಪ್ರಕ್ರಿಯೆಗೆ ದಿಢೀರ್ ಬ್ರೇಕ್

ಮತದಾರರ ಪಟ್ಟಿಯಲ್ಲಿ ದೋಷದ ದೂರು ಹಿನ್ನೆಲೆಯಲ್ಲಿ ಚುನಾವಣಾಧಿಕಾರಿ ಈ ನಿರ್ಧಾರ



ಮೈಸೂರು, ಅ.21– ಮೈಸೂರಿನ ದಿ ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಆಡಳಿತ ಮಂಡಳಿ ಚುನಾವಣೆಯ ವೇಳಾಪಟ್ಟಿ ಪ್ರಕಟಿಸುವ ಹಿಂದಿನ ದಿನ ದಿಢೀರನೆ ಚುನಾವಣೆ ಅಧಿಸೂಚನೆಯನ್ನೇ ಹಿಂಪಡೆಯಲಾಗಿದೆ.

ಹಾಲಿ ಆಡಳಿತ ಮಂಡಳಿ ಅಧಿಕಾರದ ಅವಧಿಯು ನ.15ಕ್ಕೆ ಮುಕ್ತಾಯಗೊಳ್ಳುವುದರಿಂದ ನೂತನ ಆಡಳಿತ ಮಂಡಳಿಯ 13 ನಿರ್ದೇಶಕರ ಸ್ಥಾನಗಳಿಗೆ ಚುನಾವಣೆ ನಡೆಸಲು ಜಿಲ್ಲಾ ಮಟ್ಟದ ಚುನಾವಣಾಧಿಕಾರಿಯೂ ಆದ ಮೈಸೂರು ಪ್ರಾಂತ ಸಹಕಾರ ಸಂಘಗಳ ಜಂಟಿ ನಿಬಂಧಕರು ಸಿ.ಪ್ರಸಾದ್ ರೆಡ್ಡಿ ಆ.29ರಂದು ಚುನಾವಣೆ ಅಧಿಸೂಚನೆ ಹೊರಡಿಸಿದ್ದರು. ಅದರಂತೆ ಚುನಾವಣಾಧಿಕಾರಿ ಅ.18ಕ್ಕೆ ಅಂತಿಮ ವೇಳಾಪಟ್ಟಿ ಪ್ರಕಟಿಸಬೇಕಿತ್ತು. ಆದರೆ ಅದರ ಹಿಂದಿನ ದಿನ ಓರ್ವ ನಿರ್ದೇಶಕ ಹಾಗೂ ಕೆಲವು ಸದಸ್ಯರು, ಮತದಾರರ ಪಟ್ಟಿಯಲ್ಲಿ ದೋಷವಿದೆ ಎಂದು ದೂರು ನೀಡಿದ್ದರಿಂದ ದಿಢೀರ್ ಅಧಿಸೂಚನೆಯನ್ನು ಹಿಂಪಡೆದಿದ್ದು, ಇದರಿಂದ ಗೊಂದಲ ಸೃಷ್ಟಿಯಾಗಿದೆ.

ಆ.29ರ ಅಧಿಸೂಚನೆ ಅನ್ವಯ ನಾಮಪತ್ರ ಸಲ್ಲಿಕೆಗೆ ಅ.25 ಅಂತಿಮ ದಿನ, ಅ.26ಕ್ಕೆ ಪರಿಶೀಲನೆ, ಅ.27ಕ್ಕೆ ನಾಮಪತ್ರ ಹಿಂಪಡೆಯುವ ಅವಕಾಶ, ನ.2ಕ್ಕೆ ಮತದಾನ ನಡೆಸಲು ನಿರ್ಧರಿಸಲಾಗಿತ್ತು. ಆಡಳಿತ ಮಂಡಳಿ ನಿರ್ದೇಶಕರ ಸ್ಥಾನಗಳ ಚುನಾವಣೆ ಹಾಗೂ ನಂತರದ ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆ ಪ್ರಕ್ರಿಯೆ ನಡೆಸಲು ನಿಯೋಜನೆಗೊಂಡಿರುವ ಸಹಕಾರ ಸಂಘಗಳ ಜಂಟಿ ನಿಬಂಧಕರ ಕಚೇರಿಯ ಪ್ರಥಮ ದರ್ಜೆ ಸಹಾಯಕ ಜಿ.ಆರ್.ರಘು ಹಾಗೂ ಮತದಾರರ ಪಟ್ಟಿ ಪರಿಶೀಲನಾಧಿಕಾರಿ ಎಂ.ಎನ್.ಸೋಮಶೇಖರ್ ಕಾರ್ಯೋನ್ಮುಖರಾಗಿದ್ದರು. ಅ.19ರಿಂದ ನಾಮಪತ್ರ ಸಲ್ಲಿಕೆ ಆರಂಭವಾಗುತ್ತಿದ್ದ ಹಿನ್ನೆಲೆಯಲ್ಲಿ ಅ.18ರಂದು ಮತದಾರರ ಪಟ್ಟಿ ಪರಿಶೀಲನೆ ನಡೆಸಲಾಗುತ್ತಿತ್ತು. ಅಷ್ಟರಲ್ಲೇ ಈ ವ್ಯತಿರಿಕ್ತ ಬೆಳವಣಿಗೆ ನಡೆದಿದ್ದು, ಚುನಾವಣಾ ಅಖಾಡಕ್ಕಿಳಿಯಲು ಸಜ್ಜಾಗಿದ್ದವರಿಗೆ ನಿರಾಸೆಯಾಗಿದೆ. ಈ ಕ್ರಮದ ಬಗ್ಗೆ ಪರ–ವಿರೋಧ ಪ್ರತಿಕ್ರಿಯೆಗಳು ವ್ಯಕ್ತವಾಗು ತ್ತಿವೆ. ಸಹಜವಾಗಿ ರಾಜಕೀಯ ತಿರುವನ್ನೂ ಪಡೆದು, ಚರ್ಚೆಗೆ ಆಸ್ಪದವಾಗಿದೆ.

ಬ್ಯಾಂಕ್‌ನ ಹಾಲಿ ಆಡಳಿತ ಮಂಡಳಿಯು 17 ಸಾವಿರ ಮತದಾರರ ಪಟ್ಟಿ ಸಿದ್ಧಪಡಿಸಿ, ಪರಿಶೀಲನಾಧಿಕಾರಿಗಳಿಗೆ ಸಲ್ಲಿಸಿದ್ದರು. ಅದರಲ್ಲಿ ಸುಮಾರು 10 ಸಾವಿರ ಸದಸ್ಯರನ್ನು ಅನರ್ಹ ಮತದಾರರೆಂದು ಪರಿಶೀಲನಾಧಿಕಾರಿ ಗುರುತಿಸಿ, ಅನುಮೋದಿತ ಪಟ್ಟಿಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಲು

> ಚುನಾವಣಾ ವೇಳಾಪಟ್ಟಿ ಪ್ರಕಟಿಸುವ ಹಿಂದಿನ ದಿನ ನಿರ್ದೇಶಕರೊಬ್ಬರು ಹಾಗೂ ಕೆಲ ಸದಸ್ಯರು ಮತದಾರರ ಪಟ್ಟಿಯಲ್ಲಿ ಲೋಪವಿದೆ ಎಂದು ದೂರು ನೀಡಿದ್ದಾರೆ. ಒಂದೇ ದಿನದಲ್ಲಿ ಪರಿಶೀಲನಾ ಕಾರ್ಯ ನಡೆಸಲು ಸಾಧ್ಯವಾಗದ ಕಾರಣ ಅಧಿಸೂಚನೆ ಹಿಂಪಡೆಯಲಾಗಿದೆ. ಮತದಾರರ ಪಟ್ಟಿ ಪರಿಶೀಲನಾಧಿಕಾರಿಗಳು ಪರಿಶೀಲನೆ ನಡೆಸಿ, ಅನುಮೋದಿತ ಪಟ್ಟಿ ನೀಡಿದ ಕೂಡಲೇ ವೇಳಾಪಟ್ಟಿ ಪ್ರಕಟಿಸಲಾಗುವುದು.
>
> –ಜಿ.ಆರ್.ರಘು, ಚುನಾವಣಾಧಿಕಾರಿ

ಸಿದ್ಧತೆ ನಡೆಸಿದ್ದರು ಎಂದು ಹೇಳಲಾಗುತ್ತಿದೆಯಾದರೂ ಈ ಬಗ್ಗೆ ಚುನಾವಣಾಧಿಕಾರಿಗಳು ಸ್ಪಷ್ಟಪಡಿಸಿಲ್ಲ.

ಸಹಕಾರ ಸಂಘಗಳ ಜಂಟಿ ನಿಬಂಧಕರಿಗೆ ದೂರು ನೀಡಿರುವವರು ಮತದಾರರ ಪಟ್ಟಿಯಲ್ಲಿ ಕೆಲವರನ್ನು ಕೈಬಿಟ್ಟು, ಅನರ್ಹರನ್ನು ಸೇರಿಸಲಾಗಿದೆ. ಪುನರ್ ಪರಿಶೀಲನೆ ನಡೆಸಿ, ಲೋಪ ಸರಿಪಡಿಸಿದ ನಂತರವೇ ಚುನಾವಣೆ ಪ್ರಕ್ರಿಯೆ ಮುಂದುವರೆಸಬೇಕೆಂದು ಒತ್ತಾಯಿಸಿದ್ದಾರೆ. ಇದಕ್ಕೆ ಆಕ್ಷೇಪ ವ್ಯಕ್ತಪಡಿಸುತ್ತಿರುವವರು, ಮತದಾರರ ಪಟ್ಟಿ ಅನುಮೋದನೆಗೂ ಮುನ್ನವೇ ಈ ರೀತಿಯ ಆರೋಪಗಳನ್ನು ಮಾಡುವುದು ಸರಿಯಲ್ಲ. ಇದರ ಹಿಂದೆ ರಾಜಕೀಯ ನಾಯಕರ ಕೈವಾಡವಿದೆ. ಅಧಿಕಾರಿಗಳ ಮೇಲೆ ಒತ್ತಡ ತಂದು ಚುನಾವಣೆ ಮುಂದೂಡಿಸಿದ್ದಾರೆ ಎಂದು ಆರೋಪಿಸುತ್ತಿದ್ದಾರೆ. ಇದರ ನಡುವೆ ಕೆಲ ಸದಸ್ಯರು ನ್ಯಾಯಾಲಯದ ಮೊರೆ ಹೋಗಲು ಚಿಂತನೆ ನಡೆಸಿರುವುದಾಗಿಯೂ ಹೇಳಲಾಗುತ್ತಿದೆ.

ಜಿಎಸ್‌ಟಿ ಮೂಲಕ ದೇಶದ ಜನರಿಂದ ಸುಲಿಗೆ

- ಪ್ರಧಾನಿ ಮೋದಿ ವಿರುದ್ಧ ಸಿಎಂ ಸಿದ್ದರಾಮಯ್ಯ ವಾಗ್ದಾಳಿ
- ರಾಜ್ಯಪರ ಸೊಲ್ಲೆತ್ತದ ಸಂಸದರ ವಿರುದ್ಧವೂ ಆಕ್ರೋಶ

ಬೆಂಗಳೂರು, ಅ.21(ಕೆಎಂಶಿ)– ಕಳೆದ 8 ವರ್ಷಗಳಿಂದ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ ಭಾರತದ ನಾಗರಿಕರನ್ನು ಸುಲಿದ ಪ್ರಧಾನಿ ನರೇಂದ್ರ ಮೋದಿ ಈಗ ತೆರಿಗೆ ಕಡಿತಗೊಳಿಸಿ ದೀಪಾವಳಿ ಗಿಫ್ಟ್ ನೀಡಿದ್ದೇವೆ ಎಂಬುದಾಗಿ ಜಾಹೀರಾತು ನೀಡುವ ಮೂಲಕ ನಾಚಿಕೆ ಇಲ್ಲದೆ, ತಮ್ಮ ಬೆನ್ನು ತಾವೇ ತಟ್ಟಿಕೊಳ್ಳುತ್ತಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ವ್ಯಂಗ್ಯವಾಡಿದ್ದಾರೆ.

ದೀಪಾವಳಿ ಗಿಫ್ಟ್ ಎಂಬುದಾಗಿ ಜಾಹೀರಾತು ನೀಡಿರುವ ಮೋದಿ ಸರ್ಕಾರದ ತೆರಿಗೆ ಮಾರ್ಪಾಡಿನಿಂದ ರಾಜ್ಯದ ಜನರಿಗೆ 15,000 ಕೋಟಿ ರೂ. ನಷ್ಟವಾಗಿದೆ ಎಂದು ಲೆಕ್ಕ ಬಿಚ್ಚಿಟ್ಟಿದ್ದಾರೆ.

ರಾಜ್ಯದ ವಾಣಿಜ್ಯ ಕೇಂದ್ರ ನಗರದ ಚಿಕ್ಕಪೇಟೆಯಲ್ಲಿ ರಸ್ತೆ ವೈಟ್ ಟಾಪಿಂಗ್ ಮತ್ತು ಮೂಲಸೌಕರ್ಯಕ್ಕೆ ಚಾಲನೆ ನೀಡಿ ವಾಣಿಜ್ಯೋದ್ಯಮಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಕೇಂದ್ರ ಸರ್ಕಾರವನ್ನು ತೀವ್ರ ತರಾಟೆಗೆ ತೆಗೆದುಕೊಂಡರು.

ಜಿಎಸ್‌ಟಿ ಅನುಷ್ಠಾನದ ನಂತರ ರಾಜ್ಯದಿಂದ ದೊಡ್ಡ ಪ್ರಮಾಣದಲ್ಲಿ ಕೇಂದ್ರಕ್ಕೆ ನಮ್ಮ ಪಾಲಿನ ಹಣ ಹರಿದು ಹೋಗುತ್ತಿದೆ. ಆದರೆ, ನಮಗೆ ಬರಬೇಕಾದ ಪಾಲಿನಲ್ಲಿ ಶೇಕಡ 50ರಷ್ಟನ್ನೂ ನೀಡುತ್ತಿಲ್ಲ ಎಂದರು. ನಮ್ಮ ಸರ್ಕಾರ ಬಂದ ನಂತರ ಐದು ಗ್ಯಾರಂಟಿ ಯೋಜನೆಗಳ ಪೂರ್ಣ ಅನುಷ್ಠಾನದ ಜೊತೆಗೆ ಮೂಲಸೌಕರ್ಯ



ಬೆಂಗಳೂರಿನ ಚಿಕ್ಕಪೇಟೆಯಲ್ಲಿ ರಸ್ತೆ ವೈಟ್ ಟಾಪಿಂಗ್ ಮತ್ತು ಮೂಲಸೌಕರ್ಯಕ್ಕೆ ಚಾಲನೆ ನೀಡಲಾಯಿತು.

ಕಲ್ಪಿಸಲು ನಮ್ಮಲ್ಲೇ ಆದಾಯ ಸಂಪನ್ಮೂಲ ಕ್ರೋಢೀಕರಣಕ್ಕೆ ಒತ್ತು ಕೊಟ್ಟಿದ್ದೇವೆ.

ನಾಡಪ್ರಭು ಕೆಂಪೇಗೌಡ ಆಡಳಿತ ಕಾಲದಲ್ಲಿ ಪೇಟೆ ಬೀದಿಯಾಗಿದ್ದ ಪೇಟೆಗಳು ಈಗಲೂ ಆ ಕಾಲದ ಛಾಪನ್ನೇ ಹೊಂದಿವೆ. ಇಲ್ಲಿನ ರಸ್ತೆಗಳ ಅಗಲೀಕರಣಕ್ಕೆ ಚಿಂತಿಸಿದ್ದೆವು. ಆದರೆ ದಿನೇಶ್ ಗುಂಡೂರಾವ್ ಒಪ್ಪಲಿಲ್ಲ. ನಮ್ಮ ಜನಗಳಿಗೆ ಸಮಸ್ಯೆ ಆಗುತ್ತೆ ಸರ್ ಎಂದು ಸ್ಪಷ್ಟವಾಗಿ ನಿರಾಕರಿಸಿ, ರಸ್ತೆ ಅಗಲೀಕರಣ ಮಾಡದೆ, ರಸ್ತೆಗಳ ಆಧುನೀಕರಣ ಮತ್ತು ಚಿಕ್ಕಪೇಟೆ ಅಭಿವೃದ್ಧಿಗೆ ಯೋಜನೆ ರೂಪಿಸಿ ಜಾರಿ ಮಾಡಿದ್ದಾರೆ ಎಂದು ಶ್ಲಾಘಿಸಿದರು.

ಬೆಂಗಳೂರು ವಿಪರೀತವಾಗಿ ಬೆಳೆಯುತ್ತಿರುವ ನಗರ, ಜನಸಂಖ್ಯೆ ಹೆಚ್ಚುತ್ತಿರುವ ಸವಾಲಿನ ಜೊತೆಗೆ ಬೆಂಗಳೂರಿನ ರಸ್ತೆಗಳ ಆಧುನೀಕರಣ ಮತ್ತು ಅಭಿವೃದ್ಧಿಗೆ ಹೇರಳ ಹಣ ಒದಗಿಸುತ್ತಿದ್ದೇವೆ.

ಬೆಂಗಳೂರು ಮೆಟ್ರೋಗೆ ಶೇ.87 ರಷ್ಟು ಹಣ ಕೊಡುವುದು ನಾವೇ. ಅಂದರೆ, ರಾಜ್ಯದ ಜನತೆಯ ಶೇ.87 ರಷ್ಟು ಹಣದಲ್ಲಿ ಮೆಟ್ರೋ ಆಗಿದೆ. ಆದರೆ, ಬಿಜೆಪಿ ಮೆಟ್ರೊ ಕೇಂದ್ರದ ಯೋಜನೆ ಎಂದು ತಿರುಚಿ ಸುಳ್ಳು ಹೇಳುತ್ತದೆ. 1.20 ಲಕ್ಷ ಕೋಟಿ ರೂ. ವೆಚ್ಚದಲ್ಲಿ ಬೆಂಗಳೂರಿನ ಅಭಿವೃದ್ಧಿಗೆ ಮುಂದಾಗಿದ್ದೀವಿ. ಕೇಂದ್ರದಿಂದ ನಯಾಪೈಸೆ ಕೊಡುತ್ತಿಲ್ಲ ಎಂದರು. ಬಿಜೆಪಿ ಅಧಿಕಾರದಲ್ಲಿದ್ದಾಗ ಒಂದೇ ಒಂದು ಹೊಸ ರಸ್ತೆ ನಿರ್ಮಿಸಲಿಲ್ಲ. ಒಂದೇ ಒಂದು ರಸ್ತೆ ಗುಂಡಿ ಮುಚ್ಚಲಿಲ್ಲ. ಈಗ ಇರುವ ರಸ್ತೆಗಳೆಲ್ಲಾ ಕಾಂಗ್ರೆಸ್ ಸರ್ಕಾರದ ಕಾಲದಲ್ಲೇ ಆಗಿರುವಂಥವು.

ಬಿಜೆಪಿ ನಾಯಕರಾದ ಆರ್.ಅಶೋಕ್, ಬಿ.ವೈ.ವಿಜಯೇಂದ್ರ ಸೇರಿ ಯಾರ ಮಾತೂ ಸ್ವಂತದ್ದಲ್ಲ. ಆರ್‌ಎಸ್‌ಎಸ್ ಬರೆದು ಕೊಟ್ಟಿದ್ದನ್ನು ಓದಿ ಹೋಗುವುದಷ್ಟೆ ಇವರ ಕೆಲಸ ಎಂದರು. ಈ ಬಗ್ಗೆ ವಿಧಾನ ಸಭಾ ಅಧಿವೇಶನ ವೇಳೆ ಆರ್.ಅಶೋಕ್‌ಗೆ ಕೇಳಿದ್ದೆ. ಆಗ ಅವರು, ಏನು ಮಾಡೋದು ಸರ್, ಆರ್‌ಎಸ್‌ಎಸ್‌ನವರು ಬಂದು ಕೂತಿರ್ತಾರೆ. ಅವರು ಹೇಳಿದ್ದನ್ನು ಹೇಳದೇ ಹೋದರೆ ನಮ್ಮನ್ನು ಬಿಡಲ್ಲ ಸಾರ್ ಎಂದಿದ್ದರು.

ಒಂದು ವಾರದಲ್ಲಿ ರಸ್ತೆ ಗುಂಡಿಗಳನ್ನೆಲ್ಲಾ ಮುಚ್ಚಿ ಒಂದು ಲೇಯರ್ ಟಾರ್ ಹಾಕಬೇಕು ಎಂಬುದಾಗಿ ಗ್ರೇಟರ್ ಬೆಂಗಳೂರು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರಿಗೆ ವೇದಿಕೆಯಿಂದಲೇ ಸೂಚನೆ ನೀಡಿದರು. ಕ್ಷೇತ್ರದ ಸಂಸದ ಪಿ.ಸಿ.ಮೋಹನ್ ನಿಮ್ಮ ಪರವಾಗಿ ಪಾರ್ಲಿಮೆಂಟಿನಲ್ಲಿ ಬಾಯಿ ಬಿಟ್ಟಿದ್ದಾರಾ ಹೇಳಿ, ಸಂಸದ ತೇಜಸ್ವಿ ಸೂರ್ಯ ಅವರನ್ನು ನಾನು ಅಮವಾಸೆ ಸೂರ್ಯ ಅಂತ ಕರಿತೀನಿ. ರಾಜ್ಯಕ್ಕೆ ಆಗುತ್ತಿರುವ ಅನ್ಯಾಯ, ದ್ರೋಹದ ಬಗ್ಗೆ ಅಮವಾಸೆ ಸೂರ್ಯ ಇವತ್ತಿನವರೆಗೆ ಬಾಯಿ ಬಿಟ್ಟಿದ್ದಾರಾ.

ಸಚಿವರಾದ ಶೋಭಾ ಕರಂದ್ಲಾಜೆ, ಹೆಚ್.ಡಿ. ಕುಮಾರಸ್ವಾಮಿ ಪ್ರಧಾನಿ ಮೋದಿ ಸರ್ಕಾರದಿಂದ ರಾಜ್ಯಕ್ಕೆ ಆಗುತ್ತಿರುವ ಮೋಸ, ದ್ರೋಹದ ಬಗ್ಗೆ ಒಂದೇ ಒಂದು ದಿನ ಬಾಯಿ ಬಿಟ್ಟಿದ್ದಾರಾ. ಇಂಥವರನ್ನು ಗೆಲ್ಲಿಸಿ ನಿಮಗಾಗಲೀ, ರಾಜ್ಯಕ್ಕಾಗಲೀ, ಗೆದ್ದ ಲೋಕಸಭಾ ಕ್ಷೇತ್ರಕ್ಕಾಗಲೀ ಏನು ಸಿಕ್ಕಿದೆ ಹೇಳಿ ಎಂದು ಪ್ರಶ್ನಿಸಿದರು.

ಧರ್ಮಸ್ಥಳ ಪ್ರಕರಣ

ಎಸ್‌ಐಟಿ ಮುಂದುವರಿಕೆಗೆ ಸಿಎಂ ಸಿದ್ದರಾಮಯ್ಯಗೆ ಮನವಿ

ಬೆಂಗಳೂರು: ಧರ್ಮಸ್ಥಳದಲ್ಲಿ ನಡೆದಿವೆ ಎನ್ನಲಾದ ಮಹಿಳೆಯರ ಮೇಲಿನ ಎಲ್ಲ ದೌರ್ಜನ್ಯ ಪ್ರಕರಣಗಳನ್ನೂ ವಿಶೇಷ ತನಿಖಾ ತಂಡದ (ಎಸ್‌ಐಟಿ) ವ್ಯಾಪ್ತಿಗೆ ತರಬೇಕು. ತಾರ್ಕಿಕ ಅಂತ್ಯದವರೆಗೂ ಎಸ್‌ಐಟಿ ತನಿಖೆ ಮುಂದುವರೆಸಬೇಕು ಎಂದು ಮಹಿಳಾ ಹೋರಾಟಗಾರರು, ಲೇಖಕಿಯರು ಒತ್ತಾಯಿಸಿದರು.

ಕೊಂದವರು ಯಾರು ಆಂದೋಲನ'ದ ನೇತೃತ್ವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ಮಹಿಳಾ ನಿಯೋಗ, ಧರ್ಮಸ್ಥಳ ಪ್ರಕರಣಗಳಲ್ಲಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಲು ಸಿಬಿಐ ಕೋರ್ಟ್ ಹೇಳಿದೆ. ಈ ಕುರಿತು ಕ್ರಮ ಕೈಗೊಳ್ಳಬೇಕು. ಎಸ್‌ಐಟಿ ತನಿಖೆಯನ್ನು ಸಮಗ್ರವಾಗಿ ನಡೆಸಬೇಕು. ತಾರ್ಕಿಕ ಅಂತ್ಯದವರೆಗೂ ಸ್ಥಗಿತಗೊಳಿಸಬಾರದು ಎಂದು ಮನವಿ ಮಾಡಿತು.

ಮಹಿಳೆಯರು ಹಾಗೂ ಸಮಾನ ಮನಸ್ಕರು ಸೇರಿ 'ಕೊಂದವರು ಯಾರು ಆಂದೋಲನ' ರಚಿಸಿದ್ದೇವೆ. ಧರ್ಮಸ್ಥಳದ ದೌರ್ಜನ್ಯ ಪ್ರಕರಣಗಳಲ್ಲಿ ನೊಂದ ಮಹಿಳೆಯರ ಪರವಾಗಿ ಆಂದೋಲನ ಧ್ವನಿ ಎತ್ತುತ್ತಿದೆ. ಸರ್ಕಾರ ನೊಂದವರಿಗೆ ನ್ಯಾಯ ಸಿಗುವಂತೆ ನೋಡಿಕೊಳ್ಳಬೇಕು ಎಂದು ಕೋರಿದರು.

ಬಿ.ಎನ್.ತುಂಗಮ್ಮ ನಿಧನ

ಮೈಸೂರು, ಅ.21– ಮೈಸೂರು ಭಾರತೀ ಪ್ರಕಾಶನ ಸಂಸ್ಥಾಪಕ ಲೇಟ್ ಬಿ.ನರಸಿಂಗರಾವ್ ಅವರ ಧರ್ಮಪತ್ನಿ ಬಿ.ಎನ್.ತುಂಗಮ್ಮ (96) ಮಂಗಳವಾರ ಮಧ್ಯಾಹ್ನ ನಿಧನರಾದರು.



ಮೃತರು ಪುತ್ರ ಭಾರತೀ ಪ್ರಕಾಶನದ ಮಾಲೀಕ ಬಿ.ಎನ್.ಶ್ರೀನಿವಾಸ್, ಸೊಸೆಯಿಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಬೆಳಗ್ಗೆ 7 ಗಂಟೆಗೆ ಚಾಮುಂಡಿ ಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ

ಮಾಣಿಕ್ಯಪುರದಲ್ಲಿ ಶ್ರೀ ಶನೇಶ್ವರಸ್ವಾಮಿ ದೇವಸ್ಥಾನ ಉದ್ಘಾಟನೆ; ದೇವರ ಪ್ರತಿಷ್ಠಾಪನೆ

ಮೈಸೂರು, ಅ.21– ತಾಲೂಕಿನ ಇಲವಾಲ ಹೋಬಳಿ ಮಾಣಿಕ್ಯಪುರ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಶನೇಶ್ವರಸ್ವಾಮಿ ದೇವಸ್ಥಾನ ಉದ್ಘಾಟನೆ ಹಾಗೂ ದೇವರ ಪ್ರತಿಷ್ಠಾಪನೆ ಕಾರ್ಯಕ್ರಮವನ್ನು ಅ.29 ಹಾಗೂ 30ರಂದು ಏರ್ಪಡಿಸಲಾಗಿದೆ.

ಮೊದಲ ದಿನ ಬೆಳಗ್ಗೆ ಮಹಾಗಣಪತಿ ಪೂಜೆ, ಪುಣ್ಯಾಹ, ನಾಂದಿಪೂಜೆ, ಕಳಸ ಸ್ಥಾಪನೆ, ಬಲಿ ಸ್ಥಾಪನೆ ಮಹಾಮಂಗಳಾರತಿ, ಸಂಜೆ ಮೂರ್ತಿಶುದ್ಧಿ, ಅಗ್ನಿಸೂಕ್ತ, ಪಾರಾಯಣ, ಜಲಧಿವಾಸ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳು ನಡೆಯಲಿವೆ. ಎರಡನೇ ದಿನ ಬೆಳಗ್ಗೆ ಕನ್ಯಾಲಗ್ನದಲ್ಲಿ ಪ್ರತಿಸ್ಥಾಪನೆ, ನವಗ್ರಹ ಸಮೇತ ಶನೇಶ್ವರಸ್ವಾಮಿ ಪೂಜೆ, ಮಹಾಯಾಗ, ಮೂಲಮಂತ್ರ ಹೋಮ, ಸ್ವಾಮಿಗೆ ಪೂರ್ಣಾಹುತಿ, ಕುಂಭಾಭಿಷೇಕ, ಪಂಚಾಮೃತ ಅಭಿಷೇಕ, ಅಲಂಕಾರ, ಮಹಾಮಂಗಳಾರತಿ ನೆರವೇರಲಿದೆ. ಭಕ್ತರಿಗೆ ಅನ್ನ ಸಂತರ್ಪಣೆಯೂ ನಡೆಯಲಿದೆ.

ಶ್ರೀಗಳು, ಗಣ್ಯರು ಭಾಗಿ: ಅ.30ರಂದು ಬೆಳಗ್ಗೆ 10ಕ್ಕೆ ಸುತ್ತೂರು ಮಠದ ಶ್ರೀ ಶಿವರಾತ್ರೀಶ್ವರ ದೇಶಿಕೇಂದ್ರ ಸ್ವಾಮೀಜಿ, ದೇವನೂರು ಗುರುಮಲ್ಲೇಶ್ವರ ದಾಸೋಹ ಮಠದ ಶ್ರೀ ಮಹಾಂತ ಸ್ವಾಮೀಜಿ, ಮಡಿವಾಳಸ್ವಾಮಿ ಮಠದ ಶ್ರೀ ಇಮ್ಮಡಿ ಮಡಿವಾಳಸ್ವಾಮೀಜಿ, ಶೆಟ್ಟಿನಾಯಕನಹಳ್ಳಿ ಮಠದ ಶ್ರೀ ಬಸವಣ್ಣ ಸ್ವಾಮೀಜಿ, ದೇವಲಾಪುರದ ಶ್ರೀ ಜಡೇಸ್ವಾಮೀಜಿ ಸಾನ್ನಿಧ್ಯದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ನೂತನ ದೇವಸ್ಥಾನದ ಉದ್ಘಾಟನೆ ನೆರವೇರಿಸಲಿದ್ದಾರೆ.

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಧ್ಯಕ್ಷತೆ ವಹಿಸಲಿದ್ದು, ಹುಣಸೂರು ಶಾಸಕ ಜಿ.ಡಿ.ಹರೀಶ್ ಗೌಡ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ. ಅಂದು ಮಧ್ಯಾಹ್ನ 12ಕ್ಕೆ ಸಿದ್ದರಾಮು ಮತ್ತು ತಂಡದವರಿಂದ ಶನಿಪ್ರಭಾವ ಅಥವಾ ರಾಜಾವಿಕ್ರಮ ಕತೆ ಹಾಗೂ ಮುಂಜಾನೆ 5ಕ್ಕೆ ಮಾದಹಳ್ಳಿ ಸೋಮಣ್ಣ ಮತ್ತು ತಂಡದವರಿಂದ ವೀರಗಾಸೆ ಪ್ರಸ್ತುತಿ ಇರಲಿದೆ.

ಮಡ್ ಕಬಡ್ಡಿ ಪಂದ್ಯಾವಳಿ 'ದೀಪಾವಳಿ ಕಪ್–2025'ಕ್ಕೆ ಚಾಲನೆ



ಮೈಸೂರು ವಿಭಾಗಮಟ್ಟದ ಹೊನಲು ಬೆಳಕಿನ ಮಡ್ ಕಬಡ್ಡಿ ಪಂದ್ಯಾವಳಿಯ 'ದೀಪಾವಳಿ ಕಪ್–2025'ಕ್ಕೆ ಮಂಗಳವಾರ ಚಾಲನೆ ನೀಡಲಾಯಿತು.

ಮೈಸೂರು, ಅ.21(ಎಸ್‌ಪಿಎನ್)– ದೀಪಾವಳಿ ಹಬ್ಬ ಮತ್ತು ಶ್ರೀ ಮಲೆ ಮಹದೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಏರ್ಪಡಿಸಿರುವ ಮೈಸೂರು ವಿಭಾಗಮಟ್ಟದ ಹೊನಲು ಬೆಳಕಿನ ಮಡ್ ಕಬಡ್ಡಿ ಪಂದ್ಯಾವಳಿಯ 'ದೀಪಾವಳಿ ಕಪ್–2025'ಕ್ಕೆ ಮಂಗಳವಾರ ಚಾಲನೆ ದೊರೆಯಿತು.

ಮೈಸೂರು ಕುಂಬಾರಕೊಪ್ಪಲಿನ ಕೆಂಪೇಗೌಡ ಕ್ರೀಡಾಂಗಣದಲ್ಲಿ ದೀಪಾವಳಿ ಹಬ್ಬ ಹಾಗೂ ಶ್ರೀ ಮಲೆ ಮಹದೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಎಂ.ಜಿ.ಗ್ರೂಪ್ಸ್, ಗಂಧರ್ವ ಸ್ಪೋರ್ಟ್ಸ್ ಕ್ಲಬ್ ಹಾಗೂ ಕುಂಬಾರಕೊಪ್ಪಲು ಗ್ರಾಮಸ್ಥರ ಸಹಯೋಗದೊಂದಿಗೆ ಹೊನಲು ಬೆಳಕಿನ ಮಡ್ ಕಬಡಿ ಪಂದ್ಯಾವಳಿಗೆ ಮೈಸೂರು ಅಮೇಚೂರ್ ಕಬಡ್ಡಿ ಅಸೋಸಿಯೇಷನ್ ಅಧ್ಯಕ್ಷ ಅನಿಲ್ ಕುಮಾರ್ ಚಾಲನೆ ನೀಡಿದರು .

ಬಳಿಕ ಮಾತನಾಡಿದ ಅವರು, ಕುಂಬಾರಕೊಪ್ಪಲು ಗ್ರಾಮಸ್ಥರು ಧಾರ್ಮಿಕ ಹಬ್ಬಗಳ ಆಚರಣೆ ಜೊತೆಗೆ ಕ್ರೀಡೆಗೆ ಹೆಚ್ಚಿನ ಆದ್ಯತೆ ನೀಡಿರುವುದು ಸಂತೋಷದ ವಿಚಾರ. ಈ ಮಾದರಿಯಲ್ಲಿ ನಗರದ ಬೇರೆ ಬಡಾವಣೆಗಳಲ್ಲೂ ಕ್ರೀಡೆಗಳನ್ನು ಆಯೋಜಿಸಿದರೆ, ಆಯಾಯ ಬಡಾವಣೆಗಳ ವಿದ್ಯಾರ್ಥಿಗಳಿಗೆ ಕ್ರೀಡಾ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಲು ಆಸಕ್ತಿ ಹೆಚ್ಚುತ್ತದೆ ಎಂದರು.

ಉದ್ಘಾಟನೆಯ ಮೊದಲ ಪಂದ್ಯವಾಗಿ ಗಂಧರ್ವ ಸ್ಪೋಟ್ಸ್ ಕ್ಲಬ್ ವರ್ಸಸ್ ಸಂಯುಕ್ತ ಮೇಟಗಳ್ಳಿ ತಂಡ ಭಾಗವಹಿಸಿದ್ದವು. ಈ ಪಂದ್ಯ ಸಮಬಲದೊಂದಿಗೆ ಮುಕ್ತಾಯಗೊಂಡಿತು.

ಎರಡನೇ ಪಂದ್ಯದಲ್ಲಿ ಬಸವನಗುಡಿ ಬಾಯ್ಸ್ ವರ್ಸಸ್ ಸೆವನ್ ಸ್ಟಾರ್ ಹೆಬ್ಬಾಳ ತಂಡ ಭಾಗಿಯಾಗಿ ಸೆವನ್ ಸ್ಟಾರ್ ಹೆಬ್ಬಾಳ ತಂಡ ಜಯಗಳಿಸಿತು. ಮೂರನೇ ಪಂದ್ಯದಲ್ಲಿ ಮಂಡ್ಯದ ನೆಲ್ಮನೆ ತಂಡ ವರ್ಸಸ್ ಎಸ್‌ಎಂಎಸ್‌ಜಿ ಮಹದೇಶ್ವರ ಬಡಾವಣೆ ತಂಡ ಪಾಲ್ಗೊಂಡು ಇದರಲ್ಲಿ ನೆಲ್ಮನೆ ತಂಡ ಗೆಲುವು ಸಾಧಿಸಿತು ಎಂದು ಆಯೋಜಕರಾದ ರವಿರಾಜ್ ಮಾಹಿತಿ ನೀಡಿದರು. ಇನ್ನುಳಿದಂತೆ ಈ ಆರು ತಂಡಗಳು ಜೊತೆಗೆ ಒಟ್ಟು 29 ತಂಡಗಳು ನೋಂದಣಿಯಾಗಿದ್ದು ಬುಧವಾರವೂ ಪಂದ್ಯಾವಳಿ ಮುಂದುವರೆಯಲಿದೆ.

ಈ ವೇಳೆ ಕುಂಬಾರಕೊಪ್ಪಲು ಅಭ್ಯುದಯ ಸಂಘದ ಕಾರ್ಯದರ್ಶಿ ಪ್ರಸನ್ನ, ರಾಮುಪ್ರಸಾದ್ ಹಾಗೂ ಕುಂಬಾರಕೊಪ್ಪಲಿನ ಗ್ರಾಮಸ್ಥರು, ಮುಖಂಡರು ಭಾಗಿಯಾಗಿದ್ದರು.

ಪತ್ನಿ ಕಿರುಕುಳ; ರೈಲಿಗೆ ತಲೆಕೊಟ್ಟ ನವವಿವಾಹಿತ

ರಾಮನಗರ: ಕೌಟುಂಬಿಕ ಕಲಹದಿಂದ ಬೇಸತ್ತು ವ್ಯಕ್ತಿಯೊಬ್ಬ ರೈಲಿಗೆ ತಲೆ ಕೊಟ್ಟು ಆತ್ಮಹತ್ಯೆ ಮಾಡಿಕೊಂಡ ಘಟನೆ ಬಿಡದಿ ರೈಲು ನಿಲ್ದಾಣದ ಸಮೀಪ ನಡೆದಿದೆ.

ಆತ್ಮಹತ್ಯೆಗೆ ಶರಣಾದವನನ್ನು ಹಾರೋಹಳ್ಳಿ ತಾಲೂಕಿನ ಅಣ್ಣೆದೊಡ್ಡಿ ಗ್ರಾಮದ ರೇವಂತ್ ಕುಮಾರ್ (30) ಎಂದು ಗುರುತಿಸಲಾಗಿದೆ. ಬಿಡದಿಯ ಕೈಗಾರಿಕಾ ಪ್ರದೇಶದಲ್ಲಿ ಕೆಲಸ ಮಾಡುತ್ತಿದ್ದ ರೇವಂತ್, ಕಳೆದ ಐದು ತಿಂಗಳ ಹಿಂದಷ್ಟೇ ಮಲ್ಲಿಕಾ ಎಂಬುವರನ್ನು ಮದುವೆಯಾಗಿದ್ದ. ಆತ್ಮಹತ್ಯೆಗೂ ಮುನ್ನ ರೇವಂತ್ ಮೊಬೈಲ್‌ನಲ್ಲಿ ವೀಡಿಯೋ ಮಾಡಿದ್ದಾನೆ.

ವೀಡಿಯೋದಲ್ಲಿ ನನಗೆ ಬದುಕಲು ಆಗ್ತಿಲ್ಲ. ಹೆಂಡತಿಯಿಂದ ತುಂಬಾ ಟಾರ್ಚರ್ ಆಗ್ತಿದೆ. ಸಿಕ್ಕಾಪಟ್ಟೆ ಕಿರುಕುಳ ಕೊಡ್ತಿದ್ದಾಳೆ. ನನ್ನ ಸಾವಿಗೆ ಅವಳೇ ಕಾರಣ ಎಂದು ಆರೋಪಿಸಿದ್ದಾನೆ. ಸ್ಥಳಕ್ಕೆ ರೈಲ್ವೇ ಪೊಲೀಸರು ಭೇಟಿ ನೀಡಿ, ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಮೈಸೂರಲ್ಲಿ ಪುಂಡರ ಹಾವಳಿಗೆ ಕಡಿವಾಣ ಹಾಕಲು ಪೊಲೀಸರ ಕಟ್ಟುನಿಟ್ಟಿನ ಕ್ರಮ

- ಸಾರ್ವಜನಿಕವಾಗಿ ಮದ್ಯಪಾನ, ಧೂಮಪಾನ ಮಾಡುವವರ ವಿರುದ್ಧ ಪ್ರಕರಣ ದಾಖಲು
- ಅಪರಾಧ ಕೃತ್ಯಗಳ ಸಂಬಂಧ ಮಾಹಿತಿ ನೀಡಲು ಜನರಲ್ಲಿ ಅರಿವು

ಮೈಸೂರು,ಅ.21(ಎಸ್‌ಪಿಎನ್)– ನಗರದ ವಿವಿಧೆಡೆ ಪುಂಡರು, ಕುಡುಕರ ಹಾವಳಿ ತಪ್ಪಿಸಲು ಸರಸ್ವತಿಪುರಂ, ಅಶೋಕಪುರಂ, ಕೃಷ್ಣರಾಜ, ಲಕ್ಷ್ಮೀಪುರಂ, ಮೇಟಗಳ್ಳಿ ಹಾಗೂ ಹೆಬ್ಬಾಳ ಪೊಲೀಸರು ತಮ್ಮತಮ್ಮ ಠಾಣಾ ವ್ಯಾಪ್ತಿಯಲ್ಲಿ ಗಸ್ತು ತಿರುಗಿ ಕೋಪ್ಟಾ ಕಾಯ್ದೆಯಡಿ 27 ಪ್ರಕರಣ, ಸಾರ್ವಜನಿಕವಾಗಿ ಮದ್ಯಪಾನ ಮಾಡುತ್ತಿದ್ದ ನಾಲ್ವರು ಕುಡುಕರ ವಿರುದ್ಧ ಪ್ರಕರಣ ದಾಖಲಿಸಿ, ಕಠಿಣ ಸಂದೇಶ ನೀಡಿದ್ದಾರೆ.

ನಾಲ್ವರ ವಿರುದ್ಧ ಪ್ರಕರಣ ದಾಖಲು: ಸರಸ್ವತಿಪುರಂ ಪೊಲೀಸರು ಕೆ.ಜಿ. ಕೊಪ್ಪಲು, ಶಾರದಾದೇವಿ ನಗರ ಹಾಗೂ ಬೋಗಾದಿ ರಿಂಗ್ ರಸ್ತೆಯಲ್ಲಿ ಏರಿಯಾ ಡಾಮಿನೇಷನ್ ನಡೆಸುವ ವೇಳೆ ಬೋಗಾದಿ ರಿಂಗ್ ರಸ್ತೆಯಲ್ಲಿ ಮದ್ಯಪಾನ ಮಾಡುತ್ತಿದ್ದ ನಾಲ್ವರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಹಾಗೆಯೇ ಬೀದಿಬದಿ



ಮೈಸೂರಿನ ಕೆಲವೆಡೆ ಮೈಸೂರು ನಗರ ಕಾನೂನು ಸುವ್ಯವಸ್ಥೆ ವಿಭಾಗದ ಡಿಸಿಪಿ ಬಿಂದುಮಣಿ ನೇತೃತ್ವದಲ್ಲಿ ಪೊಲೀಸರು ಗಸ್ತು ಚುರುಕುಗೊಳಿಸಿದ್ದಾರೆ.

ಸಿಗರೇಟ್ ಸೇದುತ್ತಿದ್ದವರ ವಿರುದ್ಧ ಕೋಪ್ಟಾ ಕಾಯ್ದೆಯಡಿ ಪ್ರಕರಣ ದಾಖಲಿಸಿದ್ದಾರೆ. ಅಲ್ಲಲ್ಲಿ ಗುಂಪು ಕಟ್ಟಿಕೊಂಡು ಪಾದಚಾರಿಗಳಿಗೆ ತೊಂದರೆ ನೀಡುತ್ತಿದ್ದವರಿಗೂ ಬಿಸಿಮುಟ್ಟಿಸಿದ್ದಾರಲ್ಲದೆ, ಲಾಡ್ಜ್, ಬಾರ್ ಅಂಡ್ ರೆಸ್ಟೋರೆಂಟ್, ಅನುಮಾನಾಸ್ಪದ ವ್ಯಕ್ತಿಗಳ ವಿಚಾರಣೆ ಹಾಗೂ ವಾಹನ ತಪಾಸಣೆ ನಡೆಸಿದ್ದು, ಸರಸ್ವತಿಪುರಂ ಪಿಜಿಗಳಲ್ಲಿ

> ಮೈಸೂರು ಪೊಲೀಸರು ತಮ್ಮ ತಮ್ಮ ಠಾಣಾ ವ್ಯಾಪ್ತಿಯ ಕೆಲ ಬೀದಿಗಳಲ್ಲಿ ಸರದಿ ಪ್ರಕಾರ ಗಸ್ತು ತಿರುಗಿದ್ದಾರೆ. ಆದರೆ, ಬಡಾವಣೆಯ ಬೀದಿಗಳಲ್ಲಿ ಪುಂಡ–ಪೋಕರಿಗಳು ಸಣ್ಣ ಪುಟ್ಟ ವಿಷಯಗಳಿಗೂ ಗಲಾಟೆ ಹೆಚ್ಚಾಗುತ್ತಿವೆ. ಕೆಲವೊಮ್ಮ ಈ ಗಲಾಟೆ ಅತಿರೇಕಕ್ಕೂ ತಿರುಗಿವೆ. ಮೈಸೂರು ಕೆಲ ಬಡಾವಣೆಗಳಲ್ಲಿ ಅಪ್ರಾಪ್ತ ಮಕ್ಕಳು ಗುಂಪುಗೂಡಿ ಸಿಗರೇಟ್ ಸೇವನೆ, ಪಬ್ ಜೀ ಗೇಮ್ ಆಡುತ್ತಿದ್ದು, ಹೆಣ್ಣು ಮಕ್ಕಳ ಓಡಾಟಕ್ಕೆ ತೊಂದರೆ ಕೊಡುತ್ತಿದ್ದಾರೆ. ಅಪ್ರಾಪ್ತ ಮಕ್ಕಳಿಗೆ ಸಿಗರೇಟ್ ಮಾರಾಟ ಮಾಡಬಾರದು ಎಂಬ ನಿಯಮ ಕೇವಲ ಪುಸ್ತಕದಲ್ಲಿರುವಂತೆ ಆಗಿದೆ. ದಯವಿಟ್ಟು ಪೊಲೀಸರು ಕ್ರಮ ಜರುಗಿಸಿ ಎಂದು ಮೈಸೂರು ಸಿಟಿ ಪೊಲೀಸ್ ಫೇಸ್‌ಬುಕ್ ಪೇಜ್‌ನಲ್ಲಿ ನಾಗರಿಕರೊಬ್ಬರು ಪೋಸ್ಟ್ ಹಾಕಿದ್ದಾರೆ.

ಏನೇ ಪ್ರಕರಣಗಳು ಜರುಗಿದ್ದರೂ ನಮ್ಮ ವಾಟ್ಸಾಪ್ ಗ್ರೂಪ್‌ಗಳಲ್ಲಿ ಮಾಹಿತಿ ಪಡೆಯಲು ನಿರ್ಧರಿಸಿದ್ದಾರೆ. ಅಂತೆಯೇ ಕೆ.ಆರ್. ಠಾಣೆ ವ್ಯಾಪ್ತಿಯ ಪ್ರಮುಖ ರಸ್ತೆಗಳಲ್ಲಿ ಪೊಲೀಸರು ಗಸ್ತು ಆರಂಭಿಸಿದ್ದಾರೆ.

27 ಕೋಪ್ಟಾ ಪ್ರಕರಣ: ಮೇಟಗಳ್ಳಿ ಪೊಲೀಸರು ಏರಿಯಾ ಡಾಮಿನೇಷನ್ ನಡೆಸುವ ವೇಳೆ ಬೀದಿಬದಿ ಟೀ ಅಂಗಡಿಗಳಲ್ಲಿ ಗುಂಪುಕಟ್ಟಿಕೊಂಡು ಸಿಗರೇಟ್ ಸೇದಿ ಪಾದಚಾರಿಗಳಿಗೆ ತೊಂದರೆ ನೀಡುತ್ತಿದ್ದ 27 ಮಂದಿ ವಿರುದ್ಧ ಕೋಪ್ಟಾ ಕಾಯ್ದೆಯಡಿ ನೂರು ರೂ.ನಂತೆ ಒಟ್ಟು 2700 ದಂಡ ವಿಧಿಸಿದ್ದಾರಲ್ಲದೆ, ಬಿಎಂಶ್ರೀ ನಗರ, ಕೆಆರ್‌ಎಸ್ ರಸ್ತೆ, ಹೆಬ್ಬಾಳ ಮುಖ್ಯ ರಸ್ತೆಯಲ್ಲಿ ಗಸ್ತು ತಿರುಗಿ ಅಲ್ಲಿ ವಾಹನ ತಪಾಸಣೆ, ಬೀದಿಬದಿ ವ್ಯಾಪಾರಿಗಳು ಇನ್ಮುಂದೆ ನಿಗಧಿತ ವೇಳೆಗೆ ವ್ಯಾಪಾರ ಬಂದ್ ಮಾಡಿ ಕಾನೂನು ಸುವ್ಯವಸ್ಥೆ ಕಾಪಾಡಲು ಸಹಕರಿಸುವಂತೆ ಮನವಿ ಮಾಡಿದ್ದಾರೆ. ಈ ವೇಳೆ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವವರ ವಿಚಾರಣೆ ನಡೆಸಿ, ಕೆಲವರನ್ನು ವಶಕ್ಕೆ ಪಡೆದಿದ್ದಾರೆ. ಈ ಗಸ್ತಿನಲ್ಲಿ ರೌಡಿ ನಿಗ್ರಹ ದಳ, ಸಿಸಿಬಿ ಪೊಲೀಸರು, ಕಮಾಂಡೋ ಪಡೆ, ಹಾಗೂ ಮೈಸೂರು ನಗರ ಕಾನೂನು ಸುವ್ಯವಸ್ಥೆ ವಿಭಾಗದ ಡಿಸಿಪಿ ಆರ್.ಎನ್.ಬಿಂದುಮಣಿ ಭಾಗವಹಿಸಿದ್ದರು. ಹೆಬ್ಬಾಳ ಪೊಲೀಸರು ತಮ್ಮ ಠಾಣಾ ಸರಹದ್ದಿನಲ್ಲಿ ಗಸ್ತು ಆರಂಭಿಸಿದ್ದಾರೆ.

ಹಿರಿಯರು, ಮಹಿಳೆಯರಿಗೆ ಜಾಗೃತಿ: ಲಕ್ಷ್ಮೀಪುರಂ ಮತ್ತು ಅಶೋಕಪುರಂ ಪೊಲೀಸರು ತಮ್ಮತಮ್ಮ ಠಾಣಾ ವ್ಯಾಪ್ತಿಯಲ್ಲಿ ಉದ್ಯಾನವನ, ಸಾರ್ವಜನಿಕರು ಸೇರುವ ಪ್ರಮುಖ ಸ್ಥಳಗಳಲ್ಲಿ ಹಿರಿಯರು, ಮಹಿಳೆಯರಿಗೆ ಸೈಬರ್ ಅಪರಾಧ, ಸರಗಳ್ಳತನ, ಮನೆಗಳ್ಳತನ ಕುರಿತು ಜಾಗೃತಿ ಮೂಡಿಸಿದ್ದು, ಹೆಚ್ಚಿನ ಸಹಾಯಕ್ಕಾಗಿ 1930, 112 ಸಹಾಯವಾಣಿಗೆ ಕರೆ ಮಾಡುವಂತೆ ಸಲಹೆ ನೀಡಿದ್ದಾರೆ.

ಮೈಸೂರು ಮಿತ್ರ ಬುಧವಾರ 22 ಅಕ್ಟೋಬರ್ 2025

ಹುತಾತ್ಮ ಪೊಲೀಸರ ಸೇವೆ ಸ್ಮರಿಸುವುದು ಆದ್ಯ ಕರ್ತವ್ಯ

ಜಿಲ್ಲಾ ನ್ಯಾಯಾಧೀಶೆ ಮಂಜುಳಾ ಇಟ್ಟಿ



ಮಂಡ್ಯ, ಅ.21–ಸಮಾಜದ ರಕ್ಷಣೆಗೆ ಜೀವದ ಹಂಗು ತೊರೆದು ಹೋರಾಡಿ ಹುತಾತ್ಮರಾಗುವ ಪೊಲೀಸರನ್ನು ಸ್ಮರಿಸುವುದು ಪ್ರತಿಯೊಬ್ಬರ ಕರ್ತವ್ಯ ಎಂದು ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಮಂಜುಳಾ ಇಟ್ಟಿ ತಿಳಿಸಿದ್ದಾರೆ.

ಪೊಲೀಸ್ ಇಲಾಖೆ ವತಿಯಿಂದ ನಗರದ ಡಿ.ಎ.ಆರ್ ಕವಾಯತು ಮೈದಾನದಲ್ಲಿ ಆಯೋಜಿಸಲಾಗಿದ್ದ ಪೊಲೀಸ್ ಸಂಸ್ಮರಣಾ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಪೊಲೀಸರು ದಿನವಿಡಿ ಬಿಸಿಲು, ಮಳೆ, ಗಾಳಿ, ಹಬ್ಬ ಹರಿದಿನ ಮರೆತು ಕರ್ತವ್ಯ ನಿಷ್ಠೆಯಿಂದ ಕೆಲಸ ಮಾಡುತ್ತಿರುವುದರಿಂದ ನಾವು ಇಂದು ನಮ್ಮ ಮನೆಗಳಲ್ಲಿ ನೆಮ್ಮದಿಯಿಂದ ಜೀವಿಸುತ್ತಿದ್ದೇವೆ. ಪೊಲೀಸರ ಇಂತಹ ತ್ಯಾಗಮಯ ಜೀವನಕ್ಕೆ ಅವರ ಕುಟುಂಬವೂ ಸಹ ಬೆನ್ನೆಲುಬಾಗಿದೆ ಹುತಾತ್ಮರಾದ ಪೊಲೀಸರ ಸ್ಮರಣೆಯನ್ನು ಕೇವಲ ಒಂದು ದಿನಕ್ಕೆ ಸೀಮಿತ ಮಾಡದೆ ದಿನವೂ ಸ್ಮರಿಸುವಂತಾಗಬೇಕು ಎಂದು ಅಭಿಪ್ರಾಯಪಟ್ಟರು.

18 ವರ್ಷಗಳಿಂದ ನಾನು ಕರ್ತವ್ಯದಲ್ಲಿ ಪೊಲೀಸರೊಂದಿಗೆ ಭಾಗಿಯಾಗಿದ್ದೇನೆ. ನಮ್ಮ ಕುಟುಂಬಕ್ಕಿಂತ ಹೆಚ್ಚು ಕಾಲ ಪೊಲೀಸರೊಂದಿಗೆ ಕೋರ್ಟ್‌ನಲ್ಲಿ ಕಾಲ ಕಳೆದಿದ್ದೇನೆ. ಎಲ್ಲಾ ಇಲಾಖೆಗಳಿಗಿಂತ ಹೆಚ್ಚು ಶ್ರಮವಹಿಸಿ ಕರ್ತವ್ಯ ನಿಷ್ಠೆಯನ್ನು ಪೊಲೀಸರು ಮೆರೆಯುತ್ತಿದ್ದಾರೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಅಪರ ಪೊಲೀಸ್ ವರಿಷ್ಠಾಧಿಕಾರಿ ತಿಮ್ಮಯ್ಯ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸಾಹಿತಿಗಳಿಲ್ಲದೆ ಸಮಾಜದ ಅಭಿವೃದ್ಧಿ ಸಾಧ್ಯವಿಲ್ಲ



ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಪುತಿನ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಮೇಲುಕೋಟೆ, ಅ.21–ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಕ್ಷೇತ್ರಗಳ ಸಮಗ್ರ ಅಭಿವೃದ್ಧಿಯಲ್ಲಿ ಸಾಹಿತ್ಯ ಕ್ಷೇತ್ರ ಪ್ರಮುಖ ಪಾತ್ರ ವಹಿಸುವುದರಿಂದ ಸಾಹಿತಿಗಳಿಲ್ಲದೆ ಸಮಾಜದ ಅಭಿವೃದ್ಧಿ ಸಾಧ್ಯವಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್ ಚಲುವರಾಯಸ್ವಾಮಿ ಹೇಳಿದ್ದಾರೆ.

ಇಲ್ಲಿನ ಪುತಿನ ಕಲಾಮಂದಿರದಲ್ಲಿ ನಡೆದ ಪುತಿನ ಪುಣ್ಯಸ್ಮರಣೆ ಹಾಗೂ ಕಾಲೇಜುಗಳಲ್ಲಿ ಡಾ ಪುತಿನ ಕಾರ್ಯಕ್ರಮವನ್ನು ಉದ್ಘಾಟಿಸಿ ಸಮಾಜದಲ್ಲಿನ ಸಮಸ್ಯೆಗಳನ್ನು ಲೇಖನ ಹಾಗೂ ಕೃತಿಗಳ ಮೂಲಕ ಜನರಿಗೆ ತಿಳಿಸುವ ಕಾರ್ಯವನ್ನು ಸಾಹಿತಿಗಳು ಮಾಡುತ್ತಿದ್ದಾರೆ. ಅದರಿಂದಾಗಿ ಸಾಹಿತಿಗಳಿಲ್ಲದ ಸಮಾಜವನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಅಭಿಪ್ರಾಯಿಸಿದರು.

ನಮ್ಮ ಜಿಲ್ಲೆ ನೆಲ, ಜಲ ಸಂಸ್ಕೃತಿ ಜೊತೆಗೆ ಸಾಹಿತ್ಯ ಕ್ಷೇತ್ರದಲ್ಲೂ ಹೆಸರು ವಾಸಿಯಾಗಿದೆ. ಪುತಿನ, ಕೆ.ಎಸ್.ನರಸಿಂಹಸ್ವಾಮಿ ದ.ರಾ. ಬೇಂದ್ರೆ, ಕುವೆಂಪುರವರ ಸಾಹಿತ್ಯಗಳು ಉತ್ತಮ ಸಮಾಜ ನಿರ್ಮಾಣಕ್ಕೆ ದಾರಿದೀಪವಾಗಿವೆ.ಈ ನಿಟ್ಟಿನಲ್ಲಿ ಯುವಪೀಳಿಗೆ ಸಾಹಿತ್ಯಾಸಕ್ತರಾಗಿ ಜೀವನ ರೂಪಿಸಿಕೊಳ್ಳಬೇಕು. ಪ್ರಜಾಪ್ರಭುತ್ವದ ಉಳಿವಿಗೆ ಯುವ ಸಮುದಾಯದ ಪಾತ್ರ ಬಹುಮುಖ್ಯ. ಯುವಕರು ಸಮಾಜಮುಖಿ ಮನೋಭಾವನೆ ಬೆಳೆಸಿ ಕೊಂಡು ಸತ್ಪ್ರಜೆಗಳಾಗಿ ರೂಪುಗೊಳ್ಳಬೇಕಾದರೆ ಸಾಹಿತ್ಯ ಕೃತಿಗಳನ್ನು ಓದಬೇಕು. ಮುಂದಿನ ದಿನಗಳಲ್ಲಿ ಪುತಿನ ಹಾಗೂ ಕೆ.ಎಸ್.ನರಸಿಂಹ ಸ್ವಾಮಿ ಟ್ರಸ್ಟ್‌ಗಳ ಸಮಗ್ರ ಅಭಿವೃದ್ಧಿ ಹಾಗೂ ಅವರ ಸಾಹಿತ್ಯವನ್ನು ಯುವಜನತೆ ಹಾಗೂ ವಿದ್ಯಾರ್ಥಿಗಳಿಗೆ ತಲುಪಿಸುವ ಯೋಜನೆ ಗಳಿಗೆ ಎಲ್ಲಾ ರೀತಿಯ ಸಹಕಾರ ನೀಡಲಾಗುತ್ತದೆ ಎಂದು ಭರವಸೆ ನೀಡಿದರು.

ಪುತಿನ ಟ್ರಸ್ಟ್ ಅಧ್ಯಕ್ಷರಾದ ಪ್ರೊ. ಕೃಷ್ಣೇಗೌಡ ಮಾತನಾಡಿ, ಸರ್ಕಾರ ಪುತಿನ ಮನೆ ಹಾಗೂ ಅವರ ಹೆಸರಿನಲ್ಲಿ ಟ್ರಸ್ಟ್ ರಚಿಸಿ ಹುಟ್ಟೂರು ಮೇಲು ಕೋಟೆಯಲ್ಲಿ ಭವ್ಯವಾದ ಕಲಾಮಂದಿರ ನಿರ್ಮಿಸಿದೆ. ಇದರ ಜೊತೆಗೆ ನಿರ್ಲಕ್ಷಿತವಾಗಿರುವ ಕವಿಯ ಅಂತ್ಯಸಂಸ್ಕಾರ ಸ್ಥಳವನ್ನು ಪ್ರೇಕ್ಷಣೀಯ ಸ್ಥಳವಾಗಿ ಅಭಿವೃದ್ಧಿಪಡಿಸಬೇಕು. ಬಯಲು ಕಲಾಮಂದಿರಕ್ಕೆ ಮೇಲ್ಛಾವಣಿ ವ್ಯವಸ್ಥೆ ಕಲ್ಪಿಸಿಕೊಡಬೇಕು ಮತ್ತು ಪುತಿನ ಕೃತಿ, ನಾಟಕಗಳನ್ನು ಆಡಿಯೋ ಹಾಗೂ ಡಿಜಿಟಲೀಕರಣಕ್ಕೆ ಸರ್ಕಾರ ಮುಂದಾಗಬೇಕು ಎಂದು ಸಚಿವರಲ್ಲಿ ಮನವಿ ಮಾಡಿದರು.

ಕರ್ನಾಟಕ ಸಂಘದ ಅಧ್ಯಕ್ಷ ಜಯಪ್ರಕಾಶ್‌ಗೌಡ, ಡಾ ಮೀರಾ ಶಿವಲಿಂಗಯ್ಯ, ಕೈಮಗ್ಗ ನಿಗಮದ ಅಧ್ಯಕ್ಷ ನಾಗೇಂದ್ರ ಕುಮಾರ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಹೆಚ್. ತ್ಯಾಗರಾಜು, ಗ್ರಾಪಂ ಅಧ್ಯಕ್ಷೆ ಭವಾನಿ ಹರಧರ್, ಎಸಿ ಶ್ರೀನಿವಾಸ್, ಕಸಾಪ ತಾಲೂಕು ಅಧ್ಯಕ್ಷ ಮೇನಾಗರ ಪ್ರಕಾಶ್, ಕಸಂ ಇಲಾಖೆಯ ಡಾನಂದೀಶ್ ಇದ್ದರು.

ಶೀಘ್ರದಲ್ಲೇ ಮೇಲುಕೋಟೆ ಅಭಿವೃದ್ಧಿ ಪ್ರಾಧಿಕಾರ ರಚನೆ

ಕ್ಷೇತ್ರದ ಅಭಿವೃದ್ಧಿಗೆ ಮೇಲುಕೋಟೆ ಅಭಿವೃದ್ಧಿ ಪ್ರಾಧಿಕಾರ ರಚಿಸಲಾಗುತ್ತದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚೆಲುವರಾಯಸ್ವಾಮಿ ಹೇಳಿದರು. ಪ್ರಮುಖ ಧಾರ್ಮಿಕ ಕೇಂದ್ರವಾದ ಚೆಲುವನಾರಾಯಣ ಸ್ವಾಮಿಯ ದಿವ್ಯ ಕ್ಷೇತ್ರ ಮೇಲುಕೋಟೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ. ಶೀಘ್ರವೇ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಮೇಲುಕೋಟೆ ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡಲಾಗುತ್ತದೆ ಎಂದರು

ಡಾ.ರಾಜ್ ರಂಗ ಕಲಾ ವೇದಿಕೆ ಪದಾಧಿಕಾರಿಗಳ ಆಯ್ಕೆ



ಡಾ.ರಾಜ್ ರಂಗ ಕಲಾವೇದಿಕೆ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ರಾಗಿಮುದ್ದನಹಳ್ಳಿ ದೇವರಾಜು ಮತ್ತು ಪದಾಧಿಕಾರಿಗಳನ್ನು ರಂಗಭೂಮಿ ಕಲಾವಿದರು ಗೌರವಿಸಿದರು.

ಕೆ.ಆರ್.ಪೇಟೆ, ಅ.21–ತಾಲೂಕು ಡಾ.ರಾಜ್ ರಂಗ ಕಲಾವೇದಿಕೆ ಎಂಬ ರಂಗಭೂಮಿ ಕಲಾವಿದರ ಸಂಘ ಅಸ್ತಿತ್ವಕ್ಕೆ ಬಂದಿದ್ದು, ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಗೌರವಾಧ್ಯಕ್ಷರಾಗಿ ಡ್ರಾಮಾ ಮಾಸ್ಟರ್ ತಂದ್ರೆ ಕೊಪ್ಪಲು ಮಂಜುನಾಥ್, ಅಧ್ಯಕ್ಷರಾಗಿ ರಾಗಿಮುದ್ದನಹಳ್ಳಿ ದೇವರಾಜು, ಉಪಾಧ್ಯಕ್ಷರಾಗಿ ಸಣ್ಣತಮ್ಮೇಗೌಡ, ಕಾರ್ಯದರ್ಶಿಯಾಗಿ ಕೂಡಲಕುಪ್ಪೆ ದೇವರಾಜು, ಖಜಾಂಚಿಯಾಗಿ ಮರಟಿ ಕೊಪ್ಪಲು ಮಂಜುನಾಥ್, ಸಹ ಕಾರ್ಯದರ್ಶಿಯಾಗಿ ಅಗ್ರಹಾರ ಬಾಚಹಳ್ಳಿ ಮಂಜೇಗೌಡ, ಸಂಘಟನಾ ಕಾರ್ಯದರ್ಶಿಯಾಗಿ ಹೊಸಹೊಳಲು ರಘು ಆಯ್ಕೆಯಾಗಿದ್ದಾರೆ. ಪ್ರವಾಸಿ ಮಂದಿರದಲ್ಲಿ ನಡೆದ ಡಾ.ರಾಜ್ ರಂಗ ಕಲಾ ಸಂಘದ ಪದಾಧಿಕಾರಿಗಳ ಆಯ್ಕೆ ಸಮಿತಿ ಸಭೆಯಲ್ಲಿ ನೂತನ ಪದಾಧಿಕಾರಿಗಳು ಅಧಿಕಾರ ಸ್ವೀಕಾರ ಮಾಡಿದರು.

ಪೋಸ್ಟರ್ ಬಿಡುಗಡೆ

ಭಾರತೀನಗರ: ಕನ್ನಡ ರಾಜ್ಯೋತ್ಸವದ ಅಂಗವಾಗಿ ನ.15ರಂದು ಸಮೀಪದ ಬೊಪ್ಪ ಸಮುದ್ರ ಗ್ರಾಮದಲ್ಲಿ ನಡೆಯುವ ರಾಹುಲ್ ಕಪ್ ಕ್ರಿಕೆಟ್ ಪಂದ್ಯಾವಳಿಯ ಪೋಸ್ಟರನ್ನು ಶಾಸಕ ಮಧು ಜಿ.ಮಾದೇಗೌಡ ಬಿಡುಗಡೆ ಮಾಡಿದರು.

ಟಿಪ್ಪು ಹತ್ಯಾಕಾಂಡ ಖಂಡಿಸಿ ಬಿಜೆಪಿ ಪಂಜಿನ ಮೆರವಣಿಗೆ



ಮೇಲುಕೋಟೆಯಲ್ಲಿ ವಿವಿಧ ಸಂಘಟನೆಗಳು ಪಂಜುಗಳನ್ನು ಹಿಡಿದು ಟಿಪ್ಪುವಿರುದ್ಧ ಘೋಷಣೆ ಕೂಗುತ್ತಾ ಚೆಲುವನಾರಾಯಣಸ್ವಾಮಿ ದೇವಾಲಯದವರೆಗೆ ಮೆರವಣಿಗೆ ನಡೆಸಿದರು

ಮೇಲುಕೋಟೆ, ಅ.21–ಮತಾಂಧ ಟಿಪ್ಪು ನರಕಚತುರ್ದಶಿಯಂದು ನಡೆಸಿದ ಹತ್ಯಾಕಾಂಡವನ್ನು ಇತಿಹಾಸದ ಪುಟಗಳಿಂದ ಅಳಿಸಲು ಸಾಧ್ಯವಿಲ್ಲ ಎಂದು ವಿದ್ವಾನ್ ರಾಮಪ್ರಿಯ ಅಭಿಪ್ರಾಯಪಟ್ಟಿದ್ದಾರೆ

ಬಿಜೆಪಿ ಹಾಗೂ ವಿವಿಧ ಸಂಘಟನೆಗಳು ಈ ಕರಾಳ ಘಟನೆ ಹಿನ್ನೆಲೆಯಲ್ಲಿ ಹಮ್ಮಿಕೊಂಡಿದ್ದ ಪಂಜಿನ ಮೆರವಣಿಗೆ ನಂತರ ನಡೆದ ಸಭೆಯಲ್ಲಿ ಮಾತನಾಡಿದ ಅವರು, 250 ವರ್ಷಗಳ ಹಿಂದೆ ಬೆಳಕಿನ ಹಬ್ಬದ ದಿನದಂದೇ ಟಿಪ್ಪುಸುಲ್ತಾನ್ ಹೆಂಗಸರು ಮಕ್ಕಳೆನ್ನದೆ ಸಿಕ್ಕಸಿಕ್ಕವರನ್ನು ಘೋರ ಹತ್ಯೆ ಮಾಡಿದ್ದಾನೆ ಇಂತಹ ನರಮೇದ ನಡೆಸಿದವನ್ನು 'ಮೈಸೂರು ಹುಲಿ' ಎಂದು ಬಿಂಬಿಸುವುದು, ಸತ್ಯಘಟನೆಗಳನ್ನು ಮುಚ್ಚಿಡುವುದು ಜಾತ್ಯಾತೀತ ಸಿದ್ಧಾಂತಕ್ಕೆ ದ್ರೋಹ ಮಾಡಿದಂತಾಗಿದೆ. ಹೀಗಾಗಿ ಐತಿಹಾಸಿಕ ಕ್ರೌರ್ಯವನ್ನು ಖಂಡಿಸಿ ಪ್ರತಿ ವರ್ಷ ನರಕ ಚತುರ್ದಶಿಯಂದು ಪಂಜಿನ ಮೆರವಣಿಗೆ ಮೂಲಕ ಶೋಕಾಚರಣೆ ಮಾಡಿ ಜಾಗೃತಿ ಮೂಡಿಸುತ್ತಿರುವುದು ಭವಿಷ್ಯದ ಹಿತ ದೃಷ್ಟಿಯಿಂದ ಉತ್ತಮ ಕಾರ್ಯವಾಗಿದೆ ಎಂದರು.

ಮೈಸೂರು ಆಸ್ಥಾನದಲ್ಲಿದ್ದ ಶಾಮಯ್ಯಂಗಾರ್ ಬ್ರಿಟಿಷರನ್ನು ಭೇಟಿಯಾಗಿ ಟಿಪ್ಪುವಿನ ದುರಾಡಳಿತದ ಬಗ್ಗೆ ದೂರು ನೀಡಿದ್ದರು, ಮೈಸೂರು ಮಹಾರಾಜರ ಪರವಾಗಿ ರಾಯಭಾರ ವಹಿಸುತ್ತಿದ್ದಾರೆ ಎಂಬ ಕಾರಣಕ್ಕೆ ನರಕಚತುರ್ದಶಿಯಂದು ಸೈನ್ಯದೊಡನೆ ಮೇಲುಕೋಟೆಗೆ ಲಗ್ಗೆ ಇಟ್ಟ ಟಿಪ್ಪು ಸುಲ್ತಾನ್ ಸಿಕ್ಕಸಿಕ್ಕ ಮಂಡಯಂ ಅಯ್ಯಂಗಾರರ ಮೇಲೆ ಘೋರ ದೌರ್ಜನ್ಯ ನಡೆಸಿದ್ದರಿಂದ ಸುಮಾರು 800 ಮಂದಿ ಅಯ್ಯಂಗಾರ್ಸ್ ಪ್ರಾಣ ಕಳೆದುಕೊಂಡರಂತೆ. ದೀಪಾವಳಿ ದಿನವೇ ಸ್ಮಶಾನವಾದ ಮೇಲು ಕೋಟೆಯಲ್ಲಿ ಇಂದಿಗೂ ಮಂಡಯಮ್ ಜನಾಂಗದ ಕೆಲಕುಟುಂಬಗಳು ಶತಮಾನಗಳ ನಂತರೂ ನರಕ ಚತುರ್ದಶಿಯಂದು ಶೋಕ ದಿನವನ್ನಾಗಿ ಆಚರಿಸುತ್ತಿದ್ದಾರೆ ಎಂದರು.

ಬಿಜೆಪಿ ತಾಲೂಕು ಅಧ್ಯಕ್ಷ ಧನಂಜಯ್ ಮಾತನಾಡಿ, ಟಿಪ್ಪುವಿನ ಕರಾಳ ಮುಖವನ್ನು ಇಂದಿನ ಜನಾಂಗಕ್ಕೆ ತಿಳಿಸುವ ಕಾರ್ಯವನ್ನು ಮಾಡಬೇಕಾದ ಅಗತ್ಯವಿದೆ. ಮೇಲುಕೋಟೆ ಹಾಗೂ ಕೊಡಗಿನ ನರ ಮೇದವನ್ನು ಹಿಂದೂ ಸಮುದಾಯ ಎಂದಿಗೂ ಸಹಿಸುವುದಿಲ್ಲ ಎಂದರು.

ರಾಮಪ್ರಿಯ, ಶ್ರೀಹರಿ, ಪುರುಷೋತಮ್ ನಂದೀಶ್, ಭರತ್, ಮೇಲುಕೋಟೆ ಮುರುಳಿ, ಅಶೋಕ್ ಮತ್ತಿತರ ನೂರಕ್ಕೂ ಹೆಚ್ಚು ಬಿಜೆಪಿ ಹಾಗೂ ಹಿಂದೂಪರ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಮಾದಾಪುರದಲ್ಲಿ ಸಾಮರಸ್ಯ ಸಿಡಿ ರಥೋತ್ಸವ



ಸಿಡಿ ಹಬ್ಬದ ರಥವನ್ನು ಎಳೆಯುತ್ತಿರುವ ಭಕ್ತ ಸಮೂಹ.

ಕಿಕ್ಕೇರಿ, ಅ.21–ಹೋಬಳಿಯ ಬಲು ದೊಡ್ಡ ಸಿಡಿ ಜಾತ್ರೆ ಮಾದಾಪುರ ಗ್ರಾಮದಲ್ಲಿ ಏಳು ಊರಿನ ಸುತ್ತಮುತ್ತಲ ಜನತೆಗಳ ಸಾಮರಸ್ಯಗಳಿಂದ ದೀಪಾವಳಿ ಅಮಾವಾಸ್ಯೆಯಂದು ನೆರವೇರಿತು.

ಮಾದಾಪುರ, ಗೊಂದಿಹಳ್ಳಿ, ಗಾಣದಹಳ್ಳಿ, ಕೋಟಹಳ್ಳಿ ಅಲ್ಲದೆ ಸುತ್ತಮುತ್ತಲ ರೈತಾಪಿ ವರ್ಗ ಪಕ್ಷಭೇದ ಮರೆತು ಸಿಡಿ ಸಂಭ್ರಮದಲ್ಲಿ ಭಾಗಿಯಾಗಿದ್ದರು. ಹೋಬಳಿಯಲ್ಲದೆ ವಿವಿಧೆಡೆಯಿಂದ ಭಕ್ತರು ಅಧಿಕ ಸಂಖ್ಯೆಯಲ್ಲಿ ಜಾನಪದ ಸೊಗಡಿನ ಜಾತ್ರೆಗೆ ಆಗಮಿಸಿದ್ದರು.

ಗ್ರಾಮದ ಪ್ರಮುಖರು ಒಂದೆಡೆ ಸೇರಿ ಗ್ರಾಮದಲ್ಲಿರುವ ಸಿಡಿ ರಥಕ್ಕೆ ಶೃಂಗರಿಸಲು ಅಣಿಯಾದರು. ವಿವಿಧ ವರ್ಣದ ಧ್ವಜ, ಪರಿಮಳ ಪುಷ್ಪಗಳಿಂದ ಸಿಡಿ ರಥಕ್ಕೆ ಅಲಂಕರಿಸಿ ಕಳಶ ಸ್ಥಾಪನೆ ಮಾಡಿ ಪೂಜೆ ಸಲ್ಲಿಸಿದರು. ನಂತರ ಗ್ರಾಮದಿಂದ ಶ್ರದ್ಧಾಭಕ್ತಿಯಿಂದ ಎಳೆದು ಕಿ.ಮೀ ದೂರದಲ್ಲಿರುವ ಕೆಂಕೇರಮ್ಮ ಗುಡಿಯ ಆವರಣಕ್ಕೆ ತಂದರು. ಸಿಂಗಮ್ಮ ದೇವಿಯ ಉತ್ಸವಮೂರ್ತಿ ಗುಡಿಗೆ ಮೆರವಣಿಗೆ ಮೂಲಕ ತರಲಾಯಿತು. ತಳಿರು ತೋರಣ, ವಿವಿಧ ವರ್ಣದ ಧ್ವಜ ಪತಾಕೆಗಳಿಂದ ಅಲಂಕೃತವಾದ ಸಿಡಿ ರಥಕ್ಕೆ ಕೆಂಕೇರಮ್ಮ, ಸಿಂಗಮ್ಮ, ಚಿಕ್ಕಮ್ಮ ದೇವಿಗೆ ಅಗ್ರಪೂಜೆ ಸಲ್ಲಿಸಲಾಯಿತು. ಮಂಗಳ ವಾದ್ಯ, ಡೊಳ್ಳು, ತಮಟೆ ನಾದದೊಂದಿಗೆ ಕೆಂಕೇರಮ್ಮ, ಸಿಂಗಮ್ಮ ಗುಡಿಯ ಸುತ್ತ ಸಿಡಿಯನ್ನು ಮೂರು ಪ್ರದಕ್ಷಿಣೆ ಹಾಕಿಸಿ ಸ್ವಸ್ಥಾನಕ್ಕೆ ಸೇರಿಸಲಾಯಿತು.

ಭಕ್ತರು ಸರತಿಯಲ್ಲಿ ನಿಂತು ದೇವಿಯ ದರ್ಶನ ಪಡೆದು ಕೃತಾರ್ಥರಾದರು. ರೈತಾಪಿ ಜನತೆ, ಭಕ್ತರು ದೇವಿಗೆ ಉಘೇ ಉಘೇ ಎಂದು ಉದ್ಘೋಷ ಕೂಗುತ್ತಾ ಸಾಗಿದರು. ಗ್ರಾಮದ ಮುಖಂಡರು, ವಿವಿಧ ಸಂಘ–ಸಂಸ್ಥೆ, ವಿವಿಧೆಡೆಯಿಂದ ಬಂದಿದ್ದ ಗಣ್ಯರು, ರೈತಾಪಿ ಸಮೂಹ ಸಿಡಿ ಸಂಭ್ರಮದಲ್ಲಿ ಭಾಗಿಯಾಗಿದ್ದರು.

ಮೇಲುಕೋಟೆಗೆ ಭೇಟಿ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ



ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಶೀಲಾ ದೇವಾಲಯದ ರಾಜಗೋಪುರದ ಬಳಿ ನೂತನವಾಗಿ ಆರಂಭವಾಗಿರುವ ಲಡ್ಡು ಪ್ರಸಾದ ಮಾರಾಟ ಕೇಂದ್ರದಲ್ಲಿ ಸಚಿವ ಎನ್ ಚೆಲುವರಾಯಸ್ವಾಮಿ ತಾವೇ ಸ್ವತಃ ಲಾಡು ಖರೀದಿಸಿ ಭಕ್ತರಿಗೆ ವಿತರಿಸಿದರು. ಎಸಿ ಶ್ರೀನಿವಾಸ್, ಸ್ಥಾನಾಚಾರ್ಯ ಶ್ರೀನಿವಾಸ ನರಸಿಂಹನ್ ಗುರೂಜಿ ಇದ್ದಾರೆ

ಒಂದನೇ ಪುಟದಿಂದ

ಸ್ಪೆಷಲ್ ಆಕ್ಷನ್ ಫೋರ್ಸ್

ಸಾಧ್ಯವಾಗುತ್ತದೆ. ಹೀಗಾಗಿ ಅನೈತಿಕ ಪೊಲೀಸ್ ಗಿರಿಗೆ ಕಡಿವಾಣ ಬಿದ್ದಿರುವುದು ಉತ್ತಮ ಕೆಲಸ. ಹಾಗೆಯೇ ಮಾದಕ ವಸ್ತು ಹಾವಳಿಗೂ ಬ್ರೇಕ್ ಬಿದ್ದಿದ್ದು ಇದನ್ನು ಇನ್ನಷ್ಟು ಪರಿಣಾಮಕಾರಿಯಾಗಿ ನಿರ್ವಹಿಸಬೇಕಿದೆ. ಈ ಎಲ್ಲಾ ಸಾಧನೆಗಳ ಶ್ರೇಯ ಪೊಲೀಸ್ ಇಲಾಖೆಗೆ ಸಲ್ಲಬೇಕು. ರಾಜ್ಯದಲ್ಲಿ ಪರಿಶಿಷ್ಟ ಜಾತಿ ಹಾಗೂ ವರ್ಗದವರ ಮೇಲಿನ ದೌರ್ಜನ್ಯ ತಡೆಗೆ ಡಿಸಿಆರ್‌ಇ ಪೊಲೀಸ್ ಠಾಣೆಗಳನ್ನು ಕಾರ್ಯೋನ್ಮುಖಗೊಳಿಸಿದ್ದೇವೆ. ಇವು ಪರಿಣಾಮಕಾರಿಯಾಗಿ ಕೆಲಸ ಮಾಡುವ ಮೂಲಕ ಸಾಂವಿಧಾನಿಕ ಹಕ್ಕು ಮತ್ತು ಮೌಲ್ಯಗಳನ್ನು ಕಾಪಾಡುವ ಕೆಲಸ ಮಾಡಬೇಕು.

ಒಂದು ವರ್ಷದಲ್ಲಿ ರಾಜ್ಯದ 8 ಮಂದಿ ಸೇರಿ ದೇಶದಲ್ಲಿ 191 ಮಂದಿ ಕರ್ತವ್ಯ ನಿರ್ವಹಣೆ ವೇಳೆ ಪ್ರಾಣ ತ್ಯಾಗ ಮಾಡುವ ಮೂಲಕ ಹುತಾತ್ಮರಾಗಿದ್ದಾರೆ. ಇವರ ತ್ಯಾಗ, ಬಲಿದಾನಕ್ಕೆ ಬೆಲೆ ಕಟ್ಟಲಾಗದು. ಇವರನ್ನು ಸ್ಮರಿಸಿ, ನಮಿಸುವುದು ಪ್ರತಿಯೊಬ್ಬರ ಕರ್ತವ್ಯ. ಸಂವಿಧಾನದಲ್ಲಿ ಜನರಿಗೆ ಕೊಟ್ಟಿರುವ ಹಕ್ಕುಗಳನ್ನು ಕಾಪಾಡುವ ಜವಾಬ್ದಾರಿಯನ್ನೂ ಪೊಲೀಸ್ ಇಲಾಖೆ ನಿರ್ವಹಿಸುತ್ತಿದೆ. ನಿವೃತ್ತ ಪೊಲೀಸ್ ಆರೋಗ್ಯ ಯೋಜನೆಯ ವೈದ್ಯಕೀಯ ಮರು ಪಾವತಿ ವೆಚ್ಚವನ್ನು ವಾರ್ಷಿಕ 1 ಲಕ್ಷ ರೂ.ಗಳಿಂದ 1.50 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಎಲ್ಲಾ ಪೊಲೀಸ್ ಸಿಬ್ಬಂದಿಯ ಆರೋಗ್ಯ ತಪಾಸಣಾ ವೆಚ್ಚವನ್ನು 1,000 ರೂ.ಗಳಿಂದ 1,500 ರೂ.ಗೆ ಹೆಚ್ಚಿಸಲಾಗಿದೆ ಎಂದು ವಿವರಿಸಿದರು.

ಪೊಲೀಸ್ ಇಲಾಖೆ ಕಾನೂನು ಸುವ್ಯವಸ್ಥೆ ಮೇಲೆ ರಾಜ್ಯದ ಅಭಿವೃದ್ಧಿ ಕಾಣುತ್ತೆ. ರಾಜ್ಯಕ್ಕೆ ಬಂಡವಾಳ ಹರಿದುಬರುವಲ್ಲೂ ಪೊಲೀಸರ ಪಾತ್ರವಿದೆ. ಪ್ರಾಣತ್ಯಾಗದ ಜೊತೆಗೆ ಹಲವರು ಗಾಯಗೊಂಡಿರುತ್ತಾರೆ. ಅವರೆಲ್ಲರ ಜೊತೆಗೆ ಸರ್ಕಾರ ಇರುತ್ತೆ. ಕೋಮು ಹತ್ಯೆ, ದ್ವೇಷ ಭಾಷಣ, ನೈತಿಕ ಪೊಲೀಸ್‌ಗಿರಿ ಹೆಚ್ಚಾಗಿ ಉಡುಪಿ, ದಕ್ಷಿಣ ಕನ್ನಡದಲ್ಲಿ ಆಗುತ್ತೆ. ಹೀಗಾಗಿ ಇಂತಹ ಪ್ರಕರಣಗಳನ್ನ ಹತ್ತಿಕ್ಕಲು ಸ್ಪೆಷಲ್ ಆಕ್ಷನ್ ಫೋರ್ಸ್ ಶುರು ಮಾಡಿದ್ದೇವೆ ಎಂದರು. ಜನರ ರಕ್ಷಣೆಗೆ ಮನೆ ಮನೆಗೆ ಪೊಲೀಸ್ ಕಾರ್ಯಕ್ರಮ ತಂದಿದ್ದೇವೆ. ಬೇರೆ ರಾಜ್ಯ, ದೇಶಗಳಿಂದ ಬಂದ ಜನರಿಗೆ ಸುರಕ್ಷತೆ ನೀಡುವ ಕೆಲಸವನ್ನೂ ಮಾಡಲಾಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಗೆ ಹೋಗಿದ್ದೆ. ಮೊದಲು ಕಾನೂನು ಸುವ್ಯವಸ್ಥೆ ಹಾಳಾಗಿತ್ತು. ಆದ್ರೆ ಇತ್ತೀಚೆಗೆ ಕಾನೂನು ಸುವ್ಯವಸ್ಥೆ ಸರಿದಾರಿಯಲ್ಲಿದೆ. ಇದಕ್ಕೆ ಶ್ರಮಿಸಿದ ಪೊಲೀಸ್ ಇಲಾಖೆಗೆ ಧನ್ಯವಾದ ಸಲ್ಲಿಸುತ್ತೇನೆಂದರು.

ಸಮನ್ವಯ ಸಮಿತಿ ರಚನೆ

ಬೆಂಗಳೂರಿನ ರಸ್ತೆಗಳ ಕುರಿತು ಸಲಹೆ ನೀಡಿದರೆ, ಕಿವಿಗೆ ಹಾಕಿಕೊಳ್ಳುತ್ತಿಲ್ಲ. ಅವರನ್ನು ಸಚಿವರೇ ನಿಂದಿಸುತ್ತಿದ್ದಾರೆ. ರಾಜ್ಯ ಸರ್ಕಾರಕ್ಕೆ ಇದು ಶೋಭೆ ತರುವುದಿಲ್ಲ. ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ ಟೀಕೆ, ಸಲಹೆಗಳು ಬಂದಾಗ, ಉದ್ಯಮಿ ಮೋಹನ್‌ದಾಸ್ ಪೈ ಅವರನ್ನು ಮನೆಗೆ ಕರೆಸಿಕೊಂಡು ಚಹಾ ನೀಡಿ ಸಲಹೆ ಪಡೆಯುವ ಮೂಲಕ ಟೀಕೆಗಳನ್ನು ಸಕಾರಾತ್ಮಕವಾಗಿ ತೆಗೆದುಕೊಂಡಿದ್ದರು. ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣವನ್ನು ತೆಲಂಗಾಣ ಬ್ಯಾಂಕ್‌ನ ಸಾವಿರಾರು ಬೇನಾಮಿ ಖಾತೆಗೆ ಹಾಕಿ ಚಿನ್ನ ಖರೀದಿಸಲಿಲ್ಲವೇ. ಈ ಹಣವನ್ನು ಲೋಕಸಭಾ ಚುನಾವಣೆಯಲ್ಲೂ ಬಳಸಲಾಗಿತ್ತು ಎಂಬುದಾಗಿ ಜಾರಿ ನಿರ್ದೇಶನಾಲಯವೇ (ಇ.ಡಿ) ನೇರವಾಗಿ ಆರೋಪಿಸಿದೆ. ನೀರಾವರಿ ಇಲಾಖೆಯಲ್ಲಿ ಶೇ.60ರಿಂದ 70ರಷ್ಟು ಕಮಿಷನ್ ಕೇಳುತ್ತಿರುವ ಕುರಿತು ಗುತ್ತಿಗೆದಾರರ ಸಂಘ ಪತ್ರ ಬರೆದಿದೆ. ಅಧಿಕೃತ ದೂರು ನೀಡಲಿ ಎಂಬುದಾಗಿ ಶಿವಕುಮಾರ್ ಹೇಳಿದ್ದಾರೆ. ಅಧಿಕೃತವಾಗಿ ಪತ್ರವೇ ಬರೆದಿರುವಾಗ ಇನ್ನಾವ ದೂರು ಬೇಕು.

ಮರಳು ಮಾಫಿಯಾದಿಂದ ನೂರಾರು ಕೋಟಿ ನಷ್ಟ: ಮರಳು ಮಾಫಿಯ ನಡೆಯುತ್ತಿದೆ ಎಂಬುದಾಗಿ ಸ್ವತಃ ಸಿಎಂ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಪತ್ರ ಬರೆದಿದ್ದಾರೆ. ಸರ್ಕಾರಕ್ಕೆ ಇದರಿಂದ 400ರಿಂದ 500 ಕೋಟಿ ರೂ. ನಷ್ಟವಾಗುತ್ತಿದೆ ಎಂದಿದ್ದಾರೆ. ರಾಜ್ಯದಲ್ಲಿನ ಭ್ರಷ್ಟಾಚಾರಕ್ಕೆ ಇದಕ್ಕಿಂತ ಸಾಕ್ಷಿ ಬೇಕೇ ಎಂದು ಪ್ರಶ್ನಿಸಿದರು. ಶಿವಮೊಗ್ಗ ಸೇರಿ ಅನೇಕ ಜಿಲ್ಲೆಗಳಲ್ಲಿ ಪೊಲೀಸ್ ಅಧಿಕಾರಿಗಳು, ಆಡಳಿತ ಪಕ್ಷದ ಶಾಸಕರ ಕುಮ್ಮಕ್ಕಿನಿಂದ ಇಸ್ಪೀಟ್, ಓಸಿ, ಮಟ್ಕಾ ದಂಧೆ ನಡೆಯುತ್ತಿದೆ. ಬಡ ಜನತೆ ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಬೇರೆ ರಾಜ್ಯಗಳ ಪ್ರವಾಸ ವೇಳೆ ಕರ್ನಾಟಕ ಗ್ಯಾರಂಟಿ ಯೋಜನೆಗಳು ದೇಶಕ್ಕೇ ಮಾದರಿ ಎನ್ನುತ್ತಾ ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುತ್ತಾರೆ. ನಿಮ್ಮ ಗ್ಯಾರಂಟಿಗಳು ರೋಲ್ ಮಾಡೆಲ್ ಅಲ್ಲ, ಉಡಾಫೆ ಮಾತುಗಳನ್ನು ಬಿಡಿ, ರಾಜ್ಯ ಕೊಳ್ಳೆ ಹೊಡೆಯುವುದನ್ನು ಜನತೆ ಗಮನಿಸುತ್ತಿದ್ದಾರೆ.

ಸಚಿವ ಪ್ರಿಯಾಂಕ ಖರ್ಗೆಗೆ ದುರ್ಬುದ್ಧಿ: ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಏಕೆ ದುರ್ಬುದ್ಧಿ ಬಂದಿತೋ ಗೊತ್ತಿಲ್ಲ. ಅನಾವಶ್ಯಕವಾಗಿ ಆರ್‌ಎಸ್‌ಎಸ್ ಬಗ್ಗೆ ಟೀಕಿಸುತ್ತಿದ್ದಾರೆ. ಪ್ರಚಾರ ಗಿಟ್ಟಿಸಿಕೊಳ್ಳುವ ತಂತ್ರವೇ ಅಥವಾ ಮುಖ್ಯಮಂತ್ರಿ ಕುರ್ಚಿಗೆ ಟವೆಲ್ ಹಾಕುವ ತಂತ್ರವೇ ಗೊತ್ತಿಲ್ಲ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದಂತೆ ಪ್ರಿಯಾಂಕ್ ಖರ್ಗೆ ಏಕಾಂಗಿಯಾಗಿದ್ದಾರೆ. ಆಡಳಿತ ಪಕ್ಷದ ವೈಫಲ್ಯ ಮುಚ್ಚಿಕೊಳ್ಳಲು ಈ ರೀತಿ ಪ್ರಚಾರ ತೆಗೆದುಕೊಳ್ಳುತ್ತಿದ್ದಾರೆ. ನವೆಂಬರ್ 2ರಂದು ಚಿತ್ತಾಪುರದಲ್ಲಿ ಪಥಸಂಚಲನ ಯಶಸ್ವಿಯಾಗಿ ನಡೆಯಲಿದೆ. ಯಾವುದೇ ಗೊಂದಲವಿಲ್ಲ ಎಂದರು.

ಬಿತ್ತನೆ ಪ್ರಮಾಣದಲ್ಲಿ ಭಾರೀ ಕುಸಿತ

285 ಮಿ.ಮೀ. ಅಂದರೆ ವಾಡಿಕೆ(198 ಮಿ.ಮೀ.)ಗಿಂತ ಶೇ.44ರಷ್ಟು ಹೆಚ್ಚು ಮಳೆಯಾಗಿತ್ತು. ಆದರೆ ಜೂನ್‌ನಿಂದ ಸೆಪ್ಟೆಂಬರ್‌ವರೆಗಿನ ಮುಂಗಾರು ಕೈಕೊಟ್ಟಿದ್ದು ಸುಮಾರು ಶೇ.23ರಷ್ಟು ಮಳೆ ಕೊರತೆಯಾಗಿದೆ. ಅದರಲ್ಲೂ ಜುಲೈನಲ್ಲಿ ಶೇ.21 ಮತ್ತು ಸೆಪ್ಟೆಂಬರ್‌ನಲ್ಲಿ ಶೇ.54ರಷ್ಟು ತೀವ್ರ ಕೊರತೆ ಉಂಟಾಗಿದ್ದು, ಪ್ರಸಕ್ತ ತಿಂಗಳಲ್ಲೂ ಈ ಪರಿಸ್ಥಿತಿಯೇ ಮುಂದುವರೆದಿದೆ. ಆಗಸ್ಟ್‌ನಲ್ಲಿ ಮಾತ್ರ ವಾಡಿಕೆಯಷ್ಟು ಮಳೆಯಾಗಿದೆ.

ಜಿಲ್ಲೆಯೆಲ್ಲೆಡೆ ಒಂದೇ ಸ್ಥಿತಿ: ಜಿಲ್ಲೆಯ ಬಹುತೇಕ ಎಲ್ಲಾ ತಾಲೂಕುಗಳಲ್ಲೂ ಮುಂಗಾರು ಹಂಗಾಮು ಕೈಕೊಟ್ಟಿದ್ದು, ಕೃಷಿ ಕ್ಷೇತ್ರಕ್ಕೆ ಭಾರೀ ಹೊಡೆತ ಬಿದ್ದಿದೆ. ಒಟ್ಟು ಮುಂಗಾರು ಅವಧಿಯಲ್ಲಿ ಹೆಚ್.ಡಿ. ಕೋಟೆ ಹಾಗೂ ಸರಗೂರು ತಾಲೂಕುಗಳಲ್ಲಿ ಮಾತ್ರ ಉತ್ತಮ ಮಳೆಯಾಗಿದ್ದು, ಕೆ.ಆರ್.ನಗರ ತಾಲೂಕಿನಲ್ಲಿ ಮುಂಗಾರು ಸಂಪೂರ್ಣ ವಿಫಲವಾಗಿದೆ. ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಹೆಚ್.ಡಿ.ಕೋಟೆಯಲ್ಲಿ 514 ಮಿ.ಮೀ. ವಾಡಿಕೆ(409 ಮಿ.ಮೀ.)ಗಿಂತ ಅಧಿಕ ಮಳೆಯಾಗಿದೆ. ನಂಜನಗೂಡು, ತಿ.ನರಸೀಪುರ ಹಾಗೂ ಸರಗೂರು ತಾಲೂಕುಗಳಲ್ಲಿ ಶೇ.19ಕ್ಕಿಂತ ಕಡಿಮೆ ಮಳೆಯಾಗಿದ್ದು, ಪಿರಿಯಾಪಟ್ಟಣ, ಹುಣಸೂರು, ಕೆ.ಆರ್.ನಗರ, ಮೈಸೂರು ಹಾಗೂ ಸಾಲಿಗ್ರಾಮ ತಾಲೂಕುಗಳಲ್ಲಿ ಮುಂಗಾರು ಹಂಗಾಮಿನ ಕೊರತೆ ತೀವ್ರವಾಗಿದೆ.

ಕಡಿಮೆಯಾದ ಬಿತ್ತನೆ: ಮುಂಗಾರು ಅದರಲ್ಲೂ ಸೆಪ್ಟೆಂಬರ್‌ನಲ್ಲಿ ವಾಡಿಕೆ ಮಳೆಯಾಗದ ಪರಿಣಾಮ ವಿವಿಧ ಬೆಳೆಗಳ ಬಿತ್ತನೆ ಪ್ರಮಾಣ ಭಾರೀ ಕುಸಿತವಾಗಿದೆ. ಇನ್ನೂ ಮುಂಗಾರು ಹಂಗಾಮು ಬಿತ್ತನೆ ಕ್ಷೇತ್ರದ ಗುರಿಯಲ್ಲಿ ಸುಮಾರು ಶೇ.95ರಷ್ಟು ಮಾತ್ರ ಸಾಧನೆ ಆಗಿದೆ. ದೀರ್ಘಾವಧಿ ಬೆಳೆಯ ಬಳಿಕ ಮತ್ತೊಂದು ಬೆಳೆ ಮಾಡುವುದರಿಂದ ಜಿಲ್ಲೆಯ ಬೆಳೆ ಸಾಂದ್ರತೆ ಶೇ.149ರಷ್ಟಿದೆ. ಇದರಿಂದ ಮುಂಗಾರು ಬಿತ್ತನೆ ಗುರಿಗಿಂತ ಶೇ.7ರಿಂದ 10ರಷ್ಟು ಹೆಚ್ಚು ಸಾಧನೆ ನಿರೀಕ್ಷಿಸಲಾಗುತ್ತದೆ. ಆದರೆ ಈ ಬಾರಿ ಪಿರಿಯಾಪಟ್ಟಣ 101, ತಿ.ನರಸೀಪುರ ಶೇ.100, ಸರಗೂರು 99, ಹೆಚ್.ಡಿ.ಕೋಟೆ 98, ನಂಜನಗೂಡು ಹಾಗೂ ಮೈಸೂರು ತಲಾ 96, ಹುಣಸೂರು 91, ಸಾಲಿಗ್ರಾಮ 83 ಹಾಗೂ ಕೆ.ಆರ್.ನಗರ 80 ಪರ್ಸೆಂಟ್ ಬಿತ್ತನೆಯಾಗಿದ್ದು, ಜಿಲ್ಲೆಯ ಸರಾಸರಿ ಇನ್ನೂ ನೂರರ ಗಡಿ ಮುಟ್ಟಿಲ್ಲ. ಕಳೆದ ವರ್ಷ ಇದೇ ಅವಧಿಗೆ ಶೇ.101ರಷ್ಟು ಬಿತ್ತನೆ ಸಾಧನೆಯಾಗಿತ್ತು.

ಬಿತ್ತನೆಯಾಗದ ಕ್ಷೇತ್ರ ಪ್ರಮುಖ ಆಹಾರ ಧಾನ್ಯಗಳಾದ ಭತ್ತ 2570 ಹೆಕ್ಟೇರ್ ಹಾಗೂ ರಾಗಿ 8319 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಆಗಿಲ್ಲ. ಸೆಪ್ಟೆಂಬರ್ ಮಳೆ ಕೊರತೆಯಿಂದ ಹುರುಳಿ 1570 ಹೆಕ್ಟೇರ್‌ನಲ್ಲಿ ಬಿತ್ತನೆ ಆಗಲಿಲ್ಲ. ಹುಣಸೂರು ಭಾಗದ ಪ್ರಮುಖ ಬೆಳೆಯಾದ ಅವರೆ ಕಾಳು 2748 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಆಗಿಲ್ಲ. ಇನ್ನು ಸುಮಾರು 31 ಸಾವಿರ ಹೆಕ್ಟೇರ್‌ನಲ್ಲಿ ಹತ್ತಿ ಬಿತ್ತನೆ ಮಾಡಲಾಗುತ್ತಿತ್ತು. ಆದರೆ ಕಳೆದ ಬಾರಿ ಬೆಲೆ ಕಡಿಮೆಯಾಗಿದ್ದು, ಸವಾಲಾಗಿದ್ದ ಕೀಟ ನಿರ್ವಹಣೆ ಇನ್ನಿತರ ಕಾರಣಗಳಿಂದ ಬಹುತೇಕ ರೈತರು ಬೆಳೆ ಬದಲಿಸಿರುವುದರಿಂದ18,640 ಹೆಕ್ಟೇರ್‌ನಲ್ಲಿ ಮಾತ್ರ ಹತ್ತಿ ಬಿತ್ತನೆ ಮಾಡಲಾಗಿದೆ. ಹತ್ತಿ ಬೆಳೆಗಾರರು ಈ ಬಾರಿ ಮುಸುಕಿನ ಜೋಳದತ್ತ ಮುಖ ಮಾಡಿದ್ದರಿಂದ 66,683 ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿದ್ದು, ನಿರೀಕ್ಷಿತ ಗುರಿ(56630 ಹೆಕ್ಟೇರ್)ಗಿಂತ ಶೇ.18ರಷ್ಟು ಹೆಚ್ಚಾಗಿದೆ.

ಬೆಳೆ ನಷ್ಟವೂ ಕಡಿಮೆ: ಏಪ್ರಿಲ್‌ನಿಂದ ಈವರೆಗೆ 64.98 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಷ್ಟವಾಗಿದೆ. ನಂಜನಗೂಡಿನಲ್ಲಿ ಕಬಿನಿ ಉಕ್ಕಿ ಹರಿದಿದ್ದರಿಂದ 35 ಹೆಕ್ಟೇರ್‌ಗಿಂತ ಹೆಚ್ಚು ಹಾಗೂ ಕೆ.ಆರ್.ನಗರದಲ್ಲಿ ಹಿನ್ನೀರಿನಿಂದ 6.59 ಹೆಕ್ಟೇರ್ ಸೇರಿ ಒಟ್ಟು 42 ಹೆಕ್ಟೇರ್‌ನಷ್ಟು ಭತ್ತದ ಬೆಳೆ ನಷ್ಟವಾಗಿದೆ. ಇದರ ಹೊರತು ಅತಿವೃಷ್ಟಿ ಯಿಂದ ಸ್ವಲ್ಪ ಪ್ರಮಾಣದ ಬೆಳೆ ನಷ್ಟವಾಗಿದೆ ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಕೆ.ಹೆಚ್.ರವಿ ತಿಳಿಸಿದ್ದಾರೆ.

ಸಾಕಷ್ಟು ರಸಗೊಬ್ಬರ ದಾಸ್ತಾನು

ಮೈಸೂರು ಜಿಲ್ಲೆಯಲ್ಲಿ ಯಾವುದೇ ರಸಗೊಬ್ಬರಕ್ಕೂ ಕೊರತೆ ಇಲ್ಲ. ಯೂರಿಯಾ ಸೇರಿ ಎಲ್ಲಾ ಮಾದರಿಯ ಒಟ್ಟು 14 ಸಾವಿರ ಮೆಟ್ರಿಕ್ ಟನ್ ರಸಗೊಬ್ಬರದ ಅಗತ್ಯತೆಯನ್ನು ಅಂದಾಜಿಸಲಾಗಿದೆ. ವಿವಿಧ ರಸಗೊಬ್ಬರ ಡೀಲರ್‌ಗಳು, ಹೋಲ್‌ಸೇಲ್ ವ್ಯಾಪಾರಿಗಳು ಸೇರಿದಂತೆ ಎಲ್ಲಾ ದಾಸ್ತಾನು ಕೇಂದ್ರಗಳಲ್ಲಿ 26,181 ಮೆಟ್ರಿಕ್ ಟನ್‌ನಷ್ಟು ರಸಗೊಬ್ಬರ ದಾಸ್ತಾನು ಇದೆ. ಆದ್ದರಿಂದ ರಸಗೊಬ್ಬರದ ಬಗ್ಗೆ ಯಾವ ರೈತರೂ ಗೊಂದಲಕ್ಕೆ ಈಡಾಗಬಾರದು ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಕೆ.ಹೆಚ್.ರವಿ ಸ್ಪಷ್ಟಪಡಿಸಿದ್ದಾರೆ.

ಹೊಸ ಟೆಕ್ನಾಲಜಿ ಮೊರೆ ಹೋದ ಕೆಎಂಎಫ್

ನಕಲಿ, ಕಲಬೆರಕೆ ನಂದಿನಿ ಉತ್ಪನ್ನ ಪತ್ತೆ ಇನ್ನು ಸುಲಭ



ಬೆಂಗಳೂರು,ಅ.21–ಕರ್ನಾಟಕದ ಹೆಮ್ಮೆಯ ಬ್ರ್ಯಾಂಡ್ ನಂದಿನಿ, ನಕಲಿ ಉತ್ಪನ್ನ ಮತ್ತು ಕಲ ಬೆರಕೆ ಸುಲಭವಾಗಿ ಕಂಡುಹಿಡಿಯಲು ಹೊಸ ಟೆಕ್ನಾಲಜಿಯ ಮೊರೆ ಹೋಗಿದೆ.

ನಕಲಿ ಹಾಗೂ ಕಲಬೆರಕೆ ಹಾಲಿನ ಉತ್ಪನ್ನ ಮಾರಾಟ ವಿಚಾರದ ಬಗ್ಗೆ ಪ್ರತಿಕ್ರಿಯಿಸಿರೋ ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಶಿವಸ್ವಾಮಿ, ಶೀಘ್ರವೇ ನಮ್ಮ ಉತ್ಪನ್ನಗಳ ಮೇಲೆ ಕ್ಯೂಆರ್ ಕೋಡ್ ಅಂಟಿಸಲಾಗುವುದು. ಅದರಲ್ಲಿ ನಮ್ಮ ಉತ್ಪನ್ನಗಳ ಎಲ್ಲಾ ಮಾಹಿತಿ ಇರುತ್ತದೆ. ಜೊತೆಗೆ ಯಾವುದು ಅಸಲಿ, ಯಾವುದು ನಕಲಿ ಎಂಬುದನ್ನೂ ತಿಳಿದುಕೊಳ್ಳಬಹುದು ಎಂದಿದ್ದಾರೆ. ಜೊತೆಗೆ ನಕಲಿ, ಕಲಬೆರಕೆ ಮಾಡುವವರ ವಿರುದ್ಧ ಕಾನೂನು ಕ್ರಮ ಆಗಲಿದೆ ಎಂಬ ಎಚ್ಚರಿಕೆಯನ್ನೂ ರವಾನಿಸಿದ್ದಾರೆ. ಪ್ರತಿದಿನ ಸರಾಸರಿ 1 ಕೋಟಿ ಲೀಟರ್ ಹಾಲು ಸಂಗ್ರಹವಾಗುತ್ತಿದೆ. 65 ಲಕ್ಷ ಲೀಟರ್ ಹಾಲು, ಮೊಸರು, ಉತ್ಪನ್ನ ಗ್ರಾಹಕರಿಗೆ ತಲುಪುತ್ತಿದೆ ದುಬೈ, ಸಿಂಗಾಪುರದಲ್ಲೂ ಕೂಡ ನಂದಿನಿ ಉತ್ಪನ್ನಗಳ ಮಾರಾಟ ನಡೆಯುತ್ತಿದ್ದು, ಮಧುಮೇಹಿಗಳ ಅನುಕೂಲಕ್ಕಾಗಿ ಸಕ್ಕರೆ ರಹಿತ ಸಿಹಿ ಉತ್ಪನ್ನಗಳನ್ನ ಸಿದ್ಧಪಡಿಸಲಾಗುತ್ತಿದೆ ಎಂದಿದ್ದಾರೆ. ಸದ್ಯಕ್ಕೆ ನಂದಿನಿ ಹಾಲು & ಉತ್ಪನ್ನಗಳ ಬೆಲೆ ಏರಿಕೆ ಪ್ರಸ್ತಾವನೆ ಇಲ್ಲ ಎಂದು ಪಶುಸಂಗೋಪನೆ ಸಚಿವ ಕೆ.ವೆಂಕಟೇಶ್ ಹೇಳಿದ್ದಾರೆ. ನಂದಿನಿ ಹಾಲಿನ ಉತ್ಪಾದನಾ ವೆಚ್ಚ ಜಾಸ್ತಿ ಆಗುತ್ತಾ ಇರುವುದು ನಿಜ. ಕಳೆದ ವರ್ಷ 725 ಮೆಟ್ರಿಕ್ ಟನ್ ನಂದಿನಿ ಸಿಹಿ ಉತ್ಪನ್ನ ಮಾರಾಟವಾಗಿದ್ದು, ಈ ಬಾರಿ 1000 ಮೆಟ್ರಿಕ್ ಟನ್ ಮಾರಾಟ ಗುರಿ ಇಟ್ಟುಕೊಂಡಿದ್ದೆವು. ಆದರೆ ಗುರಿ ಮೀರಿ 1100 ಮೆಟ್ರಿಕ್ ಟನ್ ಉತ್ಪನ್ನ ಮಾರಾಟವಾಗಿದೆ. ಒಟ್ಟಾರೆ 46 ಕೋಟಿ ರೂ.ಗಳ ದಾಖಲೆಯ ವಹಿವಾಟು ನಡೆದಿದ್ದು, ಇದು ಕೆಎಂಎಫ್ ಇತಿಹಾಸದಲ್ಲೇ ಸಾರ್ವಕಾಲಿಕ ದಾಖಲೆ ಎಂದಿದ್ದಾರೆ.

ವೈಭವದ ದೀಪಾವಳಿ ಜಾತ್ರೆ

ಈ ವೇಳೆ ಭಕ್ತರ ಉಘೇ ಮಾದಪ್ಪ, ಉಘೇ ಮಾದಪ್ಪ ಮತ್ತು ಜೈಕಾರ ಮುಗಿಲು ಮುಟ್ಟಿತ್ತು. ವಾದ್ಯಮೇಳಗಳ ಸದ್ದಿಗೆ ಯುವಕರು ಹೆಜ್ಜೆ ಹಾಕಿ ಗಮನಸೆಳೆದರು. ಬಳಿಕ ಮಹದೇಶ್ವರಸ್ವಾಮಿಗೆ ಅಭಿಷೇಕ ಮಾಡಲಾಯಿತು. ಸಾಲೂರು ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಪ್ರಾಧಿಕಾರದ ಕಾರ್ಯದರ್ಶಿ ಎ.ಈ.ರಘು ಇತರರು ಹಾಜರಿದ್ದರು.

ವಿಶೇಷ ಪೂಜೆ: ಸೋಮವಾರ ರಾತ್ರಿಯಿಂದ ಮಂಗಳವಾರ ಬೆಳಗಿನ ಜಾವದವರೆಗೆ ದೇವಸ್ಥಾನದ ಮುಂಭಾಗ, ರಂಗಮಂದಿರ ಮುಂತಾದೆಡೆ ಬಿಡಾರ ಹೂಡಿದ್ದ ಭಕ್ತರು ಮಾದಪ್ಪನನ್ನು ಸ್ಮರಿಸಿದರು. ಭಾನುವಾರ ರಾತ್ರಿ ಎಣ್ಣೆಮಜ್ಜನ ಸೇವೆ, ಹುಲಿವಾಹನ ಉತ್ಸವ, ಬಸವವಾಹನ, ರುದ್ರಾಕ್ಷಿ ಮಂಟಪೋತ್ಸವ ಮತ್ತಿತರ ಧಾರ್ಮಿಕ ಕಾರ್ಯಕ್ರಮಗಳು ಸಂಭ್ರಮದಿಂದ ನಡೆದಿತ್ತು. ರಾತ್ರಿ ಇಡೀ ಸರತಿಯಲ್ಲಿ ನಿಂತ ಭಕ್ತರು ಮಾದಪ್ಪನ ದರ್ಶನ ಪಡೆದರು. ದೀಪಾವಳಿ ಪ್ರಯುಕ್ತ ನಡೆಯುವ ನಾಲ್ಕು ದಿನಗಳ ಈ ಜಾತ್ರೆಗೆ ಭಕ್ತರ ದಂಡೇ ಹರಿದು ಬರುತ್ತಿದೆ. ಕರ್ನಾಟಕ ಮಾತ್ರವಲ್ಲದೆ ತಮಿಳುನಾಡಿನಿಂದಲೂ ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತರು ಬೆಟ್ಟಕ್ಕೆ ಬಂದು ಸ್ವಾಮಿಗೆ ಪೂಜೆ ಸಲ್ಲಿಸಿ ಮುಡಿ ಸೇವೆ, ಹರಕೆ, ಕಾಣಿಕೆ ಸಲ್ಲಿಸುತ್ತಿದ್ದಾರೆ. ಜಾತ್ರೆ ಹಿನ್ನೆಲೆಯಲ್ಲಿ ದೇವಸ್ಥಾನ ಹಾಗೂ ಗೋಪುರ ಸೇರಿದಂತೆ ಸುತ್ತಮುತ್ತಲ ಪ್ರದೇಶಕ್ಕೆ ವಿಶೇಷ ದೀಪಾಲಂಕಾರ ವ್ಯವಸ್ಥೆ ಮಾಡಲಾಗಿದೆ.

ಬಸ್ ನಿಲ್ದಾಣದಲ್ಲಿ ಜನಜಂಗುಳಿ: ಮಹದೇಶ್ವರ ಬೆಟ್ಟದಲ್ಲಿ ದೀಪಾವಳಿ ಅಮಾವಾಸ್ಯೆ ಪ್ರಯುಕ್ತ ನಡೆಯುವ ಜಾತ್ರಾ ಮಹೋತ್ಸವಕ್ಕೆ ತೆರಳಲು ಕೊಳ್ಳೇಗಾಲ, ಚಾಮರಾಜನಗರ, ಹನೂರು ಪಟ್ಟಣದ ಬಸ್ ನಿಲ್ದಾಣದಲ್ಲಿ ಬಸ್ ಹತ್ತಲು ಮಾದಪ್ಪನ ಭಕ್ತರು ಮುಗಿ ಬೀಳುತ್ತಿದ್ದಾರೆ. ಜಾತ್ರೆ ಹಿನ್ನೆಲೆಯಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಮಹದೇಶ್ವರ ಬೆಟ್ಟಕ್ಕೆ ಜನರು ಆಗಮಿಸುತ್ತಿದ್ದಾರೆ. ಮೈಸೂರು, ಚಾಮರಾಜನಗರ ಭಾಗದ ನಾನಾ ಗ್ರಾಮಗಳಿಂದ ಕಾಲ್ನಡಿಗೆಯಲ್ಲೇ ಒಂದು ವಾರದ ಹಿಂದಿನಿಂದಲೇ ಪ್ರಯಾಣ ಬೆಳೆಸಿದ್ದಾರೆ. ಅಂತೆಯೇ, ಸಾರಿಗೆ ಹಾಗೂ ಖಾಸಗಿ ಬಸ್‌ಗಳಲ್ಲೂ ಸಹಸ್ರಾರು ಭಕ್ತರು ತೆರಳುತ್ತಿದ್ದು, ಬಸ್ ನಿಲ್ದಾಣ ಜನರಿಂದ ಕಿಕ್ಕಿರಿದಿದ್ದು. ಬಸ್ ಹತ್ತಲು ನಾ ಮುಂದು ತಾ ಮುಂದು ಎಂದು ಮುಗಿ ಬೀಳುವ ಪ್ರಸಂಗ ಸಾಮಾನ್ಯವಾಗಿದೆ.

ದೀಪಾವಳಿ ಅಮಾವಾಸ್ಯೆ ಹಿನ್ನೆಲೆ ಮಹದೇಶ್ವರ ಬೆಟ್ಟಕ್ಕೆ ಚಾಮರಾಜನಗರ ಸೇರಿದಂತೆ ವಿವಿಧೆಡೆಯಿಂದ ಸಾರಿಗೆ ಬಸ್ ನಿಯೋಜಿಸಲಾಗಿದೆ. ಚಾಮರಾಜನಗರ ವಿಭಾಗದಿಂದ 126, ಮೈಸೂರು 155, ರಾಮನಗರ 30, ಮಂಡ್ಯ 60, ತುಮಕೂರು 60 ಸೇರಿದಂತೆ ಒಟ್ಟು 435 ಬಸ್ಸುಗಳನ್ನು ಪ್ರಯಾಣಿಕರ ಸೇವೆಗೆ ಒದಗಿಸಲಾಗುತ್ತಿದೆ.

ಭಕ್ತರಿಂದ ಹಾಸನಾಂಬೆಯ ದರ್ಶನ

ಆಶೀರ್ವಾದ ಪಡೆಯುತ್ತಿದ್ದಾರೆ. 12ನೇ ದಿನವಾದ ಮಂಗಳವಾರ ಆಗಿರುವುದರಿಂದ ಅಪಾರ ಸಂಖ್ಯೆಯ ಭಕ್ತರು ಹಾಸನಾಂಬೆ ದರ್ಶನ ಮಾಡಿದರು. ಅ.9ರ ಗುರುವಾರ ದೇಗುಲದ ಬಾಗಿಲು ತೆರೆಯಲಾಗಿದ್ದು. ಅ.10ರ ಶುಕ್ರವಾರದಿಂದ ಭಕ್ತರ ದರ್ಶನಕ್ಕೆ ಅವಕಾಶ ನೀಡಲಾಗಿತ್ತು. ಮೊದಲ 4 ದಿನ ಸರಾಸರಿ ಒಂದುವರೆ ಲಕ್ಷದಷ್ಟು ಭಕ್ತರು ದರ್ಶನ ಪಡರೆ ಅ.17ರ ಏಕಾದಶಿ ದಿನ ದಾಖಲೆಯ 4 ಲಕ್ಷ ಭಕ್ತರು ಹಾಸನಾಂಬೆ ದರ್ಶನ ಪಡೆದಿದ್ದಾರೆ. ನಂತರ ನಿತ್ಯವು ಎರಡರಿಂದ ಎರಡುವರೆ ಲಕ್ಷ ಭಕ್ತರು ಹಾಸನಾಂಬೆ ಆಶೀರ್ವಾದ ಪಡೆದು ವರ್ಷಕ್ಕೆ ಒಮ್ಮೆ ದರ್ಶನ ಕೊಡುವ ಮಹಾತಾಯಿಯನ್ನ ಕಣ್ತುಂಬಿಕೊಂಡು ತಮ್ಮ ಕಷ್ಟ ದೂರಮಾಡಿ, ಇಷ್ಟಾರ್ಥ ಸಿದ್ಧಿಸು ತಾಯೇ ಎಂದು ಬೇಡಿಕೊಂಡಿದ್ದಾರೆ. ಕೇವಲ ಭಕ್ತರು ಮಾತ್ರವಲ್ಲ ರಾಜಕೀಯ ನಾಯಕರು, ಸಿನಿತಾರೆಯರು, ವಿವಿಧ ಮಠಾಧೀಶರು, ನಾಡಿನ ಪ್ರತಿಷ್ಠಿತರು ದೇವಿಯ ದರ್ಶನ ಪಡೆದುಕೊಂಡಿದ್ದಾರೆ. ನಿನ್ನೆ ವಿಪಕ್ಷ ನಾಯಕ ಆರ್ ಅಶೋಕ್, ಶಾಸಕರು ಗಳಾದ ಜಿಟಿ ದೇವೇಗೌಡ, ಭಾಗೀರತಿ, ಸಿಎನ್ ಬಾಲಕೃಷ್ಣ, ಮಾಜಿ ಡಿಸಿಎಂ ಕೆಎಸ್ ಈಶ್ವರಪ್ಪ ಸೇರಿ ಹಲವು ಗಣ್ಯರು ದೇವಿ ದರ್ಶನ ಪಡೆದರು. ನಟ ವಿಜಯ ರಾಘವೇಂದ್ರ, ವಾಣಿಜ್ಯ ಮಂಡಳಿ ಮಾಜಿ ಸದ್ಯಕ್ಷ ಸಾರಾಗೋವಿಂದು ಸೇರಿ ಹಲವು ಗಣ್ಯರು ಶಕ್ತಿ ದೇವತೆಗೆ ನಮಿಸಿದ್ದಾರೆ. ಸಂಭ್ರಮ ಸಡಗರದ ಹಾಸನಾಂಬೆ ಉತ್ಸವಕ್ಕೆ ನಾಳೆಯೇ ಕೊನೆಯ ದಿನವಾಗಿದ್ದು ಸಾರ್ವಜನಿಕರ ದರ್ಶನಕ್ಕೆ ನಾಳೆ ಸಂಜೆಗೆ ತೆರೆಬೀಳಲಿದೆ.

23 ಲಕ್ಷಕ್ಕೂ ಅಧಿಕ ಭಕ್ತರಿಂದ ಹಾಸನಾಂಬೆಯ ದರ್ಶನ: ಇಷ್ಟಾರ್ಥ ಸಿದ್ದಿಸೋ ದೇವಿ, ಬೇಡಿದ ವರವ ಕರುಣಿಸುವ ಮಹಾತಾಯಿ, ವರ್ಷದಲ್ಲಿ ಒಮ್ಮೆ ಮಾತ್ರ ದರ್ಶನ ನೀಡುವ ಹಾಸನಾಂಬೆಯನ್ನ ಕಣ್ತುಂಬಿಕೊಳ್ಳಲು ಕೇವಲ ಕರ್ನಾಟಕ ರಾಜ್ಯ ಮಾತ್ರವಲ್ಲ ದೇಶದ ಹಲವು ರಾಜ್ಯಗಳಿಂದ ಭಕ್ತರು ಆಗಮಿಸುತ್ತಾರೆ. ಕಳೆದ ವರ್ಷ 20 ಲಕ್ಷ ಭಕ್ತರು ದೇವಿ ದರ್ಶನ ಮಾಡಿ ದಾಖಲೆ ನಿರ್ಮಾಣವಾಗಿದ್ದರೆ, ಈ ವರ್ಷ ಇನ್ನೂ ಒಂದು ದಿನ ಬಾಕಿ ಇರುವಂತೆಯೇ ಈ ದಾಖಲೆಯನ್ನ ಮೀರಿ 12 ದಿನಕ್ಕೆ 23 ಲಕ್ಷಕ್ಕೂ ಅಧಿಕ ಭಕ್ತರು ಹಾಸನಾಂಬೆಯ ಆಶೀರ್ವಾದ ಪಡೆದುಕೊಂಡಿದ್ದಾರೆ.

20 ಕೋಟಿಗೂ ಅಧಿಕ ಆದಾಯ: ಈ ವರ್ಷ ಕೇವಲ ಟಿಕೆಟ್, ಲಡ್ಡು ಪ್ರಸಾದ ಮಾರಾಟದಿಂದ ದಾಖಲೆಯ 20 ಕೋಟಿಗೂ ಅಧಿಕ ಆದಾಯ ಹರಿದುಬಂದಿದೆ.

ಮೈಸೂರು ಮಿತ್ರ

ಹುತಾತ್ಮ ಪೊಲೀಸರ ಕುಟುಂಬದೊಂದಿಗೆ ಇಲಾಖೆ ಇರುತ್ತದೆ

ಮೈಸೂರಲ್ಲಿ ನಡೆದ ಪೊಲೀಸರ ಹುತಾತ್ಮ ದಿನಾಚರಣೆಯಲ್ಲಿ ಡಿಐಜಿಪಿ ಡಾ.ಎಂ.ಬಿ.ಬೋರಲಿಂಗಯ್ಯ ಅಭಯ





ಮೈಸೂರು ನಜರಬಾದ್‌ನ ಜಿಲ್ಲಾ ಪೊಲೀಸ್ ಕಚೇರಿ ಸಂಕೀರ್ಣದ ಬಳಿಯ ಪೊಲೀಸ್ ಹುತಾತ್ಮರ ಸ್ಮಾರಕ ಉದ್ಯಾನವನದಲ್ಲಿ ಮಂಗಳವಾರ ದಕ್ಷಿಣ ವಲಯದ ಪೊಲೀಸ್ ಉಪ ಮಹಾನಿರೀಕ್ಷಕ (ಡಿಐಜಿಪಿ) ಡಾ. ಎಂ.ಬಿ.ಬೋರಲಿಂಗಯ್ಯ ಹುತಾತ್ಮರ ಸ್ಮಾರಕಕ್ಕೆ ಮಾಲಾರ್ಪಣೆ ಸಲ್ಲಿಸಿದರು. ಮತ್ತೊಂದು ಚಿತ್ರದಲ್ಲಿ ಪೊಲೀಸರು 'ವಾಲಿ ಫೈರ್' ಎಂದು ಕರೆಯುವ ಮೂರು ಸುತ್ತು ಗುಂಡು ಹಾರಿಸಿದರು. ಕೊನೆಯ ಚಿತ್ರದಲ್ಲಿ ಹುತಾತ್ಮ ಪೊಲೀಸರಿಗೆ ಪೊಲೀಸ್ ಬ್ಯಾಂಡ್ ವತಿಯಿಂದ ರಾಷ್ಟ್ರ ಗೀತೆ ಮೊಳಗಿಸಲಾಯಿತು.

ಮೈಸೂರು,ಅ.21(ಜಿಎ)–ಕರ್ತವ್ಯ ನಿರ್ವಹಣೆ ವೇಳೆ ಪ್ರಾಣ ತ್ಯಾಗ ಮಾಡಿದ ಹುತಾತ್ಮ ಪೊಲೀಸರ ಕುಟುಂಬಗಳೊಂದಿಗೆ ಪೊಲೀಸ್ ಇಲಾಖೆ ಸದಾ ಇರುತ್ತದೆ ಎಂದು ದಕ್ಷಿಣ ವಲಯದ ಪೊಲೀಸ್ ಉಪ ಮಹಾನಿರೀಕ್ಷಕ (ಡಿಐಜಿಪಿ) ಡಾ.ಎಂ.ಬಿ.ಬೋರಲಿಂಗಯ್ಯ ತಿಳಿಸಿದ್ದಾರೆ.

ಮೈಸೂರು ನಜರಬಾದ್‌ನ ಜಿಲ್ಲಾ ಪೊಲೀಸ್ ಕಚೇರಿ ಸಂಕೀರ್ಣದ ಬಳಿಯ ಪೊಲೀಸ್ ಹುತಾತ್ಮರ ಸ್ಮಾರಕ ಉದ್ಯಾನವನದಲ್ಲಿ ದಕ್ಷಿಣ ವಲಯ ಪೊಲೀಸ್ ಮಹಾ ನಿರೀಕ್ಷಕರ ಕಚೇರಿ, ನಗರ ಪೊಲೀಸ್, ಜಿಲ್ಲಾ ಪೊಲೀಸ್, ಕರ್ನಾಟಕ ಪೊಲೀಸ್ ಅಕಾಡೆಮಿ (ಕೆಪಿಎ), ಕರ್ನಾಟಕ ರಾಜ್ಯ ರಿಸರ್ವ್ ಪೊಲೀಸ್ (ಕೆಎಸ್‌ಆರ್‌ಪಿ) ಹಾಗೂ ಕರ್ನಾಟಕ ಸಶಸ್ತ್ರ ರಿಸರ್ವ್ ಪೊಲೀಸ್ (ಕೆಎಆರ್‌ಪಿ) ಮೌಂಟೆಡ್ ಪೊಲೀಸರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಪೊಲೀಸ್ ಹುತಾತ್ಮರ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದು, ಅಪರಾಧ ಪ್ರಕರಣಗಳನ್ನು ಪತ್ತೆಹಚ್ಚಿ ನಿಯಂತ್ರಿಸುವುದರ ಜೊತೆಗೆ, ಪೊಲೀಸರು ಈಗ ಭಯೋತ್ಪಾದನೆ, ಸೈಬರ್ ದಾಳಿ ಮುಂತಾದ ಹೊಸ ಸವಾಲುಗಳನ್ನು ಎದುರಿಸುತ್ತಿದ್ದಾರೆ. ನೈಸರ್ಗಿಕ ವಿಕೋಪಗಳು ಸಂಭವಿಸಿದಾಗ ಮೊದಲ ಪ್ರತಿಕ್ರಿಯೆ ನೀಡುವವರು ಪೊಲೀಸರು. ಇಂತಹ ಸಂದರ್ಭಗಳಲ್ಲಿ ಅನೇಕರು ತಮ್ಮ ಪ್ರಾಣವನ್ನೇ ಬಲಿದಾನ ಮಾಡಬೇಕಾಗುತ್ತದೆ ಎಂದು ಹೇಳಿದರು.

ದೇಶದ ಒಳಭಾಗದ ಭದ್ರತೆಗೆ ಪೊಲೀಸರು ಹಾಗೂ ಪ್ಯಾರಾಮಿಲಿಟರಿ ಪಡೆಗಳು ಹೊಣೆಗಾರರು. ದೇಶದ ಗಡಿಭಾಗದ ಭದ್ರತೆಗಾಗಿ ರಕ್ಷಣಾ ಪಡೆಗಳು ಕಾರ್ಯ ನಿರ್ವಹಿಸುತ್ತವೆ. ಈ ಎರಡೂ ಪಡೆಗಳು ರಾಷ್ಟ್ರದ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ ಎಂದು ತಿಳಿಸಿದರು.

ಈ ವೇಳೆ ಡಾ. ಬೋರಲಿಂಗಯ್ಯ, ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ವಿಷ್ಣುವರ್ಧನ, ಉಪಪೊಲೀಸ್ ಆಯುಕ್ತರು ಆರ್.ಎನ್.ಬಿಂದುಮಣಿ (ಕಾನೂನು ಮತ್ತು ಸುವ್ಯವಸ್ಥೆ), ಕೆ.ಎಸ್.ಸುಂದರ್‌ರಾಜ್ (ಅಪರಾಧ ಮತ್ತು ಟ್ರಾಫಿಕ್), ಗ್ರೂಪ್ ಕ್ಯಾಪ್ಟನ್ ಬಿಲ್ಲೋರೆ ಹೇಮಂತ್ ಕುಮಾರ್ (ವಾಯುಪಡೆ ಆಯ್ಕೆ ಮಂಡಳಿ–2, ಮೈಸೂರು), ಹೆಚ್ಚುವರಿ ಎಸ್‌ಪಿ ಸಿ. ಮಾಲಿಕ್, ಕೆಎಆರ್‌ಪಿ ಕಮಾಂಡಂಟ್ ಎ.ಮಾರುತಿ, ಡಿಸಿಪಿ (ಸಿಎಆರ್) ಸಿದ್ದನಗೌಡ ಪಾಟೀಲ್, ಕೆಎಸ್‌ಐಎಸ್‌ಎಫ್ ಕಮಾಂಡೆಂಟ್ ಮಹದೇವ ಪ್ರಸಾದ್, ಕೆಎಸ್‌ಆರ್‌ಪಿ ಕಮಾಂಡೆಂಟ್ ಕೆ.ಬಿ.ದೋರೇಮಣಿ ಭೀಮಯ್ಯ ಹಾಗೂ ಇತರ ಅಧಿಕಾರಿಗಳು ಹುತಾತ್ಮರ ಸ್ಮಾರಕದಲ್ಲಿ ಮಾಲಾರ್ಪಣೆ ಮಾಡಿದರು.

ನಂತರ ಮಾಜಿ ಐಪಿಎಸ್ ಅಧಿಕಾರಿ ಟಿ.ಹರಿಕೃಷ್ಣ ಅವರ ಪ್ರತಿಮೆಗೆ ಹೂವು ಅರ್ಪಿಸಲಾಯಿತು. ಅವರು 1992ರಲ್ಲಿ ಮೇನಿಯಂ ಕಾಡಿನಲ್ಲಿ ಕಾಡುಗಳ್ಳ ವೀರಪ್ಪನ್ ವಿರುದ್ಧದ ಕಾರ್ಯಾಚರಣೆಯಲ್ಲಿ ಹುತಾತ್ಮ ರಾದರು. 191 ಮಂದಿ ಹುತಾತ್ಮರು, 8 ಮಂದಿ ಕರ್ನಾ ಟಕದವರು ರಾಜ್ಯ ಪೊಲೀಸ್ ದೇಶದಾದ್ಯಂತ ಒಟ್ಟು 191 ಮಂದಿ ಪೊಲೀಸರು ಹುತಾತ್ಮರಾಗಿದ್ದು, ಅವರಲ್ಲಿ 8 ಮಂದಿ ಕರ್ನಾಟಕದವರು ಎಂದು ವರಿಷ್ಠಾಧಿಕಾರಿ ಎನ್.ವಿಷ್ಣುವರ್ಧನ ತಿಳಿಸಿದರು.

ಕಾರ್ಯಕ್ರಮದಲ್ಲಿ ಕೆಎಸ್‌ಆರ್‌ಪಿ 5ನೇ ಪಡೆಯ ಸಹಾಯಕ ಕಮಾಂಡೆಂಟ್ ಮಹದೇವಸ್ವಾಮಿ ಪೆರೇಡ್ ಕಮಾಂಡರ್ ಆಗಿದ್ದರು. ಪೆರೇಡ್‌ನಲ್ಲಿ ಭಾಗವಹಿಸಿದ ಪೊಲೀಸರು 'ವಾಲಿ ಫೈರ್' ಎಂದು ಕರೆಯುವ ಮೂರು ಸುತ್ತು ಗುಂಡು ಹಾರಿಸಿದರು. ನಂತರ ಪೊಲೀಸ್ ಬ್ಯಾಂಡ್ ರಾಷ್ಟ್ರೀಯಗೀತೆ ಮೊಳಗಿತು. ವಿಶೇಷ ಅತಿಥಿಗಳಾಗಿ ಭಾಗವಹಿಸಿದ್ದ ಮೈಸೂರು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಸ್.ಉಕೇಶ್ ಕುಮಾರ್, ಮಹಾನಗರ ಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸೀಫ್ ಮತ್ತು ಹಲವಾರು ಗಣ್ಯರು ಸ್ಮಾರಕದಲ್ಲಿ ಮಾಲಾರ್ಪಣೆ ಮಾಡಿ ಹುತಾತ್ಮರಿಗೆ ಗೌರವ ಸಲ್ಲಿಸಿದರು.

ಮಣ್ಣಿನ ದೀಪ ವಿತರಣೆ...



ಮೈಸೂರು ದೇವರಾಜ ಮಾರುಕಟ್ಟೆ ಮುಂಭಾಗದಲ್ಲಿ ಕೆಎಂಪಿಕೆ ಟ್ರಸ್ಟ್ ವತಿಯಿಂದ ದೀಪಾವಳಿ ಹಬ್ಬದ ಅಂಗವಾಗಿ ಸ್ವದೇಶಿ ಸುರಕ್ಷಿತ ಅಭಿಯಾನದ ಭಾಗವಾಗಿ ಮಣ್ಣಿನ ದೀಪಗಳನ್ನು ವಿತರಿಸಲಾಯಿತು. ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ಕರುಣಾಮಯಿ ವಿಷ್ಣು ಅಭಿಮಾನಿ ಬಳಗದ ಅಧ್ಯಕ್ಷ ಎಸ್.ಎನ್. ರಾಜೇಶ್, ಚಾಮರಾಜ ಕ್ಷೇತ್ರದ ಬಿಜೆಪಿ ಸಂಚಾಲಕ ಸಚಿನ್ ನಾಯಕ್, ಮಹಾನ್ ಶ್ರೇಯಸ್, ದುರ್ಗಾ ಪ್ರಸಾದ್, ಶ್ರೀನಿವಾಸ್ ಇತರರು ಉಪಸ್ಥಿತರಿದ್ದರು.

ಅ.24, ಎಂಆರ್‌ಐಟಿಯಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನ

ಮೈಸೂರು,ಅ.21(ಎಂಟಿವೈ)– ಮೈಸೂರು ರಾಯಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಎಂಆರ್‌ಐಟಿ) ಕಾಲೇಜು ಸಭಾಂಗಣದಲ್ಲಿ ಅ.24ರಂದು ಬೆಳಗ್ಗೆ 10ಕ್ಕೆ ಸಂವಹನ, ಕಂಪ್ಯೂಟರ್ ಮತ್ತು ಮಾಹಿತಿ ತಂತ್ರಜ್ಞಾನ ಅಂತರರಾಷ್ಟ್ರೀಯ ಸಮ್ಮೇಳನ ಆಯೋಜಿಸಲಾಗಿದೆ ಎಂದು ಎಂಆರ್‌ಐಟಿ ಕಾರ್ಯದರ್ಶಿ ನಂದಿನಿ ಎನ್.ಮೂರ್ತಿ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಐಇಇ ಬೆಂಗಳೂರು ಹಾಗೂ ಐಇಇ ಮೈಸೂರು ಘಟಕದ ತಾಂತ್ರಿಕ ನೆರವಿನಿಂದ ಎಂಆರ್‌ಐಟಿ ಕಾಲೇಜಿನ ಕ್ಯಾಂಪಸ್‌ನಲ್ಲಿ 'ಸಂವಹನ, ಕಂಪ್ಯೂಟರ್ ಮತ್ತು ಮಾಹಿತಿ ತಂತ್ರಜ್ಞಾನ ಕುರಿತ ಸಮ್ಮೇಳನ ಆಯೋಜಿಸಲಾಗಿದ್ದು, ಈ ಸಮ್ಮೇಳನವನ್ನು ವಿಟಿಯು ಕುಲಪತಿ ಡಾ.ಎಸ್. ವಿದ್ಯಾಶಂಕರ್ ಉದ್ಘಾಟಿಸಲಿದ್ದಾರೆ.

ಗೌರವ ಅತಿಥಿಗಳಾಗಿ ಯೂರೋಪಿನ ರೊಸ್ಸನ ಕ್ಯಾಪ್ರಟೊ, ಬರ್ನಾಡ್ ಮಲಿಯಾ, ವಿಶೇಷ ಅತಿಥಿಗಳಾಗಿ ಎನ್‌ಎಂಐಟಿಯ ಡಾ.ಬಿ.ಡಿ.ಪರಮೇಶಚಾರಿ, ಎಂಐಟಿ ಡೀನ್ ಡಾ.ರವಿಚಂದ್ರ ಕುಲಕರ್ಣಿ, ಅಧ್ಯಕ್ಷತೆಯನ್ನು ಎಂಆರ್‌ಐಟಿ ಅಧ್ಯಕ್ಷ ಡಾ.ಚಂದನ ವಿದ್ಯಾಶಂಕರ್, ಕಾರ್ಯದರ್ಶಿ ನಂದಿನಿ ಎನ್.ಮೂರ್ತಿ, ಖಜಾಂಚಿ ಡಾ.ರಾಮಲಿಂಗಯ್ಯ ವಹಿಸಲಿದ್ದಾರೆ ಎಂದರು.

ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯದಿಂದ 2500ಕ್ಕೂ ಹೆಚ್ಚು ಸಂಶೋಧನಾ ಪತ್ರಿಕೆ ಸಲ್ಲಿಕೆಯಾಗಿದೆ. ಆದರೆ, ಸಮ್ಮೇಳನಕ್ಕೆ 180 ತಾಂತ್ರಿಕ ಲೇಖನಗಳು ವಿಷಯ ಮಂಡನೆಯಾಗಲಿದೆ. ಸಂಶೋಧನಾ ವಿದ್ಯಾರ್ಥಿಗಳು, ವೃತ್ತಿಪರರಿಗೆ ಹೊಸ ಆವಿಷ್ಕಾರಾತ್ಮಕ ಕಲ್ಪನೆಗಳನ್ನು ಹಂಚಿಕೊಳ್ಳಲು, ಸಂವಹನ, ಕಂಪ್ಯೂಟರ್ ಸೈನ್ಸ್ ಮತ್ತು ಮಾಹಿತಿ ತಂತ್ರಜ್ಞಾನದಲ್ಲಿ ಇತ್ತೀಚಿನ ಸಾಧನೆಗಳ ಬಗ್ಗೆ ಚರ್ಚೆ ನಡೆಯಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಕಾಲೇಜು ಪ್ರಾಂಶುಪಾಲ ಡಾ.ಕೆ.ಎಸ್.ಅಭಿನಂದನ್, ಉಪ ಪ್ರಾಂಶುಪಾಲ ಡಾ.ಎನ್.ನಕುಲ್, ಡಾ.ಜ್ಯೋತಿ ಉಪಸ್ಥಿತರಿದ್ದರು.

ಅ.26, ನಿರಂತರ ಕಲೆಮನೆ ನೃತ್ಯ ಸಮ್ಮೇಳನ

ಮೈಸೂರು,ಅ.21–ಮೈಸೂರಿನ ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರದ ವತಿಯಿಂದ ಅ.26ರಂದು ಬೆಳಗ್ಗೆ 9.30 ರಿಂದ ಸಂಜೆ 6.30 ರವರೆಗೆ ಕಲೆಮನೆ ಸಭಾಂಗಣದಲ್ಲಿ ಅಂತರರಾಷ್ಟ್ರೀಯ ನಿರಂತರ ಕಲೆಮನೆ ನೃತ್ಯ ಸಮ್ಮೇಳನ ಏರ್ಪಡಿಸಲಾಗಿದೆ. ನೃತ್ಯ ಸಮ್ಮೇಳನದ ಅಧ್ಯಕ್ಷರಾದ ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದಿರುವ ಶಾಂತಲಾ ನಾಟ್ಯಶ್ರೀ ಪ್ರಶಸ್ತಿ ಪುರಸ್ಕೃತರಾದ ಡಾ ವಸುಂಧರ ದೊರಸ್ವಾಮಿ ಅವರು ಕಲೆಮನೆ ಕಲಾಶ್ರೀ ಜೀವಮಾನ ಸಾಧನ ಪ್ರಶಸ್ತಿ ಕೂಡ ಸ್ವೀಕರಿಸಲಿದ್ದಾರೆ.

ಚಿತ್ತಾಪುರದಲ್ಲಿ ಆರ್‌ಎಸ್‌ಎಸ್ ಪಥ ಸಂಚಲನಕ್ಕೆ ಅನುಮತಿ ನೀಡಬೇಡಿ

ಅನುಮತಿ ಕೊಟ್ಟರೆ ನಾವು ಸಂವಿಧಾನ ಹಿಡಿದು ಪಥ ಸಂಚಲನ ನಡೆಸುತ್ತೇವೆ

ಮೈಸೂರು,ಅ.21(ಜಿಎ)– ಕಲಬುರ್ಗಿಯ ಚಿತ್ತಾಪುರದಲ್ಲಿ ನ.2 ರಂದು ಆರ್‌ಎಸ್‌ಎಸ್ ಕಾರ್ಯಕ್ರಮ ನಡೆಸಲು ಅನುಮತಿ ನೀಡಬಾರದು. ಒಂದು ವೇಳೆ ಅನುಮತಿ ನೀಡಿದರೆ ನಾವೂ ಸಹಾ ಸಂವಿಧಾನ ಹಿಡಿದು, ಬಿಳಿ ಬಟ್ಟೆ, ನೀಲಿ ಟೊಪ್ಪಿ ಧರಿಸಿ, ಎಲ್ಲೆಡೆ ಪಥ ಸಂಚಲನ ಮಾಡುತ್ತೇವೆ ಎಂದು ಮಾಜಿ ಮೇಯರ್ ಪುರುಷೋತ್ತಮ ಎಚ್ಚರಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆರ್‌ಎಸ್‌ಎಸ್ ಅವರು ಲಾಠಿ ಹಿಡಿದು ಬೀದಿ ಬೀದಿಯಲ್ಲಿ ಪಥ ಸಂಚಲನ ಮಾಡುವುದಾದರೂ ಏತಕ್ಕಾಗಿ, ಹಿಂದೂ ನಾವೆಲ್ಲಾ ಒಂದು ಎನ್ನುವ ಇವರು ಇಂದಿಗೂ ಸಮಾಜದಲ್ಲಿ ಅಸ್ಪೃಶ್ಯತೆ, ಅಸಮಾನತೆ, ಸ್ತ್ರೀಯರ ಬಗೆಗಿನ ತಾರತಮ್ಯ ಮೊದಲಾದವನ್ನು ಹೋಗಲಾಡಿಸುವ ಬಗ್ಗೆ ಏಕೆ ಮಾತನಾಡುತ್ತಿಲ್ಲ. ಇಂದಿಗೂ ಆರ್‌ಎಸ್‌ಎಸ್‌ನ ಪ್ರಮುಖ ಹುದ್ದೆಗಳು ಒಂದೇ ಜಾತಿಗೆ ಸೀಮಿತವಾಗಿರುವುದು ಏಕೆ ಎಂದು ಪ್ರಶ್ನಿಸಿದರು.



ಪುರುಷೋತ್ತಮ

ಸಚಿವ ಪ್ರಿಯಾಂಕ ಖರ್ಗೆ ಆರ್‌ಎಸ್‌ಎಸ್ ವಿರುದ್ಧ ಮಾತನಾಡಿದರೆ ಬಿಜೆಪಿ ನಾಯಕರು ಮುಗಿ ಬೀಳುವ್ರದೇಕೆ ಅಂದರೆ ಆರ್‌ಎಸ್‌ಎಸ್ ಹಾಗೂ ಬಿಜೆಪಿ ಒಂದೇ ನಾಣ್ಯದ ಎರಡು ಮುಖಗಳೆಂಬುದನ್ನು ಇವರು ಸಾಬೀತು ಪಡಿಸುತ್ತಿದ್ದಾರೆ. ಇವರಿಗೆ ಕಾನೂನಿನ ಬಗ್ಗೆ ಆಸಕ್ತಿ ಇದ್ದಲ್ಲಿ ಮೊದಲು ಇವರ ಸಂಘಟನೆ ಕಾನೂನಿನ ಅಡಿಯಲ್ಲಿ ನೋಂದಣಿ ಆಗಲಿ. ಕಳೆದ ನೂರು ವರ್ಷಗಳಲ್ಲಿ ಈ ಸಂಘಟನೆಗೆ ಹರಿದುಬಂದ ವಿದೇಶಿ ದೇಣಿಗೆ, ದೇಶಿಯ ಸಂಪನ್ಮೂಲ ಸಂಗ್ರಹಣೆ ಬಗ್ಗೆ ಸಾರ್ವಜನಿಕರಿಗೆ, ಸರ್ಕಾರಕ್ಕೆ ಲೆಕ್ಕ ಕೊಡಲಿ, ಇವರು ಯಾವ ಉದ್ದೇಶಕ್ಕಾಗಿ ಈ ದೇಣಿಗೆ ಬಳಸಿದ್ದಾರೆಂಬ ಮಾಹಿತಿ ನೀಡಲಿ ಎಂದು ಆಗ್ರಹಿಸಿದರು.

ಆರ್‌ಎಸ್‌ಎಸ್ ನಿಷೇಧಿಸಬೇಕೆಂದು ಪ್ರಿಯಾಂಕ ಖರ್ಗೆ ಹೇಳಿಯೇ ಇಲ್ಲ. ಆದರೆ ಆರ್‌ಎಸ್‌ಎಸ್ ಈ ದೇಶದ ಸಂವಿಧಾನಾತ್ಮಕ ಕಾನೂನುಗಳಿಗೆ ಬೆಲೆ, ಗೌರವ ಕೊಡಬೇಕೆಂದು ಹೇಳಿದರೆ. ಅದಕ್ಕೆ ಇಷ್ಟು ಹೆದರಿ ಅವರಿಗೆ ಕೊಲೆ ಬೆದರಿಕೆ ಹಾಕುವಂತಹ ಧೂರ್ತತನ ತೋರಿದರೂ ಆರ್‌ಎಸ್‌ಎಸ್ ಮೌನ ವಹಿಸಿದೆ ಎಂದು ಕಿಡಿಕಾರಿದರು.

ದೇಶವನ್ನು ರಕ್ಷಿಸಲು ಬಲಾಢ್ಯವಾದ ಸಂವಿಧಾನ ಇದೆ, ಸೇನೆಗಳೂ ಇವೆ. ಬಲಿಷ್ಠ ರಾಜ್ಯಾಡಳಿತ ಇದೆ. ಹೀಗಿದ್ದರೂ ಆರ್‌ಎಸ್‌ಎಸ್ ದೇಶ ರಕ್ಷಣೆಗಾಗಿ ಇರುವ ಸಂಘಟನೆಯೆಂದು ಜಂಬ ಕೊಚ್ಚಿಕೊಳ್ಳುತ್ತಿದ್ದಾರೆ. ಇದಲ್ಲದೆ, ಪ್ರಿಯಾಂಕ ಖರ್ಗೆ ಆರ್‌ಎಸ್‌ಎಸ್ ಧ್ಯೇಯ, ಉದ್ದೇಶಗಳಿಗೆ ಕೇಳಿರುವಜ ಪ್ರಶ್ನೆಗಳಿಗೆ ಉತ್ತರಿಸುವ ಧೈರ್ಯ ತೋರಬೇಕು. ಈಗಲೂ ಆರ್‌ಎಸ್‌ಎಸ್‌ನವರು ಶೂದ್ರ ವರ್ಗದ ಮಕ್ಕಳು ಲಾಠಿ ಹಿಡಿದು ಬೀದಿ ಸುತ್ತುವಂತೆ ಮಾಡಿದ್ದಾರೆ. ಆದರೆ ಬಿಜೆಪಿ ನಾಯಕರ ಮಕ್ಕಳು ವಿದೇಶಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ ಎಂದರು. ಗೋಷ್ಠಿಯಲ್ಲಿ ಹರಕುಮಾರ್, ಸಿದ್ದಸ್ವಾಮಿ, ಮಣಿಯಯ್ಯ, ಸೋಮಯ್ಯ, ಪುಟ್ಟರಾಜು, ಸುರೇಶ್, ಸಣ್ಣಸ್ವಾಮಿ, ರವಿಕುಮಾರ್ ಉಪಸ್ಥಿತರಿದ್ದರು.

ಅ.24ರಂದು ಜಿಲ್ಲಾ ಯುವ ಜಾನಪದ ಪ್ರಪಂಚ ಪ್ರಶಸ್ತಿ ಪ್ರದಾನ ಸಮಾರಂಭ

ಮೈಸೂರು, ಅ. 21– ಕನ್ನಡ ಜಾನಪದ ಪರಿಷತ್, ಮೈಸೂರು ಜಿಲ್ಲೆ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಲಲಿತಕಲಾ ಕಾಲೇಜು, ಮಾನಸಗಂಗೋತ್ರಿ ಸಂಯುಕ್ತಾಶ್ರಯದಲ್ಲಿ ಅಕ್ಟೋಬರ್ 24ರಂದು ಲಲಿತಕಲಾ ಕಾಲೇಜು ಸಭಾಂಗಣದಲ್ಲಿ ನಡೆಯುವ ಮೈಸೂರು ಜಿಲ್ಲಾ ಜಾನಪದ ಪ್ರಪಂಚ ಪ್ರಶಸ್ತಿ ಹಾಗೂ ಮೈಸೂರು ಜಿಲ್ಲಾ ಯುವ ಜಾನಪದ ಪ್ರಪಂಚ ಪ್ರಶಸ್ತಿ ಪ್ರದಾನ ಸಮಾರಂಭ ಏರ್ಪಡಿಸಲಾಗಿದೆ.

ಮೈಸೂರಿನ ಹೆಸರಾಂತ ಜಾನಪದ ಸಂಸ್ಥೆಯಾದ ಶ್ರೀ ಬನ್ನಿಕಾಳೇಶ್ವರಿ ಜಾನಪದ ಕಲಾತಂಡ, ಮೈಸೂರು ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಜೋಗಿಕುಮಾರ್ ಅವರು ಜಾನಪದ ಕ್ಷೇತ್ರದಲ್ಲಿ ಸಲ್ಲಿಸಿರುವ ಗಣನೀಯ ಸೇವೆಯನ್ನು ಪರಿಗಣಿಸಿ ಅವರಿಗೆ ಮೈಸೂರು ಜಿಲ್ಲಾ ಯುವ ಜಾನಪದ ಪ್ರಪಂಚ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ ಎಂದು ಕನ್ನಡ ಜಾನಪದ ಪರಿಷತ್ ಮೈಸೂರು ಜಿಲ್ಲೆಯ ಅಧ್ಯಕ್ಷ ಕ್ಯಾತನಹಳ್ಳಿ ಪ್ರಕಾಶ್ ಸುದ್ದಿ ಗೋಷ್ಠಿಯಲ್ಲಿ ತಿಳಿಸಿದರು. ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ, ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್, ಕನ್ನಡ ಜಾನಪದ ಪರಿಷತ್ ರಾಜ್ಯಾಧ್ಯಕ್ಷ ಎಸ್.ಬಾಲಾಜಿ, ಮಾಜಿ ಸಚಿವ ಎಂ.ಶಿವಣ್ಣ, ಕರ್ನಾಟಕ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ನಾಗರಾಜ್ ಬೈರಿ ಮತ್ತಿತರರು ಭಾಗವಹಿಸಲಿದ್ದಾರೆ.

ಭಾಷೆ, ಭಾವ, ಅಭಿವ್ಯಕ್ತಿಯ ಹದದಿಂದ ಶ್ರೇಷ್ಠ ಕೃತಿ ರಚನೆ

ಸಾಹಿತಿ ಡಾ.ನೀಲಗಿರಿ ಎಂ.ತಳವಾರ ಅಭಿಮತ

ಮೈಸೂರು, ಅ. 21– ಸಾರ್ವಕಾಲಿಕವಾದ ಒಂದು ಸರ್ವಶ್ರೇಷ್ಠ ಕೃತಿ ಒಡಮೂಡಬೇಕಾದರೆ ಸಾಹಿತ್ಯ ರಚನಾಕಾರನ ಹೃದಯದಲ್ಲಿ ಭಾವದ, ಭಾಷೆಯ, ಅಭಿವ್ಯಕ್ತಿಯ ಹದವಿರುವುದು ತುಂಬಾ ಮುಖ್ಯ ಎಂದು ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಹಾಗೂ ಸಾಹಿತಿ ಡಾ. ನೀಲಗಿರಿ ಎಂ. ತಳವಾರ ಅಭಿಪ್ರಾಯಪಟ್ಟರು.

ಸ್ಪಂದನ ಸಾಂಸ್ಕೃತಿಕ ಪರಿಷತ್ತು ಹಾಗೂ ದಕ್ಷ ಪದವಿ ಕಾಲೇಜಿನ ಸಂಯುಕ್ತ ಆಶ್ರಯದಲ್ಲಿ ನಗರದ ಹೂಟಗಳ್ಳಿಯಲ್ಲಿನ ದಕ್ಷ ಕಾಲೇಜು ಸಭಾಂಗಣದಲ್ಲಿ ನಡೆದ ಯುವ ಲೇಖಕ ಮುತ್ತೇಶ್ ಮೆಣಸಿನ ಕಾಯಿ ಅವರ 'ಹೃದಯಗರ್ಭ ದಲ್ಲೊಂದು ಅಗ್ನಿಪಥ' ಮತ್ತು 'ಬೆಳದಿಂಗಳ ಕಾಣುವ ಕನಸು' ಪುಸ್ತಕಗಳನ್ನು ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.



ಸ್ಪಂದನ ಸಾಂಸ್ಕೃತಿಕ ಪರಿಷತ್ತಿನ ವತಿಯಿಂದ ನಗರದ ದಕ್ಷ ಕಾಲೇಜಿನಲ್ಲಿ ನಡೆದ ಸಮಾರಂಭದಲ್ಲಿ ಯುವ ಲೇಖಕ ಮುತ್ತೇಶ್ ಮೆಣಸಿನಕಾಯಿ ಅವರ ಎರಡು ಕೃತಿಗಳನ್ನು ಸಾಹಿತಿ ಡಾ. ನೀಲಗಿರಿ ಎಂ. ತಳವಾರ ಲೋಕಾರ್ಪಣೆ ಮಾಡಿದರು. ಪರಿಷತ್ತಿನ ಅಧ್ಯಕ್ಷ ಟಿ. ಸತೀಶ್ ಜವರೇಗೌಡ, ಕಾಲೇಜಿನ ಅಧ್ಯಕ್ಷ ಪಿ.ಜಯಚಂದ್ರರಾಜು, ಪತ್ರಕರ್ತ ಕೆ.ಆರ್. ನೀಲಕಂಠ, ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಕೆ.ಪಿ.ಗುರುರಾಜ್ ಉಪಸ್ಥಿತರಿದ್ದರು.

ಹೃದಯದಲ್ಲಿ 'ಹದ'ವಿದ್ದರೆ, 'ಪದ' ತಾನೇ ತಾನಾಗಿ ಹುಟ್ಟುತ್ತದೆ. ಆಗ ರಸಭರಿತವಾದ ಸತ್ವಪೂರ್ಣ ಕೃತಿ ರಚನೆಯಾಗುತ್ತದೆ. ಯಾವತ್ತಿಗೂ ಹದವರಿತ ಕೃತಿಗಳು ಓದುಗರ ಸೆಳೆದಿಡುವಲ್ಲಿ ಸಫಲವಾಗುತ್ತವೆ. ಇಂತಹ ಹದವರಿತ ಬರೆವಣಿಗೆಯ ಕಲೆಯನ್ನು ಯುವ ಲೇಖಕರು ರೂಢಿಸಿಕೊಳ್ಳಲು ಮುಂದಾಗಬೇಕು ಎಂದು ಕರೆ ನೀಡಿದರು.

ಯುವ ಲೇಖಕ ಮುತ್ತೇಶ್ ಅವರ ಎರಡು ಕೃತಿಗಳ ಭಿತ್ತಿ ವಿಶಿಷ್ಟವಾಗಿದೆ. ಸಿನಿಮೀಯ ಮಾದರಿಯ ಕಥಾನಕ ಹೊಂದಿವೆ. ಇವುಗಳ ಆರಂಭ, ಮಧ್ಯಂತರ, ಅಂತ್ಯ ಗಮನಿಸಿದಾಗ ಆತ್ಮಕಥೆಯ ಗುಣವೂ ಇದೆ. ಆಧುನಿಕ ಜೀವನ ಕ್ರಮದ ಸಂವೇದನೆಗಳಿವೆ. ಆದರೆ, ಈ ಕೃತಿಗಳಲ್ಲಿ ಭಾವದ ಹದವಿದ್ದಾಗಿಯೂ, ಅಭಿವ್ಯಕ್ತಿಯ ಹದದ ಕೊರತೆ ಕಾಡುತ್ತದೆ ಎಂದು ವಿಶ್ಲೇಷಿಸಿದರು.

ಸ್ಪಂದನಾ ಸಾಂಸ್ಕೃತಿಕ ಪರಿಷತ್ತಿನ ಅಧ್ಯಕ್ಷ ಟಿ.ಸತೀಶ್ ಜವರೇಗೌಡ ಮಾತನಾಡಿ, ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕದ ಓದಿನಷ್ಟೇ, ಸಾಹಿತ್ಯ ಪುಸ್ತಕಗಳ ಓದು ತುಂಬ ಮುಖ್ಯ ಇದರಿಂದಾಗಿ, ಜ್ಞಾನದ ಜೊತೆಗೆ ಸಾಹಿತ್ಯ ಪುಸ್ತಕಗಳಲ್ಲಿನ ಲೋಕಾನುಭವ ದೊರಕುತ್ತದೆ. ಜ್ಞಾನದ ಪ್ರಸಾರವಾಗುತ್ತದೆ. ಸಾಮಾಜಿಕ ವ್ಯಕ್ತಿತ್ವ ವಿಕಾಸವಾಗುತ್ತದೆ. ಸಾಹಿತ್ಯಾಭಿರುಚಿಯು ಆಸಕ್ತಿಯ ಅಂಕುರವಾಗುತ್ತದೆ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ದಕ್ಷ ಕಾಲೇಜಿನ ಅಧ್ಯಕ್ಷ ಪಿ. ಜಯಚಂದ್ರ ರಾಜು ವಹಿಸಿದ್ದರು. ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಕೆ.ಪಿ.ಗುರುರಾಜ್, ಕೆ.ಆರ್. ಪೇಟೆಯ ಹಿರಿಯ ಪತ್ರಕರ್ತ ಕೆ.ಆರ್. ನೀಲಕಂಠ, ನಿವೃತ್ತ ಕೆ.ಎಸ್.ಆರ್.ಟಿ.ಸಿ. ಘಟಕ ವ್ಯವಸ್ಥಾಪಕ ಜಿ.ಬಿ. ಮಂಟೂರು, ಯುವ ಲೇಖಕ ಮುತ್ತೇಶ್ ಮೆಣಸಿನ ಕಾಯಿ, ಕಾಲೇಜಿನ ಪ್ರಾಂಶುಪಾಲ ಅಭಿಷೇಕ್, ಸ್ಪಂದನ ಸಾಂಸ್ಕೃತಿಕ ಪರಿಷತ್ತಿನ ಪದಾಧಿಕಾರಿ ಚಂದ್ರು ಮಂಡ್ಯ, ನಿವೃತ್ತ ಪ್ರಾಂಶುಪಾಲ ಕೆ.ಕಾಳೇಗೌಡ ಮತ್ತಿತರರು ಉಪಸ್ಥಿತರಿದ್ದರು.

ವಿಶೇಷಚೇತನರ ರಾಜ್ಯಮಟ್ಟದ ಕಲಾ–ಸಾಹಿತ್ಯ–ಸಂಗೀತೋತ್ಸವ

ಮೈಸೂರು,ಅ.21–ಮೈಸೂರಿನ ನಮನ ಕಲಾಮಂಟಪದಲ್ಲಿ ನಗರದ ಅಭಿರುಚಿ ಬಳಗದಿಂದ ಅ.26ರಂದು ಬೆಳಗ್ಗೆ 10.30 ರಿಂದ ಸಂಜೆ 6ರವರೆಗೆ ವಿಶೇಷ ಚೇತನರ ರಾಜ್ಯಮಟ್ಟದ ಕಲಾ–ಸಾಹಿತ್ಯ–ಸಂಗೀತ ಉತ್ಸವ ಏರ್ಪಡಿಸಲಾಗಿದೆ.

ಎನ್.ವಿ.ರಮೇಶ್ ಅವರ ವಿಶೇಷ ಚೇತನ ಮಗ ದಿವಂಗತ ಎನ್.ಆರ್.ಅಶ್ವಿನ್ ಅವರ 44ನೇ ಜನ್ಮದಿನದ ಸಂಸ್ಮರಣೆಯಲ್ಲಿ ರಾಜ್ಯದ 30 ವಿಶೇಷ ಚೇತನ ಸಾಧಕರಿಗೆ ಅಭಿರುಚಿ ಅಶ್ವಿನ್ ಚೈತನ್ಯದ ಚಿಲುಮೆ ಪ್ರಶಸ್ತಿ ನೀಡಿ ಗೌರವಿಸಲಾಗುವುದು.

ಮಧ್ಯಾಹ್ನ 3 ಗಂಟೆಗೆ ವಿಶೇಷ ಚೇತನರು ವಿಕಲಾಂಗತೆ ಸಮಸ್ಯೆ ಪರಿಹಾರ–ರಕ್ಷಣೆ ಬಗ್ಗೆ ಮನೋತಜ್ಞರು ಆಪ್ತ ಸಮಾಲೋಚಕರ ಸಲಹೆ ನಡೆಯಲಿದ್ದು, ಸಂಜೆ 4ರಿಂದ ಕವಿಗೋಷ್ಠಿ ನಡೆಯಲಿದೆ. ಅ.24ರೊಳಗೆ ಹೆಸರು ನೊಂದಾಯಿಸಿಕೊಳ್ಳಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9845565238 ಸಂಪರ್ಕಿಸಬಹುದು.

ದೇಶ - ವಿದೇಶ

ದೀಪಾವಳಿ ಬೋನಸ್ ಕೊಟ್ಟಿಲ್ಲ ಎಂದು ಟೋಲ್ ಸಂಗ್ರಹಿಸದೇ ವಾಹನಗಳನ್ನ ಫ್ರೀ ಬಿಟ್ಟ ಸಿಬ್ಬಂದಿ

ಲಕ್ನೋ: ದೀಪಾವಳಿ ಹಬ್ಬಕ್ಕೆ ಬೋನಸ್ ಕೊಟ್ಟಿಲ್ಲ ಎಂದು ಟೋಲ್ ಸಂಗ್ರಹಿಸದೇ ವಾಹನಗಳನ್ನು ಫ್ರೀ ಬಿಟ್ಟು ಟೋಲ್ ಸಿಬ್ಬಂದಿ ಮುಷ್ಕರ ನಡೆಸಿದ ಘಟನೆ ಆಗ್ರಾ–ಲಕ್ನೋ ಎಕ್ಸ್‌ಪ್ರೆಸ್ ವೇನಲ್ಲಿ ನಡೆದಿದೆ. ಇದರಿಂದ ಸಾವಿರಾರು ವಾಹನಗಳು ಟೋಲ್ ಪಾವತಿಸದೇ ಹೋಗಿದ್ದು, ನಿರ್ವಹಿಸುವ ಸಂಸ್ಥೆಗೆ ಲಕ್ಷಾಂತರ ರೂ. ನಷ್ಟವಾಗಿದೆ. ದೀಪಾವಳಿ ಬೋನಸ್ ನಿರಾಕರಿಸಿದ ಹಿನ್ನೆಲೆಯಲ್ಲಿ ಆಗ್ರಾ–ಲಕ್ನೋ ಎಕ್ಸ್‌ಪ್ರೆಸ್ ವೇ ಟೋಲ್ ನಿರ್ವಾಹಕರು ಎಲ್ಲಾ ವಾಹನಗಳನ್ನ ಫ್ರೀ ಬಿಟ್ಟಿದ್ದಾರೆ. ಟೋಲ್ ಪಾವತಿಸದೇ ವಾಹನಗಳು ಚಲಿಸುತ್ತಿರುವ ವಿಡಿಯೋಗಳು ಸೋಷಿಯಲ್ ಮೀಡಿಯಾದಲ್ಲೂ ಹರಿದಾಡುತ್ತಿವೆ. ಇದರಿಂದ ಕೇಂದ್ರ ಸರ್ಕಾರಕ್ಕೆ ಲಕ್ಷಾಂತರ ರೂ. ನಷ್ಟವಾಗಿದೆ. ಈ ಎಕ್ಸ್‌ಪ್ರೆಸ್ ವೇ ಆಗ್ರಾ ಮತ್ತು ಲಕ್ನೋ ನಡುವೆ ನೇರ ಸಂಪರ್ಕ ಕಲ್ಪಿಸುತ್ತದೆ. ಜೊತೆಗೆ ಯಮುನಾ ಎಕ್ಸ್‌ಪ್ರೆಸ್‌ವೇ ಮೂಲಕ ದೆಹಲಿ ಮತ್ತು ರಾಷ್ಟ್ರೀಯ ರಾಜಧಾನಿ ಪ್ರದೇಶಕ್ಕೂ ಸಂಪರ್ಕ ಕಲ್ಪಿಸುತ್ತದೆ. ಕಳೆದ 1 ವರ್ಷದಿಂದ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇವೆ ಎಂದು ಟೋಲ್ ಸಿಬ್ಬಂದಿ ಹೇಳಿಕೊಂಡಿದ್ದಾರೆ.



ಜಪಾನ್‌ನ ಮೊದಲ ಮಹಿಳಾ ಪ್ರಧಾನಿಯಾಗಿ ಸನೆ ತಾಕೈಚಿ ಆಯ್ಕೆ

ಟೋಕಿಯೊ: ಜಪಾನ್ ದೇಶದ ಮೊದಲ ಮಹಿಳಾ ಪ್ರಧಾನಿಯಾಗಿ, ಲಿಬರಲ್ ಡೆಮಾಕ್ರಟಿಕ್ ಪಕ್ಷದ ಕಟ್ಟಾ ಸಂಪ್ರದಾಯವಾದಿ ಸನೆ ತಕೈಚಿ (64) ಅವರನ್ನು ಸಂಸತ್ತು ಮಂಗಳವಾರ ಆಯ್ಕೆ ಮಾಡಿತು.



ಪ್ರಧಾನಿಯಾಗಿ ಕೇವಲ ಒಂದು ವರ್ಷ ಸೇವೆ ಸಲ್ಲಿಸಿದ ಶಿಗೇರು ಇಶಿಬಾ ಅವರ ನೇತೃತ್ವದಲ್ಲಿ ಲಿಬರಲ್ ಡೆಮಾಕ್ರಟಿಕ್ ಪಕ್ಷ ನಿರಂತರ ಸೋಲುಗಳನ್ನು ಕಂಡಿತು. ಈ ಕಾರಣದಿಂದ ಬೇಸತ್ತ ಅವರು ಸಂಪುಟಕ್ಕೆ ಬೆಳಿಗ್ಗೆ ರಾಜೀನಾಮೆ ನೀಡಿ, ತಮ್ಮ ಉತ್ತರಾಧಿಕಾರಿ ಆಯ್ಕೆಗೆ ದಾರಿ ಮಾಡಿಕೊಟ್ಟರು. ಇತರ ಪಾಲುದಾರರ ಜತೆ ಲಿಬರಲ್ ಡೆಮಾಕ್ರಟಿಕ್ ಪಕ್ಷವು ಮೈತ್ರಿ ಒಪ್ಪಂದವನ್ನು ಮಾಡಿಕೊಂಡ ಬಳಿಕ ಸನೇ ತಕೈಚಿ ಅವರ ಆಯ್ಕೆಯಾಗಿದೆ. ಜಪಾನಿನ ಕೆಳಮನೆಯಲ್ಲಿ ತಕೈಚಿ ಅವರು 237 ಮತಗಳನ್ನು ಪಡೆದರೆ, ಅವರ ವಿರುದ್ಧ ಸ್ಪರ್ಧಿಸಿದ್ದ ವಿರೋಧ ಪಕ್ಷ ಕಾನ್‌ಸ್ಟಿಟ್ಯೂಷನಲ್ ಡೆಮಾಕ್ರಟಿಕ್ ಪಕ್ಷದ ಮುಖ್ಯ ಯೋಶಿಕೊಕೊ ನೋಡಾ ಅವರು 149 ಮತಗಳನ್ನು ಪಡೆದರು. ಫಲಿತಾಂಶ ಪ್ರಕಟವಾದ ಕೂಡಲೇ ತಕೈಚಿ ಅವರು ಎದ್ದುನಿಂತು ಎಲ್ಲರಿಗೂ ವಂದಿಸಿದರು.

ಪಟಾಕಿ ನಿಯಮ ಉಲ್ಲಂಘನೆ: 150ಕ್ಕೂ ಅಧಿಕ ಪ್ರಕರಣ ದಾಖಲು

ನವದೆಹಲಿ: ದೀಪಾವಳಿ ಹಬ್ಬದ ಆಚರಣೆ ವೇಳೆ ಪಟಾಕಿ ಸಿಡಿಸುವುದಕ್ಕಾಗಿ ಮತ್ತು ಮಾರಾಟ ಮಾಡುವುದಕ್ಕೆ ಸುಪ್ರೀಂ ಕೋರ್ಟ್ ಆದೇಶಿಸಿದ್ದ ನಿಯಮಗಳನ್ನು ಉಲ್ಲಂಘಿಸಿದ ಆರೋಪದ ಮೇಲೆ 150ಕ್ಕೂ ಅಧಿಕ ಪ್ರಕರಣಗಳನ್ನು ಪೊಲೀಸರು ದಾಖಲಿಸಿದ್ದಾರೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದರು.

ಪಟಾಕಿ ಸಿಡಿಸುವುದಕ್ಕಾಗಿ ಸುಪ್ರೀಂ ಕೋರ್ಟ್ ಆದೇಶಿಸಿದ್ದ ನಿಯಮಗಳನ್ನು ಉಲ್ಲಂಘಿಸಿದ ಆರೋಪದ ಮೇಲೆ 100ಕ್ಕೂ ಅಧಿಕ ಪ್ರಕರಣಗಳು ಹಾಗೂ ಅಕ್ರಮ ಪಟಾಕಿ ಮಾರಾಟದ ಆರೋಪದ ಮೇಲೆ 50ಕ್ಕೂ ಅಧಿಕ ಪ್ರಕರಣಗಳನ್ನು ದಾಖಲಿಸಲಾಗಿದೆ. ದೀಪಾವಳಿ ವೇಳೆ ನವದೆಹಲಿಯಲ್ಲಿ ಪಟಾಕಿ ಸಿಡಿಸಲು ಅ.19 ಮತ್ತು ಅ.20ರಂದು ಬೆಳಿಗ್ಗೆ 6ರಿಂದ 7 ಗಂಟೆ ಹಾಗೂ ರಾತ್ರಿ 8ರಿಂದ 10ರವರೆಗೆ ಸಮಯವನ್ನು ಸುಪ್ರೀಂಕೋರ್ಟ್ ನಿಗದಿಪಡಿಸಿತ್ತು. ಹಸಿರು ಪಟಾಕಿಗಳ ಮಾರಾಟಕ್ಕೆ ಮಾತ್ರ ಅನುಮತಿ ನೀಡಿದೆ. ಪಟಾಕಿಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ನಿಯಮಗಳನ್ನು ಉಲ್ಲಂಘಿಸಿದರೆ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ. ವಸತಿ ಪ್ರದೇಶಗಳಲ್ಲಿ ದೊಡ್ಡಮಟ್ಟದ ನಿಯಮ ಉಲ್ಲಂಘನೆ ತಡೆಯುವ ಉದ್ದೇಶದಿಂದ ಪೊಲೀಸರ ತಂಡಗಳನ್ನು ನಿಯೋಜಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕದನ ವಿರಾಮ ಉಲ್ಲಂಘನೆ ಕುರಿತು ಹಮಾಸ್‌ಗೆ ಟ್ರಂಪ್ ಎಚ್ಚರಿಕೆ

ಟೆಲ್ ಅವೀವ್: ಇತ್ತೀಚೆಗಷ್ಟೇ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿರಾಮ ಹಾಕಿಸಿದ್ದ ಇಸ್ರೇಲ್–ಹಮಾಸ್ ಯುದ್ಧ ಪುನಾರಂಭಗೊಂಡಿದ್ದು, ಇದರಿಂದ ಕೆಂಡಾಮಂಡಲರಾಗಿರುವ ಟ್ರಂಪ್ ಹಮಾಸ್ ಸಂಘಟನೆಯನ್ನು ಬುಡಸಹಿತ ಕಿತ್ತು ಬಿಸಾಡುವ ಎಚ್ಚರಿಕೆ ನೀಡಿದ್ದಾರೆ. ಟ್ರಂಪ್ ನಿಲ್ಲಿಸಿದ್ದ ಇಸ್ರೇಲ್–ಗಾಜಾ ಯುದ್ಧ 9 ದಿನದಲ್ಲೆ ಮತ್ತೆ ಶುರುವಾಗಿದೆ. ಇಸ್ರೇಲ್ ಸೇನೆಯು ಗಾಜಾದ ಹಲವೆಡೆ ದಾಳಿ ನಡೆಸಿದ್ದು, ಈ ವೇಳೆ 11ಕ್ಕೂ ಅಧಿಕ ಪ್ಯಾಲೆಸ್ತೀನಿಯರು ಮೃತಪಟ್ಟಿದ್ದಾರೆ ಎನ್ನಲಾಗಿದೆ. ರಾಫಾ ಪಟ್ಟಣ ಸೇರಿ ದಕ್ಷಿಣ ಗಾಜಾದ ಹಲವೆಡೆ ವೈಮಾನಿಕ ದಾಳಿ ನಡೆಸಲಾಗಿದೆ ಎಂದು ಸ್ವತಃ ಇಸ್ರೇಲ್ ಸೇನೆಯೇ ಹೇಳಿಕೊಂಡಿದೆ. ಇನ್ನು ಹಮಾಸ್ ಉಗ್ರರು ದಾಳಿ ನಡೆಸಿದ್ದರಿಂದಲೇ ತಾನು ಈ ಪ್ರತಿದಾಳಿ ನಡೆಸಿದ್ದಾಗಿ ಇಸ್ರೇಲ್ ಹೇಳಿಕೊಂಡಿದೆ. ಗಾಜಾದ ಹಲವು ಭಾಗಗಳಲ್ಲಿ ಇಸ್ರೇಲ್ ವಾಯು ದಾಳಿ ನಡೆಸಿದ್ದು, ಇದಕ್ಕೂ ಮೊದಲು ಹಮಾಸ್ ದಾಳಿ ನಡೆಸಿತ್ತು ಎಂದು ಇಸ್ರೇಲ್ ಹೇಳಿಕೊಂಡಿದೆ. ಗಾಜಾದ ರಾಫಾ ಪ್ರದೇಶವು ಇನ್ನೂ ಇಸ್ರೇಲ್ ನಿಯಂತ್ರಣದಲ್ಲೇ ಇದ್ದು, ಈ ಪ್ರದೇಶದಲ್ಲಿ ಹಮಾಸ್ ಸಂಘಟನೆಯು ಇಸ್ರೇಲ್ ಸೇನಾ ತುಕಡಿ ಮೇಲೆ ದಾಳಿ ನಡೆಸಿದೆ ಎಂದು ಇಸ್ರೇಲ್ ಆರೋಪಿಸಿದೆ.



ಅಪಾರ್ಟ್‌ಮೆಂಟ್‌ನಲ್ಲಿ ಬೆಂಕಿ ಅವಘಡ; 6 ವರ್ಷದ ಬಾಲಕ ಸೇರಿ ನಾಲ್ವರ ಸಾವು

ಮುಂಬೈ: ಮಹಾರಾಷ್ಟ್ರದ ನವಿ ಮುಂಬೈ ಟೌನ್‌ಶಿಪ್‌ನಲ್ಲಿರುವ ಬಹುಮಹಡಿ ವಸತಿ ಕಟ್ಟಡದಲ್ಲಿ ಸೋಮವಾರ ತಡರಾತ್ರಿ ಬೆಂಕಿ ಅವಘಡ ಸಂಭವಿಸಿದೆ. ಘಟನೆಯಲ್ಲಿ 6 ವರ್ಷದ ಬಾಲಕ ಸೇರಿ ನಾಲ್ವರು ಮೃತಪಟ್ಟಿದ್ದು, 10 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ನವಿ ಮುಂಬೈನ ವಾಶಿಯಲ್ಲಿರುವ ರಹೇಜಾ ಕಾಂಪ್ಲೆಕ್ಸ್‌ನಲ್ಲಿ ಬೆಳಗಿನ ಜಾವ 2 ಗಂಟೆಗೆ ಈ ಅವಘಡ ಸಂಭವಿಸಿದೆ.



ಬೆಂಕಿಯಲ್ಲಿ ಮೂರು ಫ್ಲಾಟ್‌ಗಳು ಸುಟ್ಟುಹೋಗಿವೆ. ಬೆಂಕಿಗೆ ಕಾರಣ ಇನ್ನೂ ತಿಳಿದುಬಂದಿಲ್ಲ ಮತ್ತು ತನಿಖೆ ಆರಂಭಿಸಲಾಗಿದೆ. ಮೃತರನ್ನು ವೈದಿಕ್ ಬಾಲಕೃಷ್ಣ (6), ಪೂಜಾ ರಾಜನ್ (39), ಸುಂದರ್ ಬಾಲಕೃಷ್ಣನ್ (46), ಮತ್ತು ಕಮಲ್ ಹೀರಾಲಾಲ್ ಜೈನ್ (84) ಎಂದು ಗುರುತಿಸಲಾಗಿದೆ. 10 ಮಂದಿ ಗಂಭೀರವಾಗಿ ಗಾಯಗೊಂಡಿದ್ದು, ಅವರನ್ನು ಸಮೀಪದ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ ಎಂದು ಅವರು ಹೇಳಿದ್ದಾರೆ. ಅಗ್ನಿಶಾಮಕ ಸಿಬ್ಬಂದಿ ಮತ್ತು ಪೊಲೀಸರು ಸ್ಥಳಕ್ಕೆ ಧಾವಿಸಿ ಬೆಳಿಗ್ಗೆ 4 ಗಂಟೆ ಹೊತ್ತಿಗೆ ಬೆಂಕಿಯನ್ನು ನಂದಿಸಿದ್ದಾರೆ. ಘಟನೆ ಸಂಬಂಧ ತನಿಖೆ ನಡೆಸಲಾಗುತ್ತಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಮೈಸೂರು ಮಿತ್ರ ಬುಧವಾರ 22 ಅಕ್ಟೋಬರ್ 2025

10 ವರ್ಷವಾದರೂ ಪೂರ್ಣಗೊಳ್ಳದ ಅಂಬೇಡ್ಕರ್ ಭವನ

ದಸಂಸ ಕಾರ್ಯಕರ್ತರ ಪ್ರತಿಭಟನೆ


ದಸಂಸ ಕಾರ್ಯಕರ್ತರು ಕುಶಾಲನಗರದಲ್ಲಿ ಪ್ರತಿಭಟನೆ ನಡೆಸಿದರು.

ಕುಶಾಲನಗರ: ಸಮೀಪದ ಸುಂದರ ನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬಳಿಯಲ್ಲಿರುವ ಅಂಬೇಡ್ಕರ್ ಭವನದ ಕಾಮಗಾರಿ ಹತ್ತು ವರ್ಷ ಕಳೆದರು ಪೂರ್ಣಗೊಂಡಿಲ್ಲ. ಭವನದ ಸುತ್ತ ಗಿಡ ಗಂಟೆ ಬೆಳೆದು, ಅಕ್ರಮ ಚಟುವಟಿಕೆಗಳ ಕೇಂದ್ರ ವಾಗಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಮಂಗಳವಾರ ಪ್ರತಿಭಟನೆ ನಡೆಸಿದರು.

ದಲಿತ ಸಂಘರ್ಷ ಸಮಿತಿ ರಾಜ್ಯ ಸಂಘಟನಾ ಸಂಚಾಲಕ ಕೆ.ಬಿ.ರಾಜು ನೇತೃತ್ವದಲ್ಲಿ ಕಾರ್ಯಕರ್ತರು ಅಂಬೇಡ್ಕರ್ ಭವನದ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿ ಅಧಿಕಾರಿಗಳ ನಿರ್ಲಕ್ಷ್ಯ ಹಾಗೂ ಧೋರಣೆ ಖಂಡಿಸಿ ದಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ರಾಜು ಅವರು ಭವನ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಮಾಡಿದರೂ, ಯಾವುದೇ ಪ್ರಯೋಜನವಾಗಿಲ್ಲ. ಭವನದ ಕಿಟಕಿಯ ಗಾಜುಗಳು ಹೊಡೆದು ಹೋಗಿದ್ದು, ಸುತ್ತಲು ಗಿಡ ಗಂಟೆಗಳು ಬೆಳೆದು, ಅಕ್ರಮ ಚಟುವಟಿಕೆಗಳ ಕೇಂದ್ರವಾಗಿದೆ ಎಂದು ದೂರಿದರು. ಮುಂದಿನ ದಿನಗಳಲ್ಲಿ ಭವನದ ಕಾಮಗಾರಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳದೆ ಹೋದರೆ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಸಂಘಟನೆಯ ಮುಖಂಡರಾದ ರಾಮ್ ಕುಮಾರ್, ಬಿ.ಎಸ್. ರಮೇಶ್, ಎಸ್.ಕೆ.ಸ್ವಾಮಿ, ಟಿ.ಜಿ.ಶಿವಪ್ಪ, ಸುಶೀಲಾ ತ್ಯಾಗರಾಜ್, ಕೆ. ಜೆ.ಸಾವಿತ್ರಮ್ಮ, ಡಿ.ಟಿ.ಸುರೇಶ್‌ಕುಮಾರ್, ಪ್ರೇಮ, ಜೆ.ಆರ್. ವೀಣಾ, ಹದ್ದಯ್ಯ, ಬಿ.ಆರ್. ರಾಜು, ವೆಂಕಟೇಶ್, ಗೋವಿಂದರಾಜು, ತ್ರಿನೇಶ್, ಚಂದ್ರ ಪಾಲ್ಗೊಂಡಿದ್ದರು.

ಶೈಕ್ಷಣಿಕ ಪ್ರಗತಿಗೆ ಪ್ರೋತ್ಸಾಹ ಬೇಕು, ಒತ್ತಡ ಬೇಡ

ಪ್ರತಿಭಾವಂತರಿಗೆ ಪ್ರತಿಭಾ ಪುರಸ್ಕಾರ, ಸಾಧಕರಿಗೆ ಸನ್ಮಾನ



ಮಡಿಕೇರಿ, ಅ.21– ಮಕ್ಕಳ ಶೈಕ್ಷಣಿಕ ಪ್ರಗತಿಗೆ ಪೋಷಕರು ಪ್ರೋತ್ಸಾಹ ನೀಡಬೇಕು. ಆದರೆ ಇಂತಹದ್ದೇ ವಿಷಯವನ್ನು ಆಯ್ಕೆ ಮಾಡಿ ಓದುವಂತೆ ಯಾವುದೇ ಕಾರಣಕ್ಕೂ ಒತ್ತಡ ಹೇರಬಾರದು ಎಂದು ಕೊಡಗು ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಬಾರಿಕೆ ಪಿ.ದಿನೇಶ್ ಕುಮಾರ್ ಸಲಹೆ ನೀಡಿದ್ದಾರೆ.

ಕೊಡಗು ಗೌಡ ವಿದ್ಯಾ ಸಂಘದ ವತಿಯಿಂದ ನಗರದ ಕೊಡಗು ಗೌಡ ಸಮಾಜದಲ್ಲಿ ನಡೆದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಉನ್ನತ ಹುದ್ದೆಯನ್ನು ಅಲಂಕರಿಸಲು ಎಲ್ಲರಿಗೂ ಸಾಮರ್ಥ್ಯ ಇದೆ, ಆದರೆ ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಬೇಕು. ಸ್ವಂತ ಸಾಮರ್ಥ್ಯದ ಮೇಲೆ ನಂಬಿಕೆ ಇದ್ದಾಗ ಮಾತ್ರ ಸಾಧನೆ ಮಾಡಲು ಸಾಧ್ಯ. ಪ್ರತಿಯೊಬ್ಬರು ಉನ್ನತ ಶಿಕ್ಷಣವನ್ನು ಪಡೆದು ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗಿ ಬೆಳೆಯಬೇಕು. ಆ ಭಾವನೆಯನ್ನು ಪೋಷಕರು ಮಕ್ಕಳಲ್ಲಿ ಬೆಳೆಸಬೇಕು ಎಂದು ಕರೆ ನೀಡಿದರು. ಪೋಷಕರು ಮಕ್ಕಳಿಗೆ ಡಾಕ್ಟರ್, ಇಂಜಿನಿಯರ್‌ಗಳಾಗುವಂತೆ ಒತ್ತಡ ಹೇರದೆ ಅವರ ಆಸಕ್ತಿಯ ಕ್ಷೇತ್ರಗಳಿಗೆ ಪ್ರೋತ್ಸಾಹ ನೀಡಬೇಕು. ಒತ್ತಡ ಹೇರುವುದರಿಂದ ಮಕ್ಕಳು ಮಾನಸಿಕವಾಗಿ ಕುಸಿದು ಹೋಗುವ ಸಾಧ್ಯತೆ ಇದೆ ಎಂದು ಎಚ್ಚರಿಸಿದರು.

ವಾಣಿಜ್ಯ ತೆರಿಗೆ ಇಲಾಖೆಯ ನಿವೃತ್ತ ಜಂಟಿ ಆಯುಕ್ತ ನಂಗಾರು ಆರ್.ನಾಣಯ್ಯ ಮಾತನಾಡಿ, ಗ್ರಾಮೀಣ ಜನರ ಸಮಸ್ಯೆಯನ್ನು ಅರಿತು ಸಮುದಾಯ ಬಾಂಧವರ ಶೈಕ್ಷಣಿಕ ಪ್ರಗತಿಯ ದೃಷ್ಟಿಯಿಂದ ಹಿರಿಯರ ಉದಾತ್ತ ಚಿಂತನೆಗಳ ಫಲವಾಗಿ 1908ರಲ್ಲಿ ಕೊಡಗು ವಿದ್ಯಾಸಂಘ ಅಸ್ತಿತ್ವಕ್ಕೆ ಬಂದಿದೆ. ಅಂದಿನಿಂದ ಇಂದಿನವರೆಗೆ ಸಮುದಾಯದ ಅಭಿವೃದ್ಧಿಗಾಗಿ ದುಡಿದ ಅನೇಕ ಸಾಧಕರಿದ್ದಾರೆ, ಜನಾಂಗದ ಪ್ರತಿಷ್ಠೆಗೆ ಪಾತ್ರರಾಗಿದ್ದಾರೆ. ಅವರ ಕೊಡುಗೆಯನ್ನು ಸದಾ ಸ್ಮರಿಸುವಂತಾಗಬೇಕು ಎಂದು ಹೇಳಿದರು. ಕೊಡಗು ವಿದ್ಯಾಸಂಘ ವಿದ್ಯಾರ್ಥಿಗಳನ್ನು ಹಾಗೂ ಸಾಧಕರನ್ನು ಗೌರವಿಸಿ, ಪ್ರೋತ್ಸಾಹಿಸುತ್ತಿರುವುದು ಶ್ಲಾಘನೀಯ. ಜನಾಂಗ ಬಾಂಧವರು ಇಂತಹ ಒಳ್ಳೆಯ ಕಾರ್ಯಕ್ಕೆ ಕೈ ಜೋಡಿಸುವಂತಾಗಬೇಕು ಎಂದು ಹೇಳಿದರು.

ಕಾಫಿ ಬೆಳೆಗಾರರಾದ ತಳೂರು ಯಶೋಧ ಸೋಮಣ್ಣ, ಭಾಗಮಂಡಲ ಕಾವೇರಿ ಪದವಿ ಪೂರ್ವ ಕಾಲೇಜ್‌ನ ನಿವೃತ್ತ ಪ್ರಾಂಶುಪಾಲೆ ಅನೇರ ಜಾನಕಿ ಮೋಹನ್, ನಿವೃತ್ತ ಪ್ರಾಂಶುಪಾಲ ಚೆರಿಯಮನೆ ಬಿ.ರಾಮಚಂದ್ರ, ಚೇರಂಬಾಣೆ ಅರುಣ ಪದವಿ ಪೂರ್ವ ಕಾಲೇಜ್‌ನ ನಿವೃತ್ತ ಪಾಂಶುಪಾಲೆ ನಿಡ್ಯಮಲೆ ದೇವಕಿ, ಕೊಡಗು ಗೌಡ ವಿದ್ಯಾ ಸಂಘದ ಅಧ್ಯಕ್ಷ ಅಂಬೆಕಲ್ಲು ನವೀನ್ ಕುಶಾಲಪ್ಪ ಮಾತನಾಡಿದರು. ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ ಮತ್ತು ಸ್ನಾತಕೋತ್ತರ ಪದವಿ, ಸಿಇಟಿ, ನೀಟ್ ಪರೀಕ್ಷೆಗಳಲ್ಲಿ ಸಾಧನೆ ಮಾಡಿದ 80 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸಲಾಯಿತು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಸೂದನ ಧನ್ಯಶ್ರೀ, ಐ.ಡಿ.ಧೃತಿ ಹಾಗೂ ಪಿ.ಡಿ.ದೀಪ್ತಿ ಅವರನ್ನು ಸನ್ಮಾನಿಸಲಾಯಿತು.

ಕಾರ್ತಿಕ ಮಾಸದಲ್ಲಿ ಶ್ರೀ ಓಂಕಾರೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ

ಮಡಿಕೇರಿ, ಅ.21– ನಗರದ ಶ್ರೀ ಓಂಕಾರೇಶ್ವರ ದೇವಾಲಯ ವತಿಯಿಂದ ಕಾರ್ತಿಕ ಮಾಸದಲ್ಲಿ ವಿವಿಧ ಪೂಜಾ ಕೈಂಕರ್ಯಗಳು ಹಾಗೂ ಉತ್ಸವಾದಿಗಳು ಶಾಸ್ತ್ರೋಕ್ತವಾಗಿ ನಡೆಯಲಿದೆ ಎಂದು ಶ್ರೀ ಓಂಕಾರೇಶ್ವರ ದೇವಾಲಯದ ಅಧ್ಯಕ್ಷರಾದ ಚುಮ್ಮಿ ದೇವಯ್ಯ ಅವರು ತಿಳಿಸಿದ್ದಾರೆ. ಅ.22 ರಂದು ಸಂಜೆ 6 ಗಂಟೆಗೆ ಗೋಪೂಜೆ ನಡೆಯಲಿದೆ. ಅ.22 ರಿಂದ ನ.2 ರವರೆಗೆ 12 ದಿನಗಳ ಕಾಲ ಸಂಜೆ 6.30 ಗಂಟೆಯಿಂದ ತುಳಸಿ ಪೂಜೆ ನಡೆಯಲಿದೆ. ಭಕ್ತಾದಿಗಳು ನ.2 ರಂದು ಬೆಳಗ್ಗೆ 10.30 ಗಂಟೆಗೆ ತುಳಸಿ ಕಲ್ಯೋಕ ಪೂಜೆ ನಡೆಯಲಿದೆ. ಹಾಗೆಯೇ ನ.5 ರಂದು ಸಂಜೆ 6 ಗಂಟೆಗೆ ಮಹಾಪೂಜೆ ನಡೆಯಲಿದೆ. ಜೊತೆಗೆ ಸಂಜೆ 6.30 ಗಂಟೆಗೆ ತೆಪ್ಪೋತ್ಸವ, ದಟ್ಟೋತ್ಸವ ಮತ್ತು ಪಲ್ಲಕ್ಕಿ ಉತ್ಸವ ನಡೆಯಲಿದೆ.

ಕಾರ್ತಿಕ ಹುಣ್ಣಿಮೆಯ ಶ್ರೀ ಓಂಕಾರೇಶ್ವರ ದೇವಾಲಯದಲ್ಲಿ ಮಹಾ ಪೂಜೆ (6 ಗಂಟೆಯ)ಯ ನಂತರ ಸಂಜೆ 6:30 ಗಂಟೆಗೆ ದೇವಸ್ಥಾನದ ವತಿಯಿಂದ ತೆಪ್ಪೋತ್ಸವ ನಡೆಯಲಿದ್ದು, ತೆಪ್ಪೋತ್ಸವಕ್ಕೆ ಸೇವೆ ನೀಡಲು ಬಯಸುವ ಭಕ್ತರು ರೂ.10 ಸಾವಿರ ಸೇವಾ ದರ ಪಾವತಿಸಿ ಸಂಕಲ್ಪ ಮಾಡಿಕೊಳ್ಳಬಹುದು, ಹೆಚ್ಚಿನ ಮಾಹಿತಿಗಾಗಿ 9448899567 ನ್ನು ಸಂಪರ್ಕಿಸಬಹುದು.

ಬ್ಲಾಕ್ ಚೈನ್ ಕೃತಿ ಮಡಿಕೇರಿಯಲ್ಲಿ ಬಿಡುಗಡೆ


ಬೆಂಗಳೂರಿನ ಸತ್ಯ ಪ್ರಕಾಶ್ ಅವರು ರಚಿಸಿರುವ ಬ್ಲಾಕ್ ಚೈನ್ ಇಂಗ್ಲೀಷ್ ಕೃತಿ ಮಡಿಕೇರಿಯಲ್ಲಿ ಬಿಡುಗಡೆಗೊಂಡಿತು. ಮಡಿಕೇರಿ ಹೊರ ವಲಯದ ಕ್ಲಬ್‌ನಲ್ಲಿ ಜಿಲ್ಲೆಯ ಸರಕಾರಿ ಅಭಿಯೋಜಕ ಶ್ರೀಧರನ್ ನಾಯರ್ ಅವರು ಪುಸ್ತಕ ಬಿಡುಗಡೆಗೊಳಿಸಿ ಶುಭ ಹಾರೈಸಿದರು. ಈ ಸಂದರ್ಭ ಪತ್ರಿಕಾ ಭವನದ ಸ್ಥಾಪಕ ಮ್ಯಾನೇಜಿಂಗ್ ಟ್ರಸ್ಟಿ ಟಿ.ಪಿ.ರಮೇಶ್, ಹಿರಿಯ ವಕೀಲರಾದ ರಮೇಶ್ ಚಂದರ್ ನಂಬಿಯಾರ್, ಕೆ.ಎಂ.ರಾಜನ್ ಹಾಗೂ ಕೃತಿ ರಚನೆಕಾರ ಸತ್ಯ ಪ್ರಕಾಶ್ ಉಪಸ್ಥಿತರಿದ್ದರು.

ಸರ್ಕಾರದ ಸಮೀಕ್ಷಾ ಕಾರ್ಯದಲ್ಲಿ ತೊಡಕುಗಳು

ಶಿಕ್ಷಕರ ಸಮಸ್ಯೆ ಬಗ್ಗೆ ಶಾಸಕ ಪೊನ್ನಣ್ಣರಿಗೆ ಮನವಿ ಸಲ್ಲಿಕೆ


ಜಾತಿ ಗಣತಿಯಲ್ಲಿ ಆಗುತ್ತಿರುವ ಸಮಸ್ಯೆಗಳ ಕುರಿತು ಶಿಕ್ಷಕರು ಶಾಸಕ ಪೊನ್ನಣ್ಣ ಅವರಿಗೆ ಮನವಿ ಸಲ್ಲಿಸಿದರು.

ವಿರಾಜಪೇಟೆ, ಅ.21– ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕಾರ್ಯ ಕೈಗೊಂಡಿರುವ ಶಿಕ್ಷಕರು ಎದುರಿಸುತ್ತಿರುವ ಸಮಸ್ಯೆ ಹಾಗೂ ಅದಕ್ಕೆ ಕಾರಣ ಮತ್ತು ಕೈಗೊಳ್ಳಬೇಕಿದ್ದ ಪೂರ್ವ ತಯಾರಿ ಕುರಿತು ಶಿಕ್ಷಕರು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಅವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಮೀಪದ ವಿ.ಬಾಡಗದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪ್ರಭಾರ ಮುಖ್ಯ ಶಿಕ್ಷಕಿ ಕೆ.ಸಿ.ಗೀತಾಂಜಲಿ ಅವರು ಮಾತನಾಡಿ ಶಿಕ್ಷಕರು ಅನುಭವಿಸುತ್ತಿರುವ ಸಮಸ್ಯೆ ಹಾಗೂ ಅದಕ್ಕೆ ಕಾರಣ ಮತ್ತು ಕೈಗೊಳ್ಳಬೇಕಿದ್ದ ಪೂರ್ವ ತಯಾರಿಯ ಕುರಿತು ವಿವರವಾಗಿ ಮಾಹಿತಿ ನೀಡಿದರು.

ನಿವೃತ್ತಿಯ ಅಂಚಿನಲ್ಲಿರುವ, ಅನಾರೋಗ್ಯ ಪೀಡಿತರು ಹಾಗೂ ಅಂಗವಿಕಲ ಶಿಕ್ಷಕರನ್ನು ಕೂಡ ಸಮೀಕ್ಷೆ ಕಾರ್ಯಕ್ಕೆ ನಿಯೋಜಿಸಲಾಗಿದೆ. ಆದರೆ ಶಿಕ್ಷಕರ ಸಂಘಟನೆಯಲ್ಲಿರುವ ಕೆಲವೊಂದು ಯುವ ಶಿಕ್ಷಕರನ್ನು ಸಮೀಕ್ಷೆಯ ಕಾರ್ಯದಿಂದ ಕೈಬಿಡಲಾಗಿದೆ. ಕೆಲವು ಯುವ ಶಿಕ್ಷಕರನ್ನು ಸಮೀಕ್ಷೆಯ ಕಾರ್ಯಕ್ಕೆ ನಿಯೋಜಿಸದೆ ಮೀಸಲು ಪಟ್ಟಿಯಲ್ಲಿ ಇರಿಸಲಾಗಿರುವುದು ಸರಿಯಲ್ಲ. ಸಮೀಕ್ಷೆಯಲ್ಲಿ ಭಾಗವಹಿಸಿರುವ ಶಿಕ್ಷಕರಿಗೆ ಸೂಕ್ತ ತಾಂತ್ರಿಕ ತರಬೇತಿ ನೀಡಿಲ್ಲ. ಶಿಕ್ಷಕರು ಸಮಸ್ಯೆ ಕುರಿತು ಅಧಿಕಾರಿಗಳಿಗೆ ಕರೆ ಮಾಡಿದರೆ ಕೆಲ ಅಧಿಕಾರಿಗಳು ಕರೆ ಸ್ವೀಕರಿಸುತ್ತಿರಲಿಲ್ಲ. ಟಾರ್ಗೆಟ್ ನೀಡಿರುವುದು, ದೂರದ ಪ್ರದೇಶದಲ್ಲಿ ನಿಯೋಜಿಸಿರುವುದು, ಹಬ್ಬದ ದಿನಗಳಲ್ಲು ಬಿಡುವು ನೀಡದಿರುವುದು, ಅವೈಜ್ಞಾನಿಕ ಮ್ಯಾಪಿಂಗ್ ಸಮಸ್ಯೆಯಿಂದಾಗಿ ಶಿಕ್ಷಕರು ಸಮಸ್ಯೆ ಅನುಭವಿಸುವಂತಾಗಿದೆ. ಜೊತೆಗೆ ಸಮಸ್ಯೆಗೆ ಕಾರಣವಾಗಿರುವ ಅಂಶಗಳು ಹಾಗೂ ಪರಿಹಾರದ ಕುರಿತು ಮನವಿಯಲ್ಲಿ ವಿವರಿಸಲಾಗಿದೆ.

ಈ ಸಮಸ್ಯೆಗಳು ಮುಂದಿನ ದಿನಗಳಲ್ಲಿ ಮರುಕಳಿಸದಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನವನ್ನು ತಾವು ನೀಡುವಂತೆ ಮನವಿ ಪತ್ರದಲ್ಲಿ ಮನವಿ ಮಾಡಿಕೊಳ್ಳಲಾಗಿದೆ ಎಂದು ಶಿಕ್ಷಕರು ತಿಳಿಸಿದರು..

ಮನವಿ ಸ್ವೀಕರಿಸಿ ಮಾತನಾಡಿದ ಶಾಸಕ ಎ.ಎಸ್.ಪೊನ್ನಣ್ಣ ಮುಂದಿನ ಗಣತಿ ಅಥವಾ ಸಮೀಕ್ಷೆಯ ಕಾರ್ಯದಲ್ಲಿ ಈ ರೀತಿಯ ಯಾವುದೇ ಸಮಸ್ಯೆಗಳು ಶಿಕ್ಷಕರಿಗೆ ಉಂಟಾಗದಂತೆ ಸಂಬಂಧಿಸಿದ ಇಲಾಖೆಗಳಿಗೆ ಸೂಕ್ತ ನಿರ್ದೇಶನ ನೀಡುವುದಾಗಿ ಭರವಸೆ ನೀಡಿದರು. ಈ ಸಂದರ್ಭ ಸಮೀಕ್ಷಾ ಕಾರ್ಯದಲ್ಲಿ ಭಾಗವಹಿಸಿದ್ದ ವಿವಿಧೆಡೆಯ ಶಿಕ್ಷಕರು ಉಪಸ್ಥಿತರಿದ್ದರು.

ಸುಬ್ರಾಯ ಸಂಪಾಜೆಗೆ ಪಾವಂಜೆ ಪುರಸ್ಕಾರ

ನಾಪೋಕ್ಲು: ಕರ್ನಾಟಕ ಗಮಕ ಕಲಾ ಪರಿಷತ್ತು ಬೆಂಗಳೂರು ಮತ್ತು ದ.ಕ. ಜಿಲ್ಲಾ ಘಟಕದ ವತಿಯಿಂದ ಸುಬ್ರಾಯ ಸಂಪಾಜೆ ಅವರಿಗೆ ಪುತ್ತೂರಿನಲ್ಲಿ ಗಮಕ ಪುರಸ್ಕಾರ ನೀಡಿ ಗೌರವಿಸಲಾಯಿತು.

ಪುತ್ತೂರಿನಲ್ಲಿ ನಡೆದ 10ನೇ ದ.ಕ. ಜಿಲ್ಲಾ ಗಮಕ ಕಲಾ ಸಮ್ಮೇಳನದಲ್ಲಿ ಮಡಿಕೇರಿ ಆಕಾಶವಾಣಿ ಕೇಂದ್ರದ ನಿವೃತ್ತ ಉದ್ಘೋಷಕ ಸುಬ್ರಾಯ ಸಂಪಾಜೆ ಅವರನ್ನು ಪಾವಂಜೆ ಲಕ್ಷ್ಮೀನಾರ್ಣಪ್ಪಯ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕನ್ನಡ ಕಾವ್ಯಗಳ ಆಯ್ದ ಭಾಗಗಳನ್ನು ಕೊಡಗಿನ ವಿವಿಧ ಧಾರ್ಮಿಕ ಕೇಂದ್ರಗಳಲ್ಲಿ, ಶಿಕ್ಷಣ ಸಂಸ್ಥೆಗಳಲ್ಲಿ ಹಾಗೂ ಭಗವದ್ಗೀತೆಯನ್ನು ಆಕಾಶವಾಣಿಯ ಪ್ರಸಾರದಲ್ಲಿ ಗಮಕ ರೂಪದಲ್ಲಿ ಪ್ರಸ್ತುತಪಡಿಸಿದ ವಿಶೇಷ ಸಾಧನೆಗಾಗಿ ಕೊಡಗಿನ ಏಕೈಕ ಗಮಕಿ ಸಂಪಾಜೆ ಅವರಿಗೆ ಈ ವಿಶೇಷ ಪುರಸ್ಕಾರ ನೀಡಿ ಗೌರವಿಸಲಾಯಿತು. ಖ್ಯಾತ ಗಮಕಿ ಮುಳಿಯ ಶಂಕರ ಭಟ್ಟ ಅವರ ಅಧ್ಯಕ್ಷತೆಯಲ್ಲಿ ಆಯೋಜಿಸಿದ್ದ ಸಭಾ ಕಾರ್ಯಕ್ರಮದಲ್ಲಿ ಎಡನೀರು ಮಠಾಧೀಶರಾದ ಶ್ರೀ ಸಚ್ಚಿದಾನಂದ ಸ್ವಾಮೀಜಿಯವರು ದಿವ್ಯ ಸಾನ್ನಿಧ್ಯ ವಹಿಸಿದ್ದರು.



ಕರ್ನಾಟಕ ಗಮಕ ಕಲಾ ಪರಿಷತ್, ಬೆಂಗಳೂರು ಮತ್ತು ದ.ಕ. ಜಿಲ್ಲಾ ಘಟಕದ ವತಿಯಿಂದ ಮಡಿಕೇರಿ ಆಕಾಶವಾಣಿ ಕೇಂದ್ರದ ನಿವೃತ್ತ ಉದ್ಘೋಷಕ ಸುಬ್ರಾಯ ಸಂಪಾಜೆ ಅವರಿಗೆ ಪುತ್ತೂರಿನಲ್ಲಿ ಪಾವಂಜೆ ಪುರಸ್ಕಾರ ಗೌರವ ಸನ್ಮಾನ.

ಶಾಂತಿ ನೆಲೆಸಲು ಪೊಲೀಸರ ಪಾತ್ರ ಪ್ರಮುಖ


ಪೊಲೀಸ್ ಹುತಾತ್ಮರ ಸ್ಮಾರಕಕ್ಕೆ ಜಿಲ್ಲಾ ಪ್ರಧಾನ ಸೆಷೆನ್ಸ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಜಿ. ಪ್ರಭಾವತಿ ಅವರು ಪುಷ್ಪಗುಚ್ಛವಿರಿಸಿ ಗೌರವ ಸಲ್ಲಿಸಿದರು.

ಚಾಮರಾಜನಗರ, ಅ.21– ಸಾರ್ವಜನಿಕ ಆಸ್ತಿ–ಪಾಸ್ತಿ ಸುರಕ್ಷತೆಯ ಕರ್ತವ್ಯದ ಸಂದರ್ಭದಲ್ಲಿ ಹುತಾತ್ಮರಾದ ಪೊಲೀಸರ ಸ್ಮಾರಕಕ್ಕೆ ಪುಷ್ಪಗುಚ್ಛ ಸಮರ್ಪಣೆ ಮೂಲಕ ನಗರದಲ್ಲಿಂದು ಪೊಲೀಸ್ ಹುತಾತ್ಮರ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಚಾಮರಾಜನಗರ ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ನಗರದ ಜಿಲ್ಲಾ ಸಶಸ್ತ್ರ ಮೀಸಲು ಪಡೆ ಕವಾಯತು ಮೈದಾನದಲ್ಲಿ ನೂತನವಾಗಿ ನಿರ್ಮಿಸಿರುವ ರಾಜ್ಯದಲ್ಲಿಯೇ ಅತೀ ಎತ್ತರದ (27ಅಡಿ) ಪೊಲೀಸ್ ಹುತಾತ್ಮರ ಸ್ಮಾರಕಕ್ಕೆ ಜಿಲ್ಲಾ ಪ್ರಧಾನ ಸೆಷೆನ್ಸ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಜಿ.ಪ್ರಭಾವತಿ ಅವರು ಪುಷ್ಪಗುಚ್ಛವಿರಿಸಿ ಗೌರವ ಸಲ್ಲಿಸಿದರು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು ಇದೊಂದು ಮಹತ್ವದ ದಿನವಾಗಿದೆ. ಕರ್ತವ್ಯದ ಸಂದರ್ಭದಲ್ಲಿ ಹುತಾತ್ಮರಾಗಿ, ಕುಟುಂಬದಿಂದ ದೂರವಾದ ಸ್ಮರಣೀಯ ದಿನವೂ ಆಗಿದೆ. ಕಾಡಿನ ರಕ್ಷಣೆ ಅರಣ್ಯ ಪಾಲಕರ ಕರ್ತವ್ಯವಾದರೆ, ನಾಡಿನ ಜನರ ರಕ್ಷಣೆಗೆ ಟೊಂಕಕಟ್ಟಿ ನಿಲ್ಲುವ ಪೊಲೀಸರ ಸೇವಾ ಕಾರ್ಯ ಅವಿಸ್ಮರಣೀಯ ಹಾಗೂ ಶ್ಲಾಘನೀಯವಾದದ್ದು. ಸಮಾಜದಲ್ಲಿ ಜನರು ಶಾಂತಿ, ಸಾಮರಸ್ಯ ಹಾಗೂ ಸಹಬಾಳ್ವೆ ನಡೆಸುವಲ್ಲಿ ಪೊಲೀಸರ ಪಾತ್ರ ಪ್ರಮುಖವಾಗಿದೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ.ಕವಿತಾ ಮಾತನಾಡಿ, ಈ ಬಾರಿ ಕರ್ತವ್ಯದ ಸಂದರ್ಭದಲ್ಲಿ ಕರ್ನಾಟಕದ 8 ಮಂದಿ ಪೊಲೀಸರು ಸೇರಿದಂತೆ ದೇಶದಲ್ಲಿ 191 ಮಂದಿ ಪೊಲೀಸರು ಹುತಾತ್ಮರಾಗಿದ್ದಾರೆ. ಅವರೆಲ್ಲರಿಗೂ ಗೌರವ ಸಲ್ಲಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಈ ಬಾರಿ ಜಿಲ್ಲೆಯಲ್ಲಿ ಹುತಾತ್ಮರ ದಿನವನ್ನು ವಿಶೇಷವಾಗಿ ಆಚರಿಸುವ ಸಲುವಾಗಿ ರಾಜ್ಯದಲ್ಲಿಯೇ ಅತಿ ಎತ್ತರದ (ದೇಶದಲ್ಲಿ 2ನೇಯದು) ಪೊಲೀಸ್ ಸ್ಮಾರಕವನ್ನು ಚಾಮರಾಜನಗರದ ಜಿಲ್ಲಾ ಸಶಸ್ತ್ರ ಮೀಸಲು ಪಡೆ ಕವಾಯತು ಮೈದಾನದಲ್ಲಿ ಖ್ಯಾತ ಕ್ರಿಕೆಟಿಗ ಮುತ್ತಯ್ಯ ಮುರಳೀಧರನ್ ಒಡೆತನದ ಕ್ಯಾಂಪಾ ಕೋಲಾ ಬೇವರೇಜ್ ಕಂಪನಿ ನೆರವಿನೊಂದಿಗೆ ನೂತನವಾಗಿ ನಿರ್ಮಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ಅವರು ಹೇಳಿದರು.

ಆರಂಭದಲ್ಲಿ ಪೊಲೀಸ್ ತುಕಡಿಗಳಿಂದ ಜಿಲ್ಲಾ ಪ್ರಧಾನ ಸೆಷೆನ್ಸ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಜಿ. ಪ್ರಭಾವತಿ ಅವರು ಗೌರವ ವಂದನೆ ಸ್ವೀಕರಿಸಿದರು.

ಮಲೈ ಮಹದೇಶ್ವರ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕ್ಷೇತ್ರ ನಿರ್ದೇಶಕರಾದ ಬಿ. ಭಾಸ್ಕರ್, ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಂ.ಎಸ್. ಶಶಿಧರ್, ಪೊಲೀಸ್ ಅಧಿಕಾರಿಗಳು, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಹುತಾತ್ಮರ ಸ್ಮರಣಾರ್ಥ ಕಾರ್ಯಕ್ರಮದಲ್ಲಿ ಗಾಳಿಯಲ್ಲಿ 3 ಸುತ್ತು ಗುಂಡು ಹಾರಿಸಲಾಯಿತು. 2 ನಿಮಿಷಗಳ ಕಾಲ ಮೌನ ಆಚರಿಸಲಾಯಿತು. ಬಳಿಕ ಪೊಲೀಸ್ ಬ್ಯಾಂಡ್‌ನಿಂದ ಶತಶತಮಾನಗಳ ಚಿರನೂತನ 'ಅಬಾಯ್ಡ್ ವಿತ್ ಮಿ' ಗೀತೆ ನುಡಿಸಲಾಯಿತು.

ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನದ ಕಲ್ಯಾಣಿಯಲ್ಲಿ ದೀಪೋತ್ಸವ


ಚಾಮರಾಜನಗರ ತಾಲೂಕಿನ ವೆಂಕಟಯ್ಯನಛತ್ರ ಗ್ರಾಮದ ಶ್ರೀ ವಾಯುಪುತ್ರ ಸೇನಾ ಸಮಿತಿ ವತಿಯಿಂದ ಗ್ರಾಮದ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನದ ಕಲ್ಯಾಣಿಯಲ್ಲಿ ಪ್ರತಿ ವರ್ಷದಂತೆ ಈ ವರ್ಷವು ದೀಪಾವಳಿ ಹಬ್ಬದ ಪ್ರಯುಕ್ತ ಇಂದು ದೀಪೋತ್ಸವ ಕಾರ್ಯಕ್ರಮ ನಡೆಯಿತು.

ಗುಂಡ್ಲುಪೇಟೆ ಬಳಿ ಹುಲಿ ಸೆರೆಗೆ ಕೂಂಬಿಂಗ್


ಸಾಕಾನೆ ಪಾರ್ಥಸಾರಥಿಯೊಂದಿಗೆ ಕೂಂಬಿಂಗ್ ಕಾರ್ಯಾಚರಣೆ ನಡೆಸುತ್ತಿರುವುದು.

ಗುಂಡ್ಲುಪೇಟೆ, ಅ.21– ತಾಲೂಕಿನ ಅಗತಗೌಡನಹಳ್ಳಿ ಹಾಗೂ ಇಂಗಲವಾಡಿ ಗ್ರಾಮಗಳಲ್ಲಿ ಜಾನುವಾರುಗಳನ್ನು ಕೊಂದಿದ್ದ ಹುಲಿ ಸೆರೆಗೆ ಅರಣ್ಯ ಇಲಾಖೆ ಮಂಗಳವಾರ ಕೂಂಬಿಂಗ್ ನಡೆಸಿತು.

ಬಂಡೀಪುರ ಹುಲಿ ಯೋಜನೆಯ ಬಫರ್ ವಲಯದ ವ್ಯಾಪ್ತಿಯ ಸುತ್ತಮುತ್ತ ಹುಲಿ ಹಾದು ಹೋಗಿರುವುದು ಕಂಡು ಬಂದಿತ್ತು. ಇತ್ತೀಚಿಗೆ ಹಕ್ಕಲಪುರ, ಇಂಗಲವಾಡಿ, ಮಂಚಹಳ್ಳಿ ಹಾಗೂ ಅಗತಗೌಡನಹಳ್ಳಿ ಗ್ರಾಮಗಳಲ್ಲಿ ಹುಲಿ ಮತ್ತು ಚಿರತೆಗಳು ದಾಳಿ ನಡೆಸಿ ಜಾನುವಾರುಗಳನ್ನು ಕೊಂದುಹಾಕಿದ್ದ ಹಿನ್ನೆಲೆಯಲ್ಲಿ ಹುಲಿಯ ಹೆಜ್ಜೆಯ ಜಾಡುಗಳನ್ನು ಆಧರಿಸಿ ಅರಣ್ಯ ಇಲಾಖೆ ಸಾಕಾನೆ ಪಾರ್ಥಸಾರಥಿ ನೆರವಿನಿಂದ ಕೂಂಬಿಂಗ್ ನಡೆಸಿತು.

ಹುಲಿಯ ಪತ್ತೆಗೆ ಹಗಲಿನಲ್ಲಿ ಡ್ರೋಣ್ ಕ್ಯಾಮೆರಾ ಹಾಗೂ ರಾತ್ರಿ ವೇಳೆ ಥರ್ಮಲ್ ಡ್ರೋಣ್ ಕ್ಯಾಮೆರಾ ವನ್ನು ಹಾರಿಸಿದರೂ ಯಾವುದೇ ಉಪಯೋಗವಾಗಿಲ್ಲ. ಇತ್ತೀಚೆಗೆ ಮಳೆ ಬಿದ್ದಿರುವುದರಿಂದ ಜಮೀನುಗಳಲ್ಲಿ ವನ್ಯಜೀವಿಗಳ ಹೆಜ್ಜೆಗುರುತುಗಳು ಕಾಣಿಸುತ್ತಿವೆ. ಇದರಿಂದ ರೈತರು ಭೀತಿಗೊಳಗಾಗುತ್ತಿದ್ದಾರೆ. ಅರಣ್ಯ ಇಲಾಖೆ ಮತ್ತು ಅರಣ್ಯಾಧಿಕಾರಿಗಳು ಮತ್ತಷ್ಟು ಎಚ್ಚೆತ್ತು ಕೊಂಡು ವನ್ಯಜೀವಿಗಳ ಉಪಟಳ ತಪ್ಪಿಸಬೇಕಾಗಿದೆ ಎಂದು ರೈತರು ಆಗ್ರಹಿಸಿದ್ದಾರೆ.

ಮತಗಳ್ಳತನದ ವಿರುದ್ಧ ಸಹಿ ಸಂಗ್ರಹ ಅಭಿಯಾನ


ಸಹಿ ಸಂಗ್ರಹ ಅಭಿಯಾನಕ್ಕೆ ಶಾಸಕ ಎ.ಆರ್.ಕೃಷ್ಣಮೂರ್ತಿ ಚಾಲನೆ ನೀಡಿದರು.

ಕೊಳ್ಳೇಗಾಲ, ಅ.21– ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಮತಗಳ್ಳತನ ವಿರುದ್ಧ ರಾಹುಲ್ ಗಾಂಧಿಯವರು ನಡೆಸುತ್ತಿರುವ ಜನಜಾಗೃತಿ ಹೋರಾಟಕ್ಕೆ ಬೆಂಬಲವಾಗಿ ಸಹಿ ಸಂಗ್ರಹ ಅಭಿಯಾನ ಮಂಗಳವಾರ ನಡೆಯಿತು.

ಪಟ್ಟಣದ ವೆಂಕಟೇಶ್ವರ ಮಹಲ್‌ನಲ್ಲಿ ಮಂಗಳವಾರ ನಡೆದ ಕಾರ್ಯಕ್ರಮವನ್ನು ಶಾಸಕ ಎ.ಆರ್.ಕೃಷ್ಣಮೂರ್ತಿ ಅವರು ಉದ್ಘಾಟಿಸಿ ಮಾತನಾಡಿದರು.

ಮತದಾರರ ಎಲೆಕ್ಟ್ರಾನಿಕ್ ಮಿಷನ್‌ನಲ್ಲಿ ಒಂದು ಮತದಲ್ಲಿ ನಾನು ಸೋಲು ಅನುಭವಿಸಿದೆ. ಯಾವುದೆ ರಾಜ್ಯದಲ್ಲಿ ಪಾರದರ್ಶಕ ಚುನಾವಣೆಗೆ ಮತದಾರರ ಪಟ್ಟಿಯೂ ಸಹಾ ಪಾರದರ್ಶಕವಾಗಿ ಇರಲೇಬೇಕಿದೆ ಎಂದರು

ಕಾರ್ಯಕ್ರಮದಲ್ಲಿ ಕೆಪಿಸಿಸಿ ರಾಜ್ಯ ಉಪಾಧ್ಯಕ್ಷರು, ಮಾಜಿ ಶಾಸಕ ಜಿ.ಎನ್. ನಂಜುಂಡಸ್ವಾಮಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಮರಿಸ್ವಾಮಿ, ಚಾಮುಲ್ ಅಧ್ಯಕ್ಷ ನಂಜುಂಡಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ಕಾರ್ಯದರ್ಶಿ ಬಸ್ತೀಪುರ ರವಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ರಾಜೇಂದ್ರ, ಯುವ ಕಾಂಗ್ರೆಸ್ ಅಧ್ಯಕ್ಷ ಯೋಗೇಂದ್ರ, ನಗರಸಭೆ ಅಧ್ಯಕ್ಷ ರೇಖಾ, ಸ್ಥಾಯಿ ಸಮಿತಿ ಅಧ್ಯಕ್ಷ ಸುರೇಶ್, ಲೋಕೇಶ್, ಸ್ವಾಮಿ ನಂಜಪ್ಪ, ಬೀಮನಗರ ರಮೇಶ್, ಬಸ್ತಿಪುರ ಶಾಂತರಾಜು, ಚೇತನ್ ದೊರೈರಾದು, ಸಿದ್ದಾರ್ಥ, ನಗರಸಭೆ ಸದಸ್ಯ ನಾಗೇಂದ್ರ, ಮಾಜಿ ಉಪಾಧ್ಯಕ್ಷ ಹರ್ಷ ಇನ್ನಿತರಿದ್ದರು.

ರಮೇಶ್ ಕತ್ತಿ ಬಂಧನಕ್ಕೆ ಆಗ್ರಹಿಸಿ ಪ್ರತಿಭಟನೆ


ರಮೇಶ್ ಕತ್ತಿ ಬಂಧನಕ್ಕೆ ಆಗ್ರಹಿಸಿ ವಾಲ್ಮೀಕಿ ಹಿತರಕ್ಷಣಾ ಸಮಿತಿಯ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಅ.21– ವಾಲ್ಮೀಕಿ ಸಮಾಜದ ಮುಖಂಡರನ್ನು ಸಾರ್ವಜನಿಕವಾಗಿ ನಿಂದಿಸಿರುವ ಮಾಜಿ ಸಂಸದ ರಮೇಶ್ ಕತ್ತಿ ಅವರ ವಿರುದ್ಧ ಜಾತಿ ನಿಂದನೆ ಪ್ರಕರಣ ತಕ್ಷಣವೇ ಬಂಧಿಸಬೇಕೆಂದು ಆಗ್ರಹಿಸಿ ನಗರದಲ್ಲಿ ವಾಲ್ಮೀಕಿ ಹಿತರಕ್ಷಣಾ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಜಿಲ್ಲಾಡಳಿತ ಭವನದ ಮುಂಭಾಗ ಜಮಾಯಿಸಿದ ವಾಲ್ಮೀಕಿ ಹಿತರಕ್ಷಣಾ ಸಮಿತಿಯ ಪದಾಧಿಕಾರಿಗಳು ಮುಖಂಡರು ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿಗೆ ಪುಷ್ಪಮಾಲೆ ಹಾಕಿ ನಂತರ ಜಿಲ್ಲಾ ಡಳಿತ ಭವನದ ಮುಂದೆ ಪ್ರತಿಭಟನಾ ಧರಣಿ ಕುಳಿತರು. ಸ್ಥಳಕ್ಕಾಗಮಿಸಿ ಅಪರ ಜಿಲ್ಲಾಧಿಕಾರಿ ಜವರೇಗೌಡರಿಗೆ ಮನವಿ ಸಲ್ಲಿಸಿದರು.

ಇದಕ್ಕೂ ಮುನ್ನಾ ಮಾತನಾಡಿದ ಜಿ.ಪಂ. ಮಾಜಿ ಸದಸ್ಯ ಅರಕಲವಾಡಿ ಸೋಮನಾಯಕ, ಬೆಳಗಾವಿ ಡಿಸಿಸಿ ಬ್ಯಾಂಕಿನ ಚುನಾವಣಾ ಮತದಾನ ಸಂದರ್ಭದಲ್ಲಿ ಚಿಕ್ಕೋಡಿ ಮಾಜಿ ಸಂಸದ ಬೆಲ್ಲದಬಾಗವಾಡಿಯ ರಮೇಶ ಕತ್ತಿ ತನ್ನ ಬೆಂಬಲಿಗರೊಂದಿಗೆ ಮಾತನಾಡುತ್ತಾ ಬೇಡರ ಸಮುದಾಯದ ಬಗ್ಗೆ ಕೆಟ್ಟದಾಗಿ ಮಾತನಾಡಿದ್ದು, ಸಾರ್ವಜನಿಕವಾಗಿ ವಾಲ್ಮೀಕಿ ಬೇಡನಾಯಕ ಜನಾಂಗವನ್ನು ಅವ್ಯಾಚ ಶಬ್ದಗಳಿಂದ ನಿಂದಿಸಿರುವುದು ಅಕ್ಷಮ್ಯ ಅಪರಾಧವಾಗಿದೆ. ಈ ಕೂಡಲೇ ಬೆಳಗಾವಿ ಜಿಲ್ಲಾಡಳಿತ ರಮೇಶ್ ಕತ್ತಿ ವಿರುದ್ದ ಜಾತಿ ನಿಂದನೆ ಪ್ರಕರಣ ದಾಖಲು ಮಾಡಿ ಬಂಧಿಸಬೇಕು ಎಂದು ಒತ್ತಾಯಿಸಿದರು.

ವಾಲ್ಮೀಕಿ ಸಮಾಜಕ್ಕೆ ಅವಮಾನಿಸಿದ್ದು ಇದರ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇದರಿಂದ ರಾಜ್ಯಾದ್ಯಂತ 75 ಲಕ್ಷ ವಾಲ್ಮೀಕಿ ಸಮುದಾಯ ಜನರಿಗೆ ನೋವು ಉಂಟಾಗಿದೆ ಹಾಗೂ ನಮ್ಮ ಭಾವನೆಗಳಿಗೆ ಧಕ್ಕೆಯಾಗಿದೆ ಕೂಡಲೇ ಈತನನ್ನು ಬಂಧಿಸಬೇಕು ಎಂದು ಒತ್ತಾಯಿಸಿದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಹೊಂಗನೂರು ಚಂದ್ರು ಮಾತನಾಡಿ, ರಮೇಶ್ ಕತ್ತಿ ದರ್ಪದಿಂದ ಮಾತನಾಡಿದ್ದಾರೆ. ವಾಲ್ಮೀಕಿ ಜನಾಂಗದ ಬಗ್ಗೆ ಹಗುರವಾಗಿ ಮಾತನಾಡುವ ಜೊತೆಗೆ ಸಮುದಾಯವನ್ನು ನಿಂದನೆ ಮಾಡಿರುವುದು ಸರಿಯಲ್ಲ ಸರ್ಕಾರ ಹಾಗೂ ಪೊಲೀಸ್ ಇಲಾಖೆಯ ಕೂಡಲೇ ರಮೇಶ್ ಕತ್ತಿಯನ್ನು ಬಂಧಿಸಿ, ಜಾತಿ ನಿಂದನೆ ಪ್ರಕರಣ ದಾಖಲು ಮಾಡಬೇಕು. ಇಂದು ನಾವೆಲ್ಲರು ಸಾಂಕೇತಿಕವಾಗಿ ಪ್ರತಿಭಟನೆ ಮಾಡುತ್ತಿದ್ದು, ಕ್ರಮ ಕೈಗೊಳ್ಳಲು ಮೀನಾಮೇಷ ಎನಿಸಿದರೆ, ರಾಜ್ಯಾದ್ಯಂತ ವಾಲ್ಮೀಕಿ ಸಮಾಜ ಉಗ್ರ ಹೋರಾಟ ರೂಪಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ವಾಲ್ಮೀಕಿ ಹಿತರಕ್ಷಣಾ ಸಮಿತಿಯ ಕೃಷ್ಣನಾಯಕ, ಜಿ.ಪಂ. ಮಾಜಿ ಸದಸ್ಯ ರಮೇಶ್, ಸಾಗಡೆ ನಂಜುಂಡನಾಯಕ, ಕೆಂಪನಪುರ ಗ್ರಾ.ಪಂ.ಮಾಜಿ ಅಧ್ಯಕ್ಷ ಆರ್.ಮಾದೇಶ್, ಅರಕಲವಾಡಿ ಸೋಮೇಶ್, ಕಂಡಕ್ಟರ್ ಚಾ.ಸಿ. ಸೋಮನಾಯಕ, ಕಿಲಗೆರೆ ಜಯರಾಜು, ಸಿದ್ದರಾಜು, ರವಿಕುಮಾರ್, ತಿರುಪತಿ ನಾಯಕ, ರಾಚನಾಯಕ, ಎಚ್.ಎಂ.ಶಿವಣ್ಣ, ಅಮಚವಾಡಿ ರಾಜು, ಎನ್.ನಾಗೇಶ್ ಇದ್ದರು.

ಮೈಸೂರು ಮಿತ್ರ

ಅವಧಿಗೂ ಮುನ್ನ ಜನಿಸಿದ ಮಗುವಿನ ಅನ್ನ ನಾಳ ಜೋಡಣೆ

ಚೆಲುವಾಂಬ ಆಸ್ಪತ್ರೆ ಡಾ. ಅರವಿಂದ್‌ರಿಂದ ಯಶಸ್ವಿ ಶಸ್ತ್ರಚಿಕಿತ್ಸೆ

ಮೈಸೂರು, ಅ.21(ಎಂಕೆ)– ಅನ್ನನಾಳ ಮತ್ತು ಶ್ವಾಸನಾಳದ ಅಂಗಾಂಶ ಸರಿಯಾಗಿ ಬೆಳವಣಿಗೆಯಾಗದೆ ಫಿಸ್ಟುಲ್ಲಾ ಕಾಯಿಲೆ (esophageal atresia with tracheoesophageal fistula)ಯಿಂದ ಬಳಲುತ್ತಿದ್ದ 7 ತಿಂಗಳಿಗೆ ಜನಿಸಿದ 1.600 ಕೆ.ಜಿ(1 ಕೆ.ಜಿ 600 ಗ್ರಾಂ) ತೂಕದ ಮಗುವಿಗೆ ಚೆಲುವಾಂಬ ಆಸ್ಪತ್ರೆಯ ಮಕ್ಕಳ ಶಸ್ತ್ರ ಚಿಕಿತ್ಸಕ ಡಾ. ಅರವಿಂದ್ ಯಶಸ್ವಿ ಶಸ್ತ್ರ ಚಿಕಿತ್ಸೆ ನೆರವೇರಿಸಿದ್ದಾರೆ.



ಚಾಮರಾಜನಗರದ ಕುಮಾರ್ ಮತ್ತು ನಾಗಲಕ್ಷ್ಮಿ ದಂಪತಿಗೆ ಅ.14 ರಂದು ಅಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ಸಿಸೇರಿಯನ್ ಮೂಲಕ ಜನಿಸಿದ್ದ ಮಗುವನ್ನು ಅ.15 ರಂದು ಚೆಲುವಾಂಬ ಆಸ್ಪತ್ರೆಗೆ ದಾಖಲಿಸಿದ್ದು, ಅ.16ರಂದು ಸತತ 4 ಗಂಟೆಗಳ ಕಾಲ ಶಸ್ತ್ರ ಚಿಕಿತ್ಸೆ (thoracotomy and primary repair esophageal atresia)ನಡೆಸಿ, ಅನ್ನನಾಳವನ್ನು ಜೋಡಣೆ ಮಾಡಲಾಗಿದೆ.

ಮಗುವಿನ ತಾಯಿ ಎದೆಹಾಲು ಕುಡಿಸಿದಾಗ ಅನ್ನನಾಳದ ಮೂಲಕ ಜಠರ (ಹೊಟ್ಟೆಗೆ) ಸೇರದೆ ಶ್ವಾಸನಾಳಕ್ಕೆ ಹೋಗಿ ಉಸಿರಾಟದ ತೊಂದರೆಯಾಗುತ್ತಿದೆ ಎಂದು ಮಗುವನ್ನು ಆಸ್ಪತ್ರೆಗೆ ಕರೆತಂದಿದ್ದು, ಪರೀಕ್ಷೆ ಮಾಡಿ ನೋಡಿದಾಗ ಅನ್ನನಾಳ ಸರಿಯಾಗಿ ಬೆಳವಣಿಗೆಯಾಗಿಲ್ಲ ಎಂಬುದು ಗೊತ್ತಾಗಿದೆ.

7 ತಿಂಗಳಿಗೆ ಜನಿಸಿದ ಮಗುವಾಗಿದ್ದರಿಂದ ಅನ್ನನಾಳ ಸರಿಯಾಗಿ ಬೆಳವಣಿಗೆ ಆಗಿರಲಿಲ್ಲ. ಹಾಗಾಗಿ ಬಲ ಭುಜದ ಕಂಕುಳ ಮಧ್ಯದಲ್ಲಿ ಓಪನ್ ಮಾಡಿ, ಬೆನ್ನಿನ ಭಾಗದಲ್ಲಿ ಸೇರಿ ಕೊಂಡಿದ್ದ ಅನ್ನನಾಳವನ್ನು ಅಲ್ಲಿಂದ ಬಿಡಿಸಿ, ಪುನರ್ ಜೋಡಣೆ ಮಾಡಲಾಗಿದೆ ಈ ಮೂಲಕ ಹಸುಗೂಸು ಬದುಕುಳಿಯುವಂತೆ ಮಾಡಲಾಗಿದೆ.


ಚೇತರಿಕೆ: ಶಸ್ತ್ರ ಚಿಕಿತ್ಸೆ ನಂತರ ಮಗುವನ್ನು ಐಸಿಯುನಲ್ಲಿಟ್ಟು ಚಿಕಿತ್ಸೆ ಮುಂದುವರೆಸಲಾಗಿದೆ. ಹಾಲು ನೀಡಲು ಸಾಧ್ಯವಿಲ್ಲದಿರುವುದರಿಂದ ಗ್ಲೂಕೋಸ್ ನೀಡಲಾಗುತ್ತಿದೆ. ಸದ್ಯಕ್ಕೆ ಮಗುವಿನ ಆರೋಗ್ಯದಲ್ಲಿ ಚೇತರಿಕೆ ಕಂಡು ಬಂದಿದೆ ಎಂದು ಡಾ.ಅರವಿಂದ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮಗು ಕೇವಲ 1.6 ಕೆಜಿ ಇದ್ದಿದ್ದರಿಂದ ಮೈಕ್ರೋಸ್ಕೋಪ್ ಬಳಸಿ ಸತತವಾಗಿ ನಾಲ್ಕು ಗಂಟೆಗಳ ಕಾಲ ಶಸ್ತ್ರ ಚಿಕಿತ್ಸೆ ನಡೆಸಲಾಯಿತು. ಹುಟ್ಟಿದ ಮಕ್ಕಳಲ್ಲಿ ಕಾಣಿಸಿಕೊಳ್ಳುವ ಗಂಭೀರ ಕಾಯಿಲೆ ಇದಾಗಿದೆ. ಇದೇ ಶಸ್ತ್ರ ಚಿಕಿತ್ಸೆಯನ್ನು ಖಾಸಗಿ ಆಸ್ಪತ್ರೆಯಲ್ಲಿ ಮಾಡಿದ್ದರೆ ಸುಮಾರು 8 ರಿಂದ 10 ಲಕ್ಷ ಖರ್ಚಾಗುತ್ತಿತ್ತು. ಚೆಲುವಾಂಬ ಆಸ್ಪತ್ರೆಯಲ್ಲಿ ಎಲ್ಲಾ ರೀತಿಯ ಸೌಲಭ್ಯವಿದ್ದು, ಸಾರ್ವಜನಿಕರು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಸಾಂಪ್ರದಾಯಿಕ ದೀಪ ವ್ಯವಸ್ಥೆ ಎಲ್‌ಇಡಿಗೆ ಪರಿವರ್ತನೆ

ಮೈಸೂರು ನಗರ ಪಾಲಿಕೆಗೆ ಮಾಸಿಕ 1.50 ಕೋಟಿ ಉಳಿತಾಯ

● ಪರಿಸರ ಸ್ನೇಹಿ ದೀಪಗಳು ● ಮಿಗಿಲಾಗಿ ಅಧಿಕ ಮಿತವ್ಯಯಕಾರಿ





ಮೈಸೂರು, ಅ.21(ಎಂಕೆ)– ಮೈಸೂರು ನಗರದಾದ್ಯಂತ ಬೆಳಗುತ್ತಿರುವ ಪರಿಸರ ಸ್ನೇಹಿ ಎಲ್‌ಇಡಿ ಬೀದಿ ದೀಪಗಳ ವ್ಯವಸ್ಥೆಯಿಂದಾಗಿ ವಿದ್ಯುತ್ ಉಳಿತಾಯದ ಜೊತೆಗೆ ಪಾಲಿಕೆಗೆ ಪ್ರತೀ ತಿಂಗಳು 1.50 ಕೋಟಿಗೂ ಅಧಿಕ ಹಣ ಉಳಿತಾಯವಾಗುತ್ತಿದೆ.

ವಿದ್ಯುತ್ ಉಳಿತಾಯ ಹಾಗೂ ಖರ್ಚು ಕಡಿಮೆ ಮಾಡುವ ಉದ್ದೇಶದಿಂದ ನಗರದಾದ್ಯಂತ ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಡಿ 2021 ರಿಂದ ಸಾಂಪ್ರದಾಯಿಕ ಬೀದಿ ದೀಪಗಳನ್ನು ತೆರವು ಮಾಡಿ, ಪರಿಸರ ಸ್ನೇಹಿ ಎಲ್‌ಇಡಿ ಬೀದಿ ದೀಪಗಳ ಅಳವಡಿಕೆ ಕಾರ್ಯ ಆರಂಭವಾಗಿ ಪ್ರಸ್ತುತ 76 ಸಾವಿರ ಬೀದಿ ದೀಪಗಳು ಬೆಳಗುತ್ತಿವೆ.

ವರ್ಷದಿಂದ ವರ್ಷಕ್ಕೆ ಬೀದಿ ದೀಪ ವ್ಯವಸ್ಥೆಗೆ ತಗಲುತ್ತಿದ್ದ ಖರ್ಚು ಕಡಿಮೆಯಾಗುತ್ತಿದೆ. ತಿಂಗಳಿಗೆ 2 ಕೋಟಿ ರೂ.ಗೂ ಅಧಿಕ ಬಿಲ್ ಬರುತ್ತಿದ್ದ ಜಾಗದಲ್ಲೀಗ ಸುಮಾರು 80–90 ಲಕ್ಷ ರೂ. ಖರ್ಚಾಗುತ್ತಿದೆ. 2023ರಲ್ಲಿ 1.26 ಕೋಟಿ ರೂ., 2024ರಲ್ಲಿ 1.14 ಕೋಟಿ ರೂ. ಹಾಗೂ 2025ರಲ್ಲಿ 88 ಲಕ್ಷ ರೂ. ಅಂದಾಜು ಖರ್ಚು ಎಂದು ಲೆಕ್ಕಾಚಾರ ಮಾಡಲಾಗಿದ್ದು, ಎಲ್‌ಇಡಿ ಬೀದಿ ದೀಪಗಳ ವ್ಯವಸ್ಥೆಯನ್ನು ಅಳವಡಿಸಿಕೊಂಡ ಬಳಿಕ ಪ್ರತೀ ತಿಂಗಳು ಸುಮಾರು 1.50 ಕೋಟಿ ರೂ. ಹಣ ಉಳಿತಾಯವಾಗುತ್ತಿದೆ.

ಎಲ್‌ಇಡಿ ಬೀದಿ ದೀಪಗಳ ಅಳವಡಿಸುವ ಕಾರ್ಯವನ್ನು ಆರಂಭಿಸಿದ್ದ ಸಿಜಿಎನ್ ಗ್ರೀನ್ ಸಂಸ್ಥೆಯು 2024ರ ಆಗಸ್ಟ್ ತಿಂಗಳ ಮೇಗೂ ನಿರ್ವಹಿಸಿದೆ ನಂತರ ಈ ಜವಾಬ್ದಾರಿಯನ್ನು ಐಡೆಕ್ ಸಂಸ್ಥೆಗೆ ನೀಡಲಾಗಿದೆ (Infrastructure Development Corporation (Karnataka) Limited).

ಮೈಸೂರು ನಗರದಲ್ಲಿ ಎಲ್‌ಇಡಿ ಬೀದಿ ದೀಪ ವ್ಯವಸ್ಥೆಯಿಂದ ಸುಮಾರು ಶೇ.60 ರಿಂದ 70 ರಷ್ಟು ವಿದ್ಯುತ್ ಉಳಿತಾಯದ ಜೊತೆಗೆ ಹಣ ಉಳಿತಾಯವೂ ಆಗುತ್ತಿದೆ. ಮೊದಲೆಲ್ಲಾ ವರ್ಷಕ್ಕೆ ಸುಮಾರು 30 ಕೋಟಿ ರೂಗಳಷ್ಟು ಖರ್ಚಾಗುತ್ತಿತ್ತು. ಪ್ರತೀ ತಿಂಗಳು ಈಗ 1.50 ಕೋಟಿ ರೂ. ಗಳಷ್ಟು ಹಣ ಉಳಿತಾಯ ವಾಗುತ್ತಿದೆ.



- ಶೇಖ್ ತನ್ವೀರ್ ಆಸಿಫ್, ಆಯುಕ್ತರು, ಮೈಸೂರು ನಗರಪಾಲಿಕೆ

ಪ್ರಸ್ತಾವನೆಗೂ ಅಧಿಕ ದೀಪಗಳ **ಅಳವಡಿಕೆ:** ಎಲ್‌ಇಡಿ ಬೀದಿ ದೀಪಗಳ ಅಳವಡಿಕೆಯ ಸಂದರ್ಭದಲ್ಲಿ ಮೈಸೂರು ನಗರ ಮತ್ತು ರಿಂಗ್ ರಸ್ತೆ ಸೇರಿ 60 ಸಾವಿರ ಎಲ್‌ಇಡಿ ಲೈಟ್ ಅಳವಡಿಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆದರೆ, ರಿಂಗ್ ರೋಡ್ ಹೊರತುಪಡಿಸಿಯೇ ನಗರದೊಳಗೆ 76 ಸಾವಿರ ಬೀದಿ ದೀಪಗಳು ಬೆಳಗುತ್ತಿವೆ ಎಂದು ನಗರಪಾಲಿಕೆ ವಿದ್ಯುತ್ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ದೀಪಕ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಪಾಲಿಕೆಯ ವಾಣಿ ವಿಲಾಸ ವಾಟರ್ ವರ್ಕ್ಸ್ ಆವರಣದಲ್ಲಿ ಬೀದಿ ದೀಪ ವ್ಯವಸ್ಥೆ ನಿರ್ವಹಣೆಗಾಗಿಯೇ ಪ್ರತ್ಯೇಕವಾಗಿ ಕಂಟ್ರೋಲ್ ರೂಂ ಇದ್ದು, ದಿನದ 24 ಗಂಟೆಯೂ ಗಮನಿಸಲಾಗುತ್ತದೆ. ಹಗಲಲ್ಲಿ ಎಲ್ಲಿಯಾದರೂ ಬೀದಿ ದೀಪಗಳು ಉರಿಯುತ್ತಿದ್ದರೆ ಅದರ ಮಾಹಿತಿಯೂ ಲಭ್ಯವಾಗಲಿದ್ದು, ಕೂಡಲೇ ಆಫ್ ಮಾಡಲಾಗುತ್ತದೆ. ಅನಾವಶ್ಯಕವಾಗಿ ವಿದ್ಯುತ್ ಉರಿಸದೆ ಉಳಿತಾಯ ಮಾಡುವುದರ ಜೊತೆಗೆ ತಗಲುತ್ತಿದ್ದ ಖರ್ಚನ್ನು ಕಡಿಮೆ ಮಾಡಲಾಗಿದೆ ಎಂದರು.

ಶೀಘ್ರ ಪ್ರತಿಕ್ರಿಯೆ: ಈಗಾಗಲೇ ನಗರದಾದ್ಯಂತ ಅಳವಡಿಸಿರುವ ಎಲ್‌ಇಡಿ ಬೀದಿ ದೀಪಗಳು ಗುಣಮಟ್ಟದಿಂದ ಕೂಡಿದ್ದು, 3–4 ವರ್ಷ ಮತ್ತು ಅದಕ್ಕಿಂತಲೂ ಹೆಚ್ಚಿನ ವರ್ಷಗಳ ಕಾಲ ಬಾಳಿಕೆ ಬರಲಿದ್ದು, ಅಲ್ಲಲ್ಲಿ ಕೆಟ್ಟು ಹೋದ ಕೂಡಲೆ ಬದಲಾವಣೆ ಮಾಡಲಾಗುತ್ತದೆ. ಪ್ರತೀ ದಿನ 20–25 ಕಂಪ್ಲೈಟ್‌ಗಳು ಬರಲಿದ್ದು, ಶೀಘ್ರವಾಗಿ ಪ್ರತಿಕ್ರಿಯೆ ನೀಡುವ ಮೂಲಕ ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆ ಬಗೆಹರಿಸಲಾಗುವುದು ಎಂದು ತಿಳಿಸಿದರು.

ರಿಂಗ್ ರೋಡ್ ದೀಪಗಳ ನಿರ್ವಹಣೆ...

ಮೈಸೂರು ನಗರವನ್ನು ಸುತ್ತುವರಿದಿರುವ 42.2 ಕಿಲೋ ಮೀಟರ್‌ಗಳ ರಿಂಗ್ ರೋಡ್ ವಿದ್ಯುತ್ ದೀಪ ವ್ಯವಸ್ಥೆ ನಿರ್ವಹಣೆಯ ಜವಾಬ್ದಾರಿಯನ್ನು ನಗರಪಾಲಿಕೆಗೆ ನೀಡಲಾಗಿದ್ದು, ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿದೆ. ರಿಂಗ್ ರೋಡ್‌ನಲ್ಲಿ ಒಟ್ಟು 4468 ಎಲ್‌ಇಡಿ ದೀಪಗಳಿದ್ದು, ಮೂರು ವರ್ಷಗಳ ಅವಧಿಗೆ ಅಂದಾಜು 1.27 ಕೋಟಿ ವೆಚ್ಚದಲ್ಲಿ ನಿರ್ವಹಣೆ ಮಾಡಲು ನಿರ್ಧರಿಸಲಾಗಿದೆ.

ಸಾಂಪ್ರದಾಯಿಕ ಬೀದಿ ದೀಪಗಳ ಬದಲಿಗೆ ಎಲ್‌ಇಡಿ ಬೀದಿ ದೀಪ ಬಳಕೆಯಿಂದ ಪರಿಸರ ಸ್ನೇಹಿ ಬೆಳಕಿನ ಜೊತೆಗೆ ಉಳಿತಾಯದ ಮೂಲಕ ಪಾಲಿಕೆಗೆ ಒತ್ತಡ ಕಡಿಮೆಯಾಗಿದೆ. ಅದೇ ರೀತಿ ನಿರ್ವಹಣೆಯನ್ನು ಉತ್ತಮವಾಗಿ ಮಾಡುತ್ತಿದ್ದೇವೆ. ದೂರು ಬಂದ ಕೂಡಲೇ ಪರಿಹರಿಸುವ ಪ್ರಯತ್ನ ಮಾಡುತ್ತಿದ್ದೇವೆ. ಅದಕ್ಕಾಗಿಯೇ ಟೀಂಗಳನ್ನು ಮಾಡಲಾಗಿದೆ ಈ ಮೂಲಕ ಮೈಸೂರು ಸ್ಮಾರ್ಟ್ ಮತ್ತು ಗ್ರೀನ್ ಸಿಟಿಯತ್ತ ಸಾಗುತ್ತಿದೆ.



- ದೀಪಕ್, ಕಾರ್ಯನಿರ್ವಾಹಕ ಇಂಜಿನಿಯರ್, ಎಂಸಿಸಿ, ವಿದ್ಯುತ್ ವಿಭಾಗ

ವಾಲ್ಮೀಕಿ ಸಮಾಜದ ಬಗ್ಗೆ ಆಕ್ಷೇಪಾರ್ಹ ಪದ ಬಳಕೆ

ಮಾಜಿ ಸಂಸದ ರಮೇಶ್ ಕತ್ತಿ ಬಂಧನಕ್ಕೆ ಆಗ್ರಹಿಸಿ ನಾಯಕ ಯುವ ಸೇನೆ ಪ್ರತಿಭಟನೆ



ಟೌನ್‌ಹಾಲ್ ಎದುರು ಕರ್ನಾಟಕ ರಾಜ್ಯ ನಾಯಕ ಯುವ ಸೇನೆ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಅ.21(ಎಂಕೆ)– ವಾಲ್ಮೀಕಿ ಸಮಾಜದ ಬಗ್ಗೆ ಆಕ್ಷೇಪಾರ್ಹ ಪದ ಬಳಕೆ ಮಾಡಿರುವ ಮಾಜಿ ಸಂಸದ ರಮೇಶ್ ಕತ್ತಿ ವಿರುದ್ಧ ಎಸ್ಸಿ–ಎಸ್ಟಿ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಿ ಬಂಧಿಸಬೇಕೆಂದು ಆಗ್ರಹಿಸಿ ಕರ್ನಾಟಕ ರಾಜ್ಯ ನಾಯಕ ಯುವ ಸೇನೆ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಟೌನ್‌ಹಾಲ್ ಎದುರಿನ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಎದುರು ಜಮಾವಣೆಗೊಂಡ ಪ್ರತಿಭಟನಾಕಾರರು ಮಾಜಿ ಸಂಸದ ರಮೇಶ್ ಕತ್ತಿ ವಿರುದ್ಧ ದಿಕ್ಕಾರದ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ನಾಯಕ ಯುವ ಸೇನೆ ರಾಜ್ಯಾಧ್ಯಕ್ಷ ದೇವರಾಜು ಟಿ.ಕಾಟೂರು ಮಾತನಾಡಿ, ಬೇಡ(ವಾಲ್ಮೀಕಿ) ಸಮಾಜದ ಬಗ್ಗೆ ಅಶ್ಲೀಲ ಪದ ಬಳಸಿ, ನಿಂದಿಸಿ ಅಪಮಾನ ಮಾಡಿರುವ ಹಾಗೂ ರಾಜ್ಯದಲ್ಲಿ ಶಾಂತಿ–ಸುವ್ಯವಸ್ಥೆಗೆ ಭಂಗ ತಂದಿರುವ ರಮೇಶ ಕತ್ತಿಯನ್ನು ಕೂಡಲೇ ಬಂಧಿಸಿ, ಕಾನೂನು ರೀತಿಯಲ್ಲಿ ಶಿಕ್ಷೆಗೆ ಗುರಿಪಡಿಸಬೇಕು ಎಂದು ಒತ್ತಾಯಿಸಿದರು.

ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ನಗರ ಪಾಲಿಕೆ ಮಾಜಿ ಸದಸ್ಯ ಲೋಕೇಶ್ ಪಿಯಾ, ಜಿಪಂ ಮಾಜಿ ಸದಸ್ಯ ತಲಕಾಡು ಮಂಜುನಾಥ್, ಸೇನೆಯ ಉಪಾಧ್ಯಕ್ಷ ಶಿವಕುಮಾರ ಸ್ವಾಮಿ, ಮೀನುಗಾರ ಘಟಕದ ಜಿಲ್ಲಾಧ್ಯಕ್ಷ ರೈಲ್ವೆ ಸಿದ್ದಯ್ಯ, ರಮ್ಮನಹಳ್ಳಿ ನಾಗರಾಜು, ಜೆ.ಪಿ.ನಗರ ಶಿವಸ್ವಾಮಿ, ಶ್ರೀನಿವಾಸನಾಯಕ, ತಿಪ್ಪೂರು ಮಹದೇವ ನಾಯಕ ಮತ್ತಿತರರಿದ್ದರು.

ಅಪರಾಧ ಸಂಬಂಧಿತ ಪೋಸ್ಟ್‌ಗಳ ಸಾಮಾಜಿಕ ಜಾಲತಾಣದಲ್ಲಿ ಹಾಕಿದರೆ ಕಠಿಣ ಕ್ರಮದ ಎಚ್ಚರಿಕೆ

ಮೈಸೂರು,ಅ.21(ಎಸ್‌ಪಿಎನ್)– ರೌಡಿಶೀಟರ್‌ಗಳು ರೀಲ್ಸ್ ಮತ್ತು ಅಪರಾಧ ಪ್ರಕರಣಗಳ ಪೋಸ್ಟರ್‌ಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕಿದರೆ, ಕಠಿಣ ಕ್ರಮ ಜರುಗಿಸಲಾಗುವುದು ಎಂದು ಮೈಸೂರು ನಗರ ಕಾನೂನು ಸುವ್ಯವಸ್ಥೆ ವಿಭಾಗದ ಡಿಸಿಪಿ ಆರ್.ಎನ್.ಬಿಂದು ಮಣಿ ಎಚ್ಚರಿಸಿದರು.

ಮೈಸೂರು ವಿದ್ಯಾರಣ್ಯಪುರಂ ಪೊಲೀಸ್ ಠಾಣೆ ಆವರಣದಲ್ಲಿ ಕೃಷ್ಣರಾಜ ವಿಭಾಗದ ಠಾಣೆಗಳಾದ ಲಕ್ಷ್ಮೀಪುರಂ, ಅಶೋಕಪುರಂ, ಕುವೆಂಪುನಗರ, ವಿದ್ಯಾರಣ್ಯಪುರಂ ಹಾಗೂ ಕೃಷ್ಣರಾಜ ಠಾಣೆ ವ್ಯಾಪ್ತಿಯ ನೂರಕ್ಕೂ ಹೆಚ್ಚು ರೌಡಿಶೀಟರ್‌ಗಳನ್ನು ಪರೇಡ್‌ನಲ್ಲಿ ಎಚ್ಚರಿಸಿದರು.

ಕೃಷ್ಣರಾಜ ವಿಭಾಗದ ವ್ಯಾಪ್ತಿಯ ರೌಡಿಶೀಟರ್‌ಗಳು ನಗರದಲ್ಲಿ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಮತ್ತು ಸಾರ್ವಜನಿಕರಲ್ಲಿ ಭೀತಿ ಹುಟ್ಟಿಸುವಂತಹ ಯಾವುದೇ ಪ್ರಕರಣದಲ್ಲಿ ಭಾಗಿಯಾಗದಂತೆ ಹಾಗೂ ಸಾಮಾಜಿಕ ಮಾಧ್ಯಮಗಳಲ್ಲಿ ಕಾನೂನು ಬಾಹಿರ ಪೋಸ್ಟ್ ಹಾಗೂ ರೀಲ್ಸ್ ಗಳನ್ನು ಹಾಕಿದರೆ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದೆಂದರು.



ವಿದ್ಯಾರಣ್ಯಪುರ ಪೊಲೀಸ್ ಠಾಣೆ ಆವರಣದಲ್ಲಿ ಮಂಗಳವಾರ ನೂರಕ್ಕೂ ಅಧಿಕ ರೌಡಿಶೀಟರ್‌ಗಳ ಪರೇಡ್ ನಡೆಸಲಾಯಿತು. ಈ ವೇಳೆ ಮೈಸೂರು ನಗರದ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ಆರ್.ಎನ್.ಬಿಂದುಮಣಿ, ಸಂಚಾರ ಮತ್ತು ಅಪರಾಧ ವಿಭಾಗದ ಡಿಸಿಪಿ ಕೆ.ಎಸ್.ಸುಂದರ್‌ರಾಜ್, ಕೃಷ್ಣರಾಜ ವಿಭಾಗದ ಎಸಿಪಿ ರಮೇಶ್ ಕುಮಾರ್ ಸೇರಿದಂತೆ ಇತರರಿದ್ದರು.

ರೌಡಿಶೀಟ್ ತೆರೆಯುವುದರಿಂದ ಏನೆಲ್ಲಾ ಸಂಕಷ್ಟ ಎದುರಿಸಬೇಕಾಗುತ್ತದೆ. ಇದರಿಂದ ನಿಮ್ಮ ಕುಟುಂಬಗಳು ಬೀದಿಗೆ ಬರಲಿವೆ ಎನ್ನುವುದರ ಬಗ್ಗೆ ಕಳೆದ 25–30 ವರ್ಷಗಳಿಂದ ರೌಡಿಶೀಟರ್ ಆಗಿರುವವರಿಂದ ಸಲಹೆ ಪಡೆಯಿರಿ. ಅಪರಾಧ ಚಟುವಟಿಕೆಗಳಿಂದ ನಿಮ್ಮ ಬದುಕು ನಾಶವಾಗುವುದಲ್ಲದೆ, ನಿಮ್ಮ ನಂಬಿದವರ ಬದುಕು ಬೀದಿಗೆ ಬರಲಿವೆ. ಇದನ್ನೆಲ್ಲ ಮನದಲ್ಲಿಟ್ಟುಕೊಂಡು ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗದೇ ಹೊಸ ಜೀವನ ಕಟ್ಟಿಕೊಳ್ಳಿ ಎಂದು ಸಲಹೆ ನೀಡಿದರು.

ಐದು ಠಾಣಾ ವ್ಯಾಪ್ತಿಯಲ್ಲಿ ಜರುಗುವ ಅಪರಾಧ ಚಟುವಟಿಕೆಗಳಲ್ಲಿ ಹಾಲಿ ರೌಡಿಶೀಟರ್‌ಗಳ ಹೆಸರು ತಳಕು ಹಾಕಿಕೊಂಡರೆ ಅಂತಹವರಿಗೆ ಮೈಸೂರು ಜಿಲ್ಲೆಯಿಂದ ಗಡಿಪಾರು ಶಿಕ್ಷೆ ಕಟ್ಟಿಟ್ಟ ಬುತ್ತಿ. ಹಾಗಾಗಿ ಯಾರೊಬ್ಬರು ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗಬಾರದು ಎಂದು ಎಚ್ಚರಿಸಿದರು.

ಈ ವೇಳೆ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಕೆ.ಎಸ್.ಸುಂದರ್‌ರಾಜ್, ಕೃಷ್ಣರಾಜ ವಿಭಾಗದ ಎಸಿಪಿ ರಮೇಶ್ ಕುಮಾರ್, ವಿದ್ಯಾರಣ್ಯಪುರಂ ಠಾಣಾ ಇನ್ಸ್‌ಪೆಕ್ಟರ್ ಯೋಗಾನಂದಪ್ಪ, ಅಶೋಕಪುರಂ ಠಾಣಾ ಇನ್ಸ್‌ಪೆಕ್ಟರ್ ರೋಹಿತ್, ಕುವೆಂಪುನಗರ ಠಾಣಾ ಇನ್ಸ್‌ಪೆಕ್ಟರ್ ಯೋಗೇಶ್, ಲಕ್ಷ್ಮೀಪುರಂ ಠಾಣಾ ಇನ್ಸ್‌ಪೆಕ್ಟರ್ ರವಿಶಂಕರ್ ಹಾಗೂ ಕೃಷ್ಣರಾಜ ಠಾಣಾ ಇನ್ಸ್‌ಪೆಕ್ಟರ್ ಧನರಾಜ್ ಹಾಗೂ ರೌಡಿ ಪ್ರತಿಬಂಧಕ ದಳದ ಸಿಬ್ಬಂದಿ, ಸಿಸಿಬಿ ಪೊಲೀಸರು ಹಾಗೂ ಕಮಾಂಡೋ ಪಡೆಯ ಸಿಬ್ಬಂದಿ ಉಪಸ್ಥಿತರಿದ್ದರು.

ಇಂದು ಶಬರಿಮಲೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಭೇಟಿ

ನವದೆಹಲಿ: ರಾಷ್ಟ್ರಪತಿ ದ್ರೌಪದಿ ಮುರ್ಮು ನಾಳೆಯಿಂದ ನಾಲ್ಕು ದಿನಗಳ ಕಾಲ ಕೇರಳ ಪ್ರವಾಸ ಕೈಗೊಳ್ಳಲಿದ್ದು, ಈ ವೇಳೆ ಅವರು ಶಬರಿಮಲೆ ದೇವಸ್ಥಾನಕ್ಕೂ ಭೇಟಿ ನೀಡಲಿದ್ದಾರೆ ಎಂದು ರಾಷ್ಟ್ರಪತಿ ಭವನ ತಿಳಿಸಿದೆ.



ಅ.22ರಂದು ರಾಷ್ಟ್ರಪತಿಗಳು ಶಬರಿಮಲೆ ದೇವಸ್ಥಾನದಲ್ಲಿ ಅಯ್ಯಪ್ಪ ಸ್ವಾಮಿಯ ದರ್ಶನ ಪಡೆದು ಆರತಿ ಮಾಡಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಗುರುವಾರ ತಿರುವನಂತಪುರದ ರಾಜಭವನದಲ್ಲಿ ಮಾಜಿ ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರ ಪ್ರತಿಮೆಯನ್ನು ದ್ರೌಪದಿ ಮುರ್ಮು ಅವರು ಅನಾವರಣಗೊಳಿಸಲಿದ್ದಾರೆ. ನಂತರ, ವರ್ಕಲಾದ ಶಿವಗಿರಿ ಮಠದಲ್ಲಿ ನಾರಾಯಣ ಗುರುಗಳ ಮಹಾಸಮಾಧಿ ಶತಮಾನೋತ್ಸವ ಉದ್ಘಾಟಿಸಲಿದ್ದಾರೆ ಎಂದು ರಾಷ್ಟ್ರಪತಿ ಭವನ ತಿಳಿಸಿದೆ.

ಮುರ್ಮು ಪಲೈನ ಸೇಂಟ್ ಥಾಮಸ್ ಕಾಲೇಜಿನ ಪ್ಲಾಟಿನಂ ಜುಬಿಲಿ ಆಚರಣೆಯ ಸಮಾರೋಪ ಸಮಾರಂಭದಲ್ಲಿಯೂ ಭಾಗವಹಿಸಲಿದ್ದಾರೆ. ಅಕ್ಟೋಬರ್ 24 ರಂದು ರಾಷ್ಟ್ರಪತಿಗಳು ಎರ್ನಾಕುಲಂನ ಸೇಂಟ್ ತೆರೇಸಾ ಕಾಲೇಜಿನ ಶತಮಾನೋತ್ಸವ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಹಾಸನಾಂಬೆಯ ಸನ್ನಿಧಿಯಲ್ಲಿ ಮೈಸೂರು ಮಹಿಳೆಯ ಚಿನ್ನದ ಸರ ದಕ್ಕಿದ ಪವಾಡ!

ಹಾಸನ, ಅ.21–ಈಗಿನ ಕಾಲದಲ್ಲಿ ಕಳೆದು ಹೋದ ವಸ್ತು ವಾಪಸ್ ಸಿಗುವುದು ಅನುಮಾನ. ಹೀಗಾಗಿ ಕಳೆದುಕೊಂಡಿರುವುದರ ಬಗ್ಗೆ ಚಿಂತಿಸಿ ಪ್ರಯೋಜನವಿಲ್ಲ ಅಂತಾರೆ. ಎಲ್ಲೋ ಸಿಕ್ಕವಸ್ತುವನ್ನು ತಮ್ಮದೆಂದು ತೋರಿಸಿಕೊಂಡು ತೆಗೆದುಕೊಂಡು ಹೋಗುವ ಜನರು ಉಂಟು. ಇವರ ನಡುವೆ ಸಿಕ್ಕ ವಸ್ತುವನ್ನು ಪ್ರಾಮಾಣಿಕವಾಗಿ ಮರಳಿ ವಾರಸುದಾರರಿಗೆ ಒಪ್ಪಿಸಿರುವ ಜನ ಸಹ ನಮ್ಮಲ್ಲಿ ಇದ್ದಾರೆ. ಇದಕ್ಕೆ ಸಾಕ್ಷಿ ಎಂಬಂತೆ ಹಾಸನಾಂಬೆ ಸನ್ನಿಧಿಯಲ್ಲಿ ಪವಾಡವೊಂದು ನಡೆದಿದೆ.

ಇಂಥ ಪವಾಡಕ್ಕೆ ಒಳಗಾದ ಮಹಿಳೆ ಮೈಸೂರಿನವರು. ದೇವರ ದರ್ಶನಕ್ಕೆಂದು ಈ ಮಹಿಳೆ ಜನಜಂಗುಳಿಯಲ್ಲಿ ತನ್ನ 6 ಲಕ್ಷ ರೂ. ಮೌಲ್ಯದ ಸರವನ್ನು ಕಳೆದುಕೊಂಡು ಕೆಲ ಕ್ಷಣದಲ್ಲೇ ಅದನ್ನು ಮರಳಿ ಪಡೆದುಕೊಂಡಿದ್ದಾಳೆ. ಮೈಸೂರಿನಿಂದ ಹಾಸನಾಂಬೆ ದರ್ಶನಕ್ಕೆ ಆಗಮಿಸಿದ್ದ ಈ ಮಹಿಳೆ ದೇವಿಯ ದರ್ಶನ ಪಡೆಯುವ ವೇಳೆ ತಮ್ಮ ಚಿನ್ನದ ಸರವನ್ನು ಕಳೆದುಕೊಂಡಿದ್ದರು. ಇದರಿಂದ ಕಂಗಾಲಾಗಿದ್ದ ಮಹಿಳೆ ಚಿನ್ನದ ಸರ ಹೊಯ್ತು ಎಂದು ಕಣ್ಣೀರಿಟ್ಟಿದ್ದರು. ಅಷ್ಟೇ ಅಲ್ಲ ಯಾಕಾದ್ರೂ ದೇವಸ್ಥಾನಕ್ಕೆ ಬಂದ್ನೋ ಎಂದು ಗೋಳಾಡುತ್ತಿದ್ದಳು. ಇದೇ ವೇಳೆ ದರ್ಶನಕ್ಕೆ ಬಂದಿದ್ದ ವ್ಯಕ್ತಿಯೊಬ್ಬರಿಗೆ ಸನ್ನಿಧಿ ಆವರಣದಲ್ಲೇ ಚಿನ್ನದ ಸರ ಸಿಕ್ಕಿದೆ.

ಕೂಡಲೇ ಆ ವ್ಯಕ್ತಿ ಚಿನ್ನದ ಸರವನ್ನು ಅಲ್ಲೇ ಇದ್ದ ಸ್ಕೌಟ್ಸ್ ಮತ್ತು ಗೈಡ್ಸ್ ಸೇವಾ ಕಾರ್ಯಕರ್ತರ ಮೂಲಕ ದೇವಾಲಯದ ಆಡಳಿತ ಮಂಡಳಿಗೆ ತಲುಪಿಸಿದ್ದಾರೆ. ಬಳಿಕ ಅಧಿಕಾರಿಗಳು ದೇವಸ್ಥಾನದ ಮೈಕಿನಲ್ಲಿ ಸರ ಸಿಕ್ಕಿರುವ ಬಗ್ಗೆ ಅನೌನ್ಸ್ ಮಾಡಿದ್ದಾರೆ. ಯಾವಾಗ ಮೈಕಿನ ಸೌಂಡ್ ಕೇಳಿತೋ ಸರ ಕಳೆದುಕೊಂಡ ಮಹಿಳೆ ಎದ್ನೋ ಬಿದ್ನೋ ಅಂತ ದೇವಾಲಯದ ಆಡಳಿತ ಕಚೇರಿಗೆ ಓಡೋಡಿ ಹೋಗಿದ್ದಾರೆ.

ಬಳಿಕ ದೇವಸ್ಥಾನದ ಸಿಬ್ಬಂದಿ ಮಹಿಳೆಯಿಂದ ಸರದ ಗುರುತು, ಯಾವ ಸರ, ಯಾವ ರೀತಿ ಇದೆ, ಎಂದೆಲ್ಲಾ ಮಾಹಿತಿ ಪಡೆದುಕೊಂಡು ಬಳಿಕ ಅದು ಆಕೆಯದ್ದೇ ಎಂದು ಖಚಿತವಾದ ಬಳಿಕ ಮಹಿಳೆಗೆ ಸರವನ್ನು ಹಸ್ತಾಂತರಿಸಿದರು.

ಇನ್ನು ಸಿಕ್ಕ ಚಿನ್ನದ ಸರವನ್ನು ತಂದು ಕೊಟ್ಟ ವ್ಯಕ್ತಿಯ ಈ ಅಪೂರ್ವ ಪ್ರಾಮಾಣಿಕತೆಗೆ ದೇವಾಲಯದ ಆಡಳಿತ ಮಂಡಳಿ ಮತ್ತು ಅಧಿಕಾರಿಗಳು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಈ ಘಟನೆ ದರ್ಶನೋತ್ಸವದ ಪಾವಿತ್ರ್ಯತೆ ಮತ್ತು ಭಕ್ತರ ಸದ್ಗುಣಕ್ಕೆ ಸಾಕ್ಷಿಯಾಗಿದೆ. ಇನ್ನು ವ್ಯಕ್ತಿ ಸಹ ಎಲ್ಲರ ಮೆಚ್ಚುಗೆ ಮಾತುಗಳಿಂದ ಪುಳಕಿತರಾಗಿದ್ದಾರೆ.

ಒಟ್ಟಿನಲ್ಲಿ ಒಂದು ರೂಪಾಯಿ ಸಿಕ್ಕರೂ ಬಿಡದ ಈಗಿನ ಕಾಲದಲ್ಲಿ ಬರೋಬ್ಬರಿ 6 ಲಕ್ಷ ರೂ. ಮೌಲ್ಯದ ಸಿಕ್ಕ ಚಿನ್ನದ ಸರವನ್ನು ವಾಪಸ್ ವಾರಸುದಾರರಿಗೆ ನೀಡಿ ಎಲ್ಲರ ಮೆಚ್ಚುಗೆಗೆ ಆ ವ್ಯಕ್ತಿ ಪಾತ್ರರಾಗಿದ್ದಾರೆ.

ಸಮರ್ಪಕ ರೀತಿ ಒಳಮೀಸಲಾತಿ ಶೀಘ್ರ ಅನುಷ್ಠಾನಕ್ಕೆ ಒತ್ತಾಯ; ಹೋರಾಟ ಕುರಿತು ಚರ್ಚೆ

ಸಾಮಾಜಿಕ ನ್ಯಾಯಕ್ಕಾಗಿ ಒಳಮೀಸಲಾತಿ ಜಾರಿ ಹೋರಾಟ ಸಮಿತಿ ನೇತೃತ್ವದಲ್ಲಿ ನಡೆದ ಮಾದಿಗ ಸಮಾಜದ ಮುಖಂಡರ ಸಭೆ

ಮೈಸೂರು,ಅ.21(ಪಿಎಂ)– ಸಾಮಾಜಿಕ ನ್ಯಾಯಕ್ಕಾಗಿ ಒಳಮೀಸಲಾತಿ ಜಾರಿ ಹೋರಾಟ ಸಮಿತಿ ವತಿಯಿಂದ ಸಮರ್ಪಕ ರೀತಿ ಒಳಮೀಸಲಾತಿ ಶೀಘ್ರ ಅನುಷ್ಠಾನಕ್ಕೆ ತರುವಂತೆ ಸರ್ಕಾರಕ್ಕೆ ಒತ್ತಾಯಿಸುವ ಸಂಬಂಧ ಮುಂದಿನ ಹೋರಾಟ ರೂಪಿಸುವ ಕುರಿತು ಮಂಗಳವಾರ ಸಭೆ ನಡೆಸಲಾಯಿತು.

ಮೈಸೂರಿನ ನಜರ್‌ಬಾದಿನಲ್ಲಿರುವ ಲೋಕೋಪಯೋಗಿ ಇಲಾಖೆಯ ಗೆಸ್ಟ್ ಹೌಸ್ ಸಭಾಂಗಣದಲ್ಲಿ ಸಭೆ ನಡೆಯಿತು. ಇದೇ ವೇಳೆ ಮಾತನಾಡಿದ ಶಿವಶರಣ ಮಾದರ ಚನ್ನಯ್ಯ ಸೇವಾ ಸಮಿತಿ ರಾಜ್ಯ ಕಾರ್ಯದರ್ಶಿ ಡಾ.ಆನಂದ್‌ಕುಮಾರ್, ಮೂರು ದಶಕಗಳಿಂದ ಒಳಮೀಸಲಾತಿ ಪರ ಹೋರಾಟ ಮಾಡುತ್ತಿದ್ದೇನೆ. ಒಳಮೀಸಲಾತಿ ನಮ್ಮ ಸಮುದಾಯದ ಶ್ರೇಯೋಭಿವೃದ್ಧಿಗೆ ಬಹಳ ಮುಖ್ಯ ಎಂದು ಹೇಳಿದರು.

ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಹಾಸನ ಜಿಲ್ಲೆಗಳಲ್ಲಿ ಜಿಲ್ಲಾ ಪಂಚಾಯಿತಿ ಚುನಾವಣೆ ಸಂಬಂಧ ಮೀಸಲು ಕ್ಷೇತ್ರಗಳಲ್ಲಿ ರಾಜಕೀಯ ಪಕ್ಷಗಳು ಮಾದಿಗ ಸಮುದಾಯದವರಿಗೆ ಟಿಕೆಟ್ ಕೊಡುವುದು ಅತ್ಯಂತ ವಿರಳ. ಎಲ್ಲೋ ಒಮ್ಮೆ ಆಕಸ್ಮಿಕವಾಗಿ ಟಿಕೆಟ್ ದೊರೆಯಬಹುದಷ್ಟೇ ಎಂದರು.

ಕಳೆದ ಅವಧಿಗೆ ಸಂಬಂಧಿಸಿದಂತೆ ಇಡೀ ಮೈಸೂರು ಜಿಲ್ಲೆಯಲ್ಲಿ ಮಾದಿಗ ಸಮುದಾಯಕ್ಕೆ ಸೇರಿದ ಒಬ್ಬನೇ ಒಬ್ಬ ಜಿಪಂ ಸದಸ್ಯನಿಲ್ಲ. ಮೈಸೂರು ಮಹಾನಗರ ಪಾಲಿಕೆ ಚುನಾವಣೆಯಲ್ಲಿಯೂ ಇದೇ ಪರಿಸ್ಥಿತಿ ಇದೆ. ಆದರೆ ನಮ್ಮ ಸಹೋದರ ಸಮುದಾಯದವರಿಗೆ ಸಾಮಾನ್ಯ ಕ್ಷೇತ್ರ ಮಾತ್ರವಲ್ಲದೆ, ಮೀಸಲು ಕ್ಷೇತ್ರದಲ್ಲೂ ಅವಕಾಶ ಕಲ್ಪಿಸುವುದೇ ಹೆಚ್ಚಾಗಿ ನಡೆದು ಬಂದಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಇದಲ್ಲದೆ, ಸಭೆಯಲ್ಲಿ ಪಾಲ್ಗೊಂಡಿದ್ದ ವಿವಿಧ ಪಕ್ಷ ಹಾಗೂ ಸಂಘಟನೆಗಳ ಮಾದಿಗ ಸಮುದಾಯದ ಮುಖಂಡರು ಒಳಮೀಸಲಾತಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಹೋರಾಟ ಕೈಗೊಳ್ಳುವ ಬಗ್ಗೆ ತಮ್ಮ ಅಭಿಪ್ರಾಯ ಹಾಗೂ ಸಲಹೆಗಳನ್ನು ನೀಡಿದರು. ಸುಳ್ಳು ಜಾತಿ ಪ್ರಮಾಣ ಪತ್ರ ಪಡೆಯುವುದನ್ನು ತಡೆಗಟ್ಟಲು ಮೇಲ್ವಿಚಾರಣಾ ಸಮಿತಿ ರಚಿಸಬೇಕೆಂಬ ಒತ್ತಾಯಕ್ಕೆ ಸಮಾಜ ಕಲ್ಯಾಣ ಸಚಿವರು ಸಮ್ಮತಿಸಿರುವ ಬಗ್ಗೆಯೂ ಚರ್ಚಿಸಲಾಯಿತು.



ಮೈಸೂರಿನ ನಜರ್‌ಬಾದಿನಲ್ಲಿರುವ ಲೋಕೋಪಯೋಗಿ ಇಲಾಖೆಯ ಗೆಸ್ಟ್ ಹೌಸ್ ಸಭಾಂಗಣದಲ್ಲಿ ಸಾಮಾಜಿಕ ನ್ಯಾಯಕ್ಕಾಗಿ ಒಳಮೀಸಲಾತಿ ಜಾರಿ ಹೋರಾಟ ಸಮಿತಿ ವತಿಯಿಂದ ಮಂಗಳವಾರ ಸಭೆ ನಡೆಸಲಾಯಿತು.

ಕರ್ನಾಟಕ ರಾಜ್ಯ ಕಾಂಗ್ರೆಸ್ ಸರ್ಕಾರವು ಒಳಮೀಸಲಾತಿ ಸಂಬಂಧ ಗೊಂದಲಗಳನ್ನು ನಿವಾರಿಸಿ ಶೀಘ್ರ ಅನುಷ್ಠಾನಗೊಳಿಸುವಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿದೆ ಎಂಬ ಆರೋಪ ಕೇಳಿಬಂದಿತು.

ರಾಜ್ಯ ಸಚಿವ ಸಂಪುಟ ತೀರ್ಮಾನಿಸಿದೆ, ಆದರೆ...

ಒಳಮೀಸಲಾತಿ ಜಾರಿಗೆ ರಾಜ್ಯ ಸಚಿವ ಸಂಪುಟ ತೀರ್ಮಾನಿಸಿದೆ. ಆದರೆ ಅನುಷ್ಠಾನ ಮಾಡುತ್ತಿಲ್ಲ. ಜೊತೆಗೆ ಸಮಾಜ ಕಲ್ಯಾಣ ಇಲಾಖೆಯು ಗೊಂದಲ ಸೃಷ್ಟಿ ಮಾಡಿದೆ. ಸಾಮಾಜಿಕ ನ್ಯಾಯಕ್ಕೆ ಅನುಗುಣವಾಗಿ ಒಳಮೀಸಲಾತಿ ಶೀಘ್ರ ಅನುಷ್ಠಾನಕ್ಕೆ ತರಬೇಕು. ಪ್ರವರ್ಗ–1ರಲ್ಲಿ ಬಲಗೈ ಮತ್ತು ಎಡಗೈ ಎರಡೂ ಸಮುದಾಯದವರು ಮೀಸಲಾತಿ ಪಡೆಯಬಹುದು ಎಂದು ಗೊಂದಲ ಮಾಡಲಾಗಿದೆ. ಇದನ್ನು ನಿವಾರಿಸಬೇಕು. ರಾಜಕೀಯ ಕ್ಷೇತ್ರ, ಬಡ್ತಿ, ಎಸ್‌ಸಿಪಿ ಮತ್ತು ಟಿಎಸ್‌ಪಿ ಅನುದಾನ ಹಂಚಿಕೆಯಲ್ಲಿಯೂ ಒಳಮೀಸಲಾತಿ ಕೊಡಬೇಕೆಂಬುದು ನಮ್ಮ ಬೇಡಿಕೆ. ಈ ಸಂಬಂಧ ಇಂದಿನ ಸಭೆಯಲ್ಲಿ ಚರ್ಚಿಸಲಾಯಿತು.

-ಡಾ.ಆನಂದ್‌ಕುಮಾರ್, ರಾಜ್ಯ ಕಾರ್ಯದರ್ಶಿ, ಶಿವಶರಣ ಮಾದರ ಚನ್ನಯ್ಯ ಸೇವಾ ಸಮಿತಿ.

ಒಳ ಮೀಸಲು ಪರವಿರುವ ಎಲ್ಲಾ ಸಂಘಟನೆಗಳು ಹಾಗೂ ಸಾಮಾಜಿಕ ಮುಖಂಡರು ಸಂಘಟನಾತೀತ ಹಾಗೂ ಪಕ್ಷಾತೀತವಾಗಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿತ್ತು. ಅದರಂತೆ ಹಲವು ಮುಖಂಡರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಸಾಮಾಜಿಕ ನ್ಯಾಯಕ್ಕಾಗಿ ಒಳಮೀಸಲಾತಿ ಜಾರಿ ಹೋರಾಟ ಸಮಿತಿ ಪ್ರಧಾನ ಸಂಚಾಲಕ ಎಸ್.ಮಾರೆಪ್ಪ, ಸಂಚಾಲಕರಾದ ಕರಿಯಪ್ಪ ಗುಡಿಮನಿ, ಕೇಶವಮೂರ್ತಿ, ಕೃಷ್ಣಪ್ಪ ಕನಕೇನಹಳ್ಳಿ, ಬಸವರಾಜ್ ಕೌತಾಳ್, ಮಾದಿಗ ಮೀಸಲಾತಿ ಹೋರಾಟ ಸಮಿತಿ ಅಧ್ಯಕ್ಷ ಶಿವರಾಯ ಅಕ್ಕರಕಿ, ವಕೀಲ ಹನುಮೇಶ್ ಗುಂಡೂರ್, ಪೊಲೀಸ್ ಇಲಾಖೆ ನಿವೃತ್ತ ನೌಕರ ಪಾಂಡುರಂಗ ಸೇರಿದಂತೆ ಮಾದಿಗ ಸಮುದಾಯದ ಮುಖಂಡರು, ಯುವಕರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಬೆಟ್ಟದಪುರದಲ್ಲಿ ದೀಪಾವಳಿ ದೀವಟಿಗೆ ಉತ್ಸವ

ಶ್ರೀಶಿಡ್ಲು ಮಲ್ಲಿಕಾರ್ಜುನಸ್ವಾಮಿ ದರ್ಶನ ಪಡೆದ ಸಂಸದ ಯದುವೀರ್

● ಭಕ್ತರೊಂದಿಗೆ ಪಾದಯಾತ್ರೆಯಲ್ಲಿ ತೆರಳಿ ದೇವರ ದರ್ಶನ ● ಬೆಟ್ಟದ ಅಭಿವೃದ್ಧಿಗೆ ಬದ್ಧ

ಬೆಟ್ಟದಪುರ, ಅ.21– ದೀಪಾವಳಿ ದೀವಟಿಗೆ ಉತ್ಸವದ ಅಂಗವಾಗಿ ಮಂಗಳವಾರ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭಕ್ತರೊಂದಿಗೆ ಕಾಲ್ನಡಿಗೆಯಲ್ಲಿ ಬೆಟ್ಟ ಹತ್ತಿ ಇತಿಹಾಸ ಪ್ರಸಿದ್ಧ ಶ್ರೀಶಿಡ್ಲು ಮಲ್ಲಿಕಾರ್ಜುನಸ್ವಾಮಿ ದರ್ಶನ ಪಡೆದರು.

ಬೆಟ್ಟದಪುರಕ್ಕೆ ಆಗಮಿಸಿದ ಸಂಸದ ಯದುವೀರ್ ಅವರಿಗೆ ಬೆಟ್ಟದ ತಪ್ಪಲಿನಲ್ಲಿ ಗಾವಡಗೆರೆ ಮಠದ ನಟರಾಜ ಸ್ವಾಮೀಜಿ ಹಾಗೂ ಗ್ರಾಮಸ್ಥರು ಅದ್ಧೂರಿಯಾಗಿ ಸ್ವಾಗತ ಕೋರಿದರು. ಬಳಿಕ ಕಾಲ್ನಡಿಗೆಯಲ್ಲಿ ಬೆಟ್ಟ ಹತ್ತಿದ ಸಂಸದರು ದೇವರ ದರ್ಶನ ಪಡೆದು, ವಿಶೇಷ ಪೂಜೆ ಸಲ್ಲಿಸಿ, ನಾಡಿನ ಒಳಿತಿಗಾಗಿ ಪ್ರಾರ್ಥಿಸಿದರು.

ನಂತರ ಮಾತನಾಡಿದ ಸಂಸದ ಯದುವೀರ್, ಪ್ರಾಚೀನ, ಐತಿಹಾಸಿಕ ಹಿನ್ನೆಲೆ ಹೊಂದಿರುವ ಶ್ರೀಶಿಡ್ಲು ಮಲ್ಲಿಕಾರ್ಜುನಸ್ವಾಮಿ ದೇವಾಲಯಕ್ಕೆ ಸಾವಿರಾರು ಭಕ್ತರೊಂದಿಗೆ ಪಾದಯಾತ್ರೆ ಮೂಲಕ ತೆರಳಿ ದೇವರ ದರ್ಶನ ಪಡೆದಿದ್ದು ವಿಶೇಷ ಅನುಭೂತಿ ದೊರೆಯಿತು ಎಂದ ಅವರು, ಇದಕ್ಕೂ ಮುನ್ನಾ ನಮ್ಮ ಪೂರ್ವಜರಾದ ಜಯ ಚಾಮರಾಜ ಒಡೆಯರ್ ಅವರು





ಭಕ್ತರೊಂದಿಗೆ ಸಂಸದ ಯದುವೀರ್ ಬೆಟ್ಟ ಹತ್ತಿದರು. ಮತ್ತೊಂದು ಚಿತ್ರದಲ್ಲಿ ಸಂಸದರು ಅನ್ನಸಂತರ್ಪಣೆಗೆ ಚಾಲನೆ ನೀಡುವುದನ್ನು ಕಾಣಬಹುದು

ಇಲ್ಲಿಗೆ ಭೇಟಿ ನೀಡಿದ್ದರು. ಅಲ್ಲದೇ ಇಲ್ಲಿ ಸಿಕ್ಕಿದ 2 ಆನೆಗಳಲ್ಲಿ ಜಯ ಮಾರ್ತಾಂಡ ಆನೆ ಮೈಸೂರು ದಸರಾದಲ್ಲಿ ಮೊದಲ ಬಾರಿಗೆ ಅಂಬಾರಿ ಹೊತ್ತ ಆನೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದರು.

ಸರ್ಕಾರ ಈ ಬೆಟ್ಟವನ್ನು ಸಂಪೂರ್ಣ ನಿರ್ಲಕ್ಷ್ಯ ಮಾಡಿದೆ. ಹೀಗಾಗಿ ಈ ದೇವಾಲಯದ ಅಭಿವೃದ್ಧಿಗೆ ಸಂಕಲ್ಪ ಮಾಡುತ್ತೇನೆ. ಇದು ಧಾರ್ಮಿಕ ಸ್ಥಳವಾಗಿದ್ದು, ಪ್ರವಾಸೋದ್ಯಮ ಸ್ಥಳವಲ್ಲ. ಆದ್ದರಿಂದ ಧಾರ್ಮಿಕ ಸ್ಥಳದ ದೃಷ್ಟಿಕೋನದಲ್ಲಿ ಕ್ಷೇತ್ರವನ್ನು ಅಭಿವೃದ್ಧಿಗೊಳಿಸಬೇಕಾಗಿದೆ. ಧರ್ಮದ ಆಧಾರದ ಮೇಲೆ ಪರಿಸರ ವಲಯವನ್ನು ಕಾಳಜಿಯಾಗಿ ಇಟ್ಟುಕೊಂಡು ಆಧುನಿಕತೆಗೆ ಹೊಂದಿಕೊಂಡಂತೆ ಕೆಲಸ ಮಾಡಬೇಕು. ಪುರಾತತ್ವ ಇಲಾಖೆಯವರು ಸ್ಮಾರಕ, ದೇವಾಲಯ, ಪ್ರತಿಮೆಗಳನ್ನು ಕಾಪಾಡುತ್ತಿದ್ದಾರೆ. ಇದರೊಂದಿಗೆ ಮುಜರಾಯಿ ಇಲಾಖೆ ಸಹ ಸಹಕಾರ ನೀಡಿದೆ. ಬೆಟ್ಟಕ್ಕೆ ಒಳಪಡುವ ವಿವಿಧ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ ಭಕ್ತರಿಗೆ ಅನುಕೂಲವಾಗುವ ರೀತಿ ಅಭಿವೃದ್ಧಿ ಮಾಡಬೇಕು. ಪ್ರಾಚೀನ ಕಾಲದ ದೇವಾಲಯಗಳ ಅಭಿವೃದ್ಧಿಗೆ ಕೇಂದ್ರ ಸರ್ಕಾರದ ಉತ್ತಮ ಯೋಜನೆಗಳಿದ್ದು, ಶಿಡ್ಲು ಮಲ್ಲಿಕಾರ್ಜುನ ಬೆಟ್ಟದ ಅಭಿವೃದ್ಧಿಗೆ ಬದ್ಧನಾಗಿದ್ದೇನೆ ಎಂದರು.

ಇದೇ ವೇಳೆ ಗ್ರಾಮಸ್ಥರು ಬೆಟ್ಟದ ಸುತ್ತಮುತ್ತ ಅಕ್ರಮ ಕಲ್ಲು ಗಣಿಗಾರಿಕೆ ನಡೆಯುತ್ತಿದ್ದು, ಅದನ್ನು ತಡೆಯುವಂತೆ ಸಂಸದರಿಗೆ ಮನವಿ ಸಲ್ಲಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಯದುವೀರ್ ಈ ಸಂಬಂಧ ಪರಿಶೀಲನೆ ನಡೆಸಿ, ಪರಿಸರ ಸೂಕ್ಷ್ಮ ವಲಯವನ್ನು ಕಾಪಾಡುವ ನಿಟ್ಟಿನಲ್ಲಿ ಸೂಕ್ತ ಕ್ರಮ ವಹಿಸುವ ಭರವಸೆ ನೀಡಿದರು.

ಶುಭಾಶಯ: ಬೆಳಕಿನ ಹಬ್ಬ ದೀಪಾವಳಿ ನಾಡಿನ ಪ್ರತಿಯೊಬ್ಬರಿಗೂ ಸುಖ, ಶಾಂತಿ, ಸಮೃದ್ಧಿ ತರಲಿ. ನಾಡು ಸದಾ ಸುಭಿಕ್ಷವಾಗಿರಲಿ ಎಂದು ಸಂಸದ ಯದುವೀರ್ ಶುಭ ಕೋರಿದರು. ಸಂಸದರು ಬೆಟ್ಟ ಹತ್ತುವ ಸಂದರ್ಭ ಭಕ್ತರು ಅವರೊಂದಿಗೆ ಸೆಲ್ಫಿ ಕ್ಲಿಕ್ಕಿಸಿಕೊಳ್ಳಲು ಮುಗಿ ಬೀಳುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಬಳಿಕ ತಾಳು ಬೆಟ್ಟದ ಗೋಪುರದ ಬಳಿ ಗಾವಡಗೆರೆ ನಟರಾಜ ಸ್ವಾಮೀಜಿ ಏರ್ಪಡಿಸಿದ್ದ ಅನ್ನದಾಸೋಹ ಉದ್ಘಾಟಿಸಿ ಮಾತನಾಡಿದ ಸಂಸದ ಯದುವೀರ್, ಗಾವಡಗೆರೆ ಮಠದ ನಟರಾಜ ಸ್ವಾಮೀಜಿ ಅನ್ನದಾಸೋಹಕ್ಕೆ ಹೆಸರಾದ ಶ್ರೀಗಳು. ಅವರ ಈ ಕಾರ್ಯ ಇದೇ ರೀತಿ ಮುಂದುವರೆಯಲಿ ಎಂದರು.

ಇದೇ ವೇಳೆ ಮಲ್ಲಿಕಾರ್ಜುನಸ್ವಾಮಿ ಜಾತ್ರಾ ರಥೋತ್ಸವಕ್ಕೆ 2 ರಥಗಳನ್ನು ದಾನ ನೀಡಿದ ಅರಕಲಗೂಡು ತಾಲೂಕಿನ ಬೆಮ್ಮತ್ತಿ ಗ್ರಾಮದ ಸುರೇಶ್ ಅವರನ್ನು ಸಂಸದ ಯದುವೀರ್ ಸನ್ಮಾನಿಸಿದರು. ಚನ್ನಬಸವ ದೇಶಿಕೇಂದ್ರ ಸ್ವಾಮೀಜಿ, ಬಿಜೆಪಿ ತಾಲೂಕು ಅಧ್ಯಕ್ಷ ರಾಜೇಂದ್ರ, ಮೈಮಲ್ ಮಾಜಿ ಅಧ್ಯಕ್ಷ ಪಿ.ಎಂ.ಪ್ರಸನ್ನ, ಮುಖಂಡರಾದ ಐಲಾಪುರ ರಾಮು, ಕುಮಾರ್ ಎಂ.ಎನ್. ಗಾವಡಗೆರೆ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಶಿಲ್ಪ, ಪ್ರಾಧ್ಯಾಪಕರಾದ ಕೆ.ಸಿ.ಬಸವರಾಜ್, ಎಂ.ಎಂ. ರಾಜೇಗೌಡ, ಲೋಕಪಾಲಯ್ಯ, ಎಂ.ಎನ್. ಚಂದ್ರಶೇಖರ್, ರಾಜು, ಕೂರ್ಗಲ್ ಶಿವಕುಮಾರ ಸ್ವಾಮಿ, ಶಾಂತಕುಮಾರ್, ಮಂಜುನಾಥ್, ಗ್ರಾಮಸ್ಥರಾದ ಪತ್ರಕರ್ತ ಶಿವದೇವ್, ರಾಜೇಂದ್ರ, ಮಹಾದೇವಪ್ಪ, ಮಂಜು ನಾಥ್, ರುದ್ರೇಶ್, ಬೆಟ್ಟದಪುರ ಗ್ರಾಮಸ್ಥರು ಹಾಗೂ ಪಿರಿಯಾಪಟ್ಟಣ, ಅರಕಲಗೂಡು, ಕೆ.ಆರ್.ನಗರ, ಹುಣಸೂರು ತಾಲೂಕಿನ ಸಾವಿರಾರು ಭಕ್ತರು ಬೆಟ್ಟವನ್ನು ಹತ್ತಿ ಶ್ರೀಭ್ರಮರಂಬ ಸಮೇತ ಮಲ್ಲಿಕಾರ್ಜುನಸ್ವಾಮಿ ದರ್ಶನ ಪಡೆದು ಪ್ರಕೃತಿ ಸೌಂದರ್ಯ ಸವಿದರು.

ನ.8ಕ್ಕೆ ಕೋಟೆಯಲ್ಲಿ ಅದ್ಧೂರಿ ಕನಕ ಜಯಂತಿ

ಹೆಚ್.ಡಿ.ಕೋಟೆ, ಅ.21– ಪಟ್ಟಣದಲ್ಲಿ ನ.8ರಂದು ಕನಕ ಜಯಂತಿಯನ್ನು ಅದ್ಧೂರಿಯಾಗಿ ಆಚರಿಸಲಾಗುವುದು ಎಂದು ಕೋಟೆ ಮತ್ತು ಸರಗೂರು ತಾಲೂಕು ಕಾಳಿದಾಸ ಕುರುಬ ಜನಾಂಗದ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಮೊಳೆಯೂರು ಆನಂದ್ ತಿಳಿಸಿದರು.

ಪಟ್ಟಣದ ಕನಕ ಭವನದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ನ.8ರಂದು ಸರ್ಕಾರಿ ಕಾರ್ಯಕ್ರಮದ ಜೊತೆಗೆ ಕಾಳಿದಾಸ ಕುರುಬ ಜನಾಂಗದ ಕ್ಷೇಮಾಭಿವೃದ್ಧಿ ಸಂಘ ಸೇರಿದಂತೆ ವಿವಿಧ ಸಂಘಟನೆಗಳೊಂದಿಗೆ ಕನಕ ಭವನದಲ್ಲಿ ಸಮಾಜದ ಬಂಧುಗಳ ಜೊತೆಗೂಡಿ ಕನಕ ಜಯಂತಿಯನ್ನು ಅದ್ಧೂರಿಯಾಗಿ ಆಚರಿಸಲು ಸಭೆಯಲ್ಲಿ ತೀರ್ಮಾನಿಸಲಾಗಿದೆ. ಹೀಗಾಗಿ ಸಮಾಜದ ಬಂಧುಗಳು, ಮುಖಂಡರು, ಸಂಘದ ನಿರ್ದೇಶಕರು, ಪದಾಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ,



ಸಭೆಯಲ್ಲಿ ಮೊಳೆಯೂರು ಆನಂದ್ ಮಾತನಾಡಿದರು.

ಪಿಯುಸಿಯಲ್ಲಿ ಶೇ.85ಕ್ಕೂ ಹೆಚ್ಚು ಅಂಕಗಳಿಸಿದ ಕೋಟೆ, ಸರಗೂರು ತಾಲೂಕಿನ ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಗುವುದು. ಹೀಗಾಗಿ ವಿದ್ಯಾರ್ಥಿಗಳು ಅಗತ್ಯ ದಾಖಲೆಗಳೊಂದಿಗೆ ನ.5ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಎಸ್.ಬಿ.ಮಾದೇವೇಗೌಡ, ಬೀರೇಶ್ ಅವರ ಮೊ. 9916278122, 7975845165 ಸಂಪರ್ಕಿಸಬಹುದಾಗಿದೆ ಎಂದರು.

ಸಭೆಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಬಿ.ಮಾದೇವೇಗೌಡ, ಉಪಾಧ್ಯಕ್ಷ ನಾಗೇಗೌಡ, ಆರ್.ಎನ್.ಚಂದ್ರೇಗೌಡ, ಚೆನ್ನೇಗೌಡ, ಕುಮಾರೇಗೌಡ, ಸೋಮಣ್ಣ, ಪ್ರಕಾಶ್, ಸಂತೋಷ, ಸೋಮೇಗೌಡ, ರಾಜೇಗೌಡ, ಕುಮಾರ, ಶಿವಮಲ್ಲಪ್ಪ, ಕುಮಾರಸ್ವಾಮಿ, ಗಿರೀಶ, ಕಾರ್ತಿಕ್, ರಮೇಶ, ಬೀರೇಗೌಡ, ರಾಜೇಗೌಡ, ಮಲ್ಲೇಗೌಡ, ಸಿದ್ದಲಿಂಗೇಗೌಡ, ಗ್ರಾಪಂ ಸದಸ್ಯ ಮಲ್ಲೇಗೌಡ, ಚೆನ್ನಪ್ಪ, ಕುಮಾರ, ಶಿವಕುಮಾರ, ದೊಡ್ಡಪ್ಪಾಜಿಗೌಡ, ಮಲ್ಲಿಕಾರ್ಜುನ, ಶಿವಲಿಂಗೇಗೌಡ, ರವಿಕುಮಾರ್, ಬೀರೇಗೌಡ, ಮಹೇಶ್, ದೇವರಾಜು, ಅಪ್ಪಾಜಿಗೌಡ, ಕುಮಾರ, ರಾಮಲಿಂಗೇಗೌಡ, ಎಂ.ಜೆ. ಪ್ರಕಾಶ್, ರಾಜೇಶ್, ಸಿದ್ದರಾಜು, ರಾಜು, ಇತರರು ಹಾಜರಿದ್ದರು.

ನಾಡಗೀತೆಗೆ ನೂರು ವರ್ಷ ಹಿನ್ನೆಲೆ

5 ಸಾವಿರ ವಿದ್ಯಾರ್ಥಿಗಳಿಂದ ಸಾಮೂಹಿಕ ನಾಡಗೀತೆ ಗಾಯನ

ಕನ್ನಡ ರಾಜ್ಯೋತ್ಸವ ಪೂರ್ವಭಾವಿ ಸಭೆಯಲ್ಲಿ ತೀರ್ಮಾನ

ಹುಣಸೂರು, ಅ.21– ರಾಷ್ಟ್ರಕವಿ ಕುವೆಂಪು ರಚಿಸಿದ ನಾಡಗೀತೆಗೆ ನೂರು ವರ್ಷ ಸಂದ ಹಿನ್ನೆಲೆಯಲ್ಲಿ ನ.1ರ ಕನ್ನಡ ರಾಜ್ಯೋತ್ಸವದಂದು 5 ಸಾವಿರ ವಿದ್ಯಾರ್ಥಿಗಳಿಂದ ಸಾಮೂಹಿಕ ನಾಡಗೀತೆ ಗಾಯನ ನಡೆಸಲು ಪೂರ್ವಭಾವಿ ಸಭೆಯಲ್ಲಿ ತೀರ್ಮಾನಿಸಲಾಯಿತು.

ನಗರದ ಉಪವಿಭಾಗಾಧಿಕಾರಿ ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಕಸಾಪ ತಾಲೂಕು ಅಧ್ಯಕ್ಷ ಮಹದೇವ್, ರಾಷ್ಟ್ರಕವಿ ಕುವೆಂಪು ರಚಿಸಿದ ನಾಡಗೀತೆಯೆಂದು ಗುರುತಿಸಲ್ಪಟ್ಟಿರುವ ಜಯ ಭಾರತ ಜನನಿಯ ತನುಜಾತೆ, ಜಯಹೇ ಕರ್ನಾಟಕ ಮಾತೆ ಎಂಬ ಕನ್ನಡಮ್ಮನ ಗೀತೆಗೆ 100 ವರ್ಷಗಳ ಸಂಭ್ರಮ ಇದಾಗಿದೆ. ಹೀಗಾಗಿ ಕುವೆಂಪು ಅವರಿಗೆ ಮತ್ತು ನಾಡಗೀತೆಗೆ ಗೌರವ ಸಮರ್ಪಿಸುವ ನಿಟ್ಟಿನಲ್ಲಿ ನ.1 ರಂದು ಬೆಳಗ್ಗೆ



ಉಪವಿಭಾಗಾಧಿಕಾರಿ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ನಡೆಯಿತು.

ನಗರದ ಮುನೇಶ್ವರ ಕಾವಲ್ ಮೈದಾನದಲ್ಲಿ ನಡೆಯುವ ಕನ್ನಡ ರಾಜ್ಯೋತ್ಸವದ ಧ್ವಜಾರೋಹಣದ ವೇಳೆ 5 ಸಾವಿರ ವಿದ್ಯಾರ್ಥಿಗಳಿಂದ ನಾಡಗೀತೆ ಸಾಮೂಹಿಕ ಗಾಯನ ಕಾರ್ಯಕ್ರಮ ಆಯೋಜಿಸಬೇಕು ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಅಧ್ಯಕ್ಷರೂ ಆದ ತಹಸೀಲ್ದಾರ್ ಜೆ.ಮಂಜುನಾಥ್, ಕ್ಷೇತ್ರ ಶಿಕ್ಷಣಾಧಿಕಾರಿಗಳು ಜವಾಬ್ದಾರಿ ಹೊತ್ತು ಸಾಮೂಹಿಕ ಗಾಯನ ನಡೆಸಿಕೊಡಬೇಕು ಎಂದಾಗ ಬಿಇಓ ಮಹದೇವು ನಡೆಸಿಕೊಡುವುದಾಗಿ ತಿಳಿಸಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ಕುಮಾರ್ ಮಾತನಾಡಿ, ನಗರದ ಆಟೋ ಚಾಲಕರ ಸಂಘ, ಲಾರಿ ಮಾಲೀಕರ ಸಂಘ, ವರ್ತಕರ ಸಂಘ ಹಾಗೂ ಹೋಟೆಲ್ ಮಾಲೀಕರ ಸಂಘದ ಪದಾಧಿಕಾರಿಗಳನ್ನು ಕರೆಸಿ ಅವರ ಸಲಹೆ ಪಡೆಯಬೇಕು ಎಂದು ಸಲಹೆ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಶಿರಸ್ತೇದಾರ್ ಶ್ರೀಪಾದ್ ನಲವತ್ತ ವಾಡೇಕರ್ ಪ್ರತ್ಯೇಕ ಸಭೆ ಕರೆದು ಚರ್ಚಿಸಲಾಗುವುದು ಎಂದರು.

ಕನ್ನಡ ರಾಜ್ಯೋತ್ಸವದಂದು ತಾಯಿ ಭುವನೇಶ್ವರಿ ಮೆರವಣಿಗೆ ನಗರದ ರಂಗನಾಥ ಬಡಾವಣೆಯಿಂದ ಆರಂಭಗೊಳ್ಳಲಿದ್ದು, ಕಲ್ಕುಣಿಕೆ ಸೇತುವೆ ಮೂಲಕ ಸಂವಿಧಾನ ವೃತ್ತ ಬಜಾರ್ ರಸ್ತೆ ಜೆಎಲ್‌ಬಿ ರಸ್ತೆ, ಎಸ್‌ಜೆ ರಸ್ತೆ ಮೂಲಕ ಮುನೇಶ್ವರ ಕಾವಲ್ ಮೈದಾನ ತಲುಪಲಿದೆ. ಮೆರವಣಿಗೆಯಲ್ಲಿ ಜಾನಪದ ಕಲಾತಂಡಗಳು, ವಿವಿಧ ಇಲಾಖೆಗಳ ಸ್ತಬ್ಧ ಚಿತ್ರಗಳು ಪಾಲ್ಗೊಳ್ಳಲಿವೆ ಎಂದು ತಹಸೀಲ್ದಾರ್ ಮಂಜುನಾಥ್ ತಿಳಿಸಿದರು.

ಈ ವೇಳೆ ತಾಪಂ ಇಓ ಕೆ.ಹೊಂಗಯ್ಯ, ಮುಖಂಡರಾದ ಚಿಕ್ಕಣ್ಣ, ರಾಮೇಗೌಡ, ಭೂ ಮಾಪನಾ ಇಲಾಖೆ ಸಹಾಯಕ ನಿರ್ದೇಶಕ ಜಗನ್ನಾಥ್, ಟಿಹೆಚ್‌ಓ ಡಾ.ದರ್ಶನ್, ಆರೋಗ್ಯ ಶಿಕ್ಷಣಾಧಿಕಾರಿ ರಾಜೇಶ್ವರಿ, ಎಸ್. ಜಯರಾಂ, ಪಿ.ಆರ್.ರಾಚಪ್ಪ ಮತ್ತಿತರರಿದ್ದರು.

ನಂಜುಂಡೇಶ್ವರನ ಪ್ರಸಾದ ಸ್ವೀಕರಿಸಿದ ಹೆಚ್‌ಡಿಡಿ



ಜೆಡಿಎಸ್ ಮುಖಂಡರು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಆರೋಗ್ಯ ವಿಚಾರಿಸಿದರು.

ತಿ.ನರಸೀಪುರ, ಅ.21– ಮಾಜಿ ಪ್ರಧಾನಿ, ಜೆಡಿಎಸ್ ವರಿಷ್ಠ ಹೆಚ್.ಡಿ. ದೇವೇಗೌಡರು ಶೀಘ್ರ ಗುಣಮುಖರಾಗಲಿ ಎಂದು ಪ್ರಾರ್ಥಿಸಿ ಜೆಡಿಎಸ್ ಮುಖಂಡರು ನಂಜನಗೂಡಿನ ಶ್ರೀಕಂಠೇಶ್ವರನಿಗೆ ಅಭಿಷೇಕ ಸೇರಿದಂತೆ ವಿಶೇಷ ಪೂಜೆ ಸಲ್ಲಿಸಿ, ದೇವೇಗೌಡರಿಗೆ ಪ್ರಸಾದ ತಲುಪಿಸಿದರು.

ಮೈಸೂರು ಜಿಲ್ಲಾ ಜೆಡಿಎಸ್ ಅಧ್ಯಕ್ಷ ಎನ್.ನರಸಿಂಹಸ್ವಾಮಿ ನೇತೃತ್ವದಲ್ಲಿ ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರು ನಂಜುಂಡೇಶ್ವರನಿಗೆ ವಿಶೇಷ ಪೂಜೆ ಸಲ್ಲಿಸಿ, ರೈತ, ಜನಪರ ನಾಯಕ ಹೆಚ್.ಡಿ.ದೇವೇಗೌಡರು ಶೀಘ್ರ ಗುಣಮುಖರಾಗಿ ಶೀಘ್ರ ಸಕ್ರೀಯ ರಾಜಕಾರಣಕ್ಕೆ ಮರಳುವಂತಾಗಲಿ ಎಂದು ಪ್ರಾರ್ಥಿಸಿದರು.

ನಂತರ ಪ್ರಸಾದದೊಂದಿಗೆ ಬೆಂಗಳೂರಿನ ಪದ್ಮನಾಭನಗರದ ನಿವಾಸದಲ್ಲಿ ವಿಶ್ರಾಂತಿ ಪಡೆಯುತ್ತಿರುವ ಹೆಚ್.ಡಿ. ದೇವೇಗೌಡರನ್ನು ಭೇಟಿ ಮಾಡಿ ಪ್ರಸಾದ ತಲುಪಿಸಿ ಬೇಗ ಗುಣಮುಖರಾಗಿ ಎಂದು ವಿನಂತಿಸಿದರು.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಮಾತನಾಡಿ, ಪಕ್ಷ ಕಟ್ಟಿ ಬೆಳೆಸಿದ ನಿಮ್ಮಂತಹ ನಾಯಕರು, ಮುಖಂಡರು ಹಾಗೂ ರಾಜ್ಯದ ಜನರ ಆರೈಕೆ ಮತ್ತು ಕೋರಿಕೆಗಳಿಂದ ಗುಣಮುಖನಾಗಿ ಇನ್ನಷ್ಟು ದಿನಗಳ ಕಾಲ ಜನರ ಸೇವೆ ಮಾಡುತ್ತೇನೆ ಎಂದರು.

ಈ ವೇಳೆ ಮೈಸೂರು ಜಿಲ್ಲಾ ಜೆಡಿಎಸ್ ಉಪಾಧ್ಯಕ್ಷ ಟಿ.ಜಿ.ಆದಿಶೇಷನ್, ನಂಜನಗೂಡು ತಾಲೂಕು ಜೆಡಿಎಸ್ ಅಧ್ಯಕ್ಷ ಮಹಾದೇವಸ್ವಾಮಿ, ರಾಜ್ಯ ಕಮಿಟಿ ಸದಸ್ಯ ಸತೀಶ್, ರವಿ ಸೇರಿದಂತೆ ಪಕ್ಷದ ಮುಖಂಡರು, ಕಾರ್ಯಕರ್ತರು ಪೂಜೆ ವೇಳೆ ಉಪಸ್ಥಿತರಿದ್ದರಲ್ಲದೆ, ದೇವೇ ಗೌಡರನ್ನು ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು.

ದೀಪಾವಳಿ ಹಬ್ಬದ ಅಮಾವಾಸ್ಯೆ ಹಿನ್ನೆಲೆ

ಭೀಮನಕೊಲ್ಲಿ ಮಾದಪ್ಪನ ಸನ್ನಿಧಿಗೆ ಹರಿದು ಬಂದ ಭಕ್ತಸಾಗರ

ಹೆಚ್.ಡಿ.ಕೋಟೆ, ಅ.21– ದೀಪಾವಳಿ ಹಬ್ಬದ ಅಮಾವಾಸ್ಯೆ ಪ್ರಯುಕ್ತ ಮಂಗಳವಾರ ತಾಲೂಕಿನ ಭೀಮನಕೊಲ್ಲಿ ಶ್ರೀಮಹದೇಶ್ವರಸ್ವಾಮಿ ದೇವಾಲಯಕ್ಕೆ ಭಕ್ತಸಾಗರ ಹರಿದು ಬಂದಿತ್ತು.



ದೀಪಾವಳಿ ಅಂಗವಾಗಿ ಮುಂಜಾನೆಯಿಂದಲೇ ತಾಲೂಕು ಸೇರಿದಂತೆ ರಾಜ್ಯದ ವಿವಿಧೆಡೆಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು ಮಹದೇಶ್ವರಸ್ವಾಮಿ ದರ್ಶನ ಪಡೆದು, ವಿಶೇಷ ಪೂಜೆ ಸಲ್ಲಿಸಿ ದೇವರ ಕೃಪೆಗೆ ಪಾತ್ರರಾದರು.

ಅಮಾವಾಸ್ಯೆ ಅಂಗವಾಗಿ ದೇವಾಲಯದಲ್ಲಿ ಮುಂಜಾನೆಯಿಂದಲೇ ಮಹದೇಶ್ವರಸ್ವಾಮಿಗೆ ರುದ್ರಾಭಿಷೇಕ, ಬಿಲ್ವಾರ್ಚನೆ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳನ್ನು ನೆರವೇರಿಸಿ, ಭಕ್ತರ ದರ್ಶನಕ್ಕೆ ಅನುವು ಮಾಡಿಕೊಡಲಾಯಿತು. ಈ ವೇಳೆ ಆಗಮಿಸಿದ್ದ ಸಾವಿರಾರು ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದು ಪುನೀತರಾದರು. ಅಲ್ಲದೇ ಮಹದೇಶ್ವರನ ಹುಲಿ ವಾಹನೋತ್ಸವ ನೆರವೇರಿಸಿದರು. ತಾಲೂಕಿನ ಮಳಲಿ ಗ್ರಾಮಸ್ಥರು ಭಕ್ತರಿಗೆ ಅನ್ನ ಸಂತರ್ಪಣೆ ಕೈಗೊಂಡಿದ್ದರು.

ದೇವಾಲಯಕ್ಕೆ ಆಗಮಿಸುವ ಭಕ್ತರಿಗಾಗಿ ದೇವಸ್ಥಾನದ ಕಮಿಟಿ ವತಿಯಿಂದ ಕಬಿನಿ ಹಿನ್ನೀರಿನಲ್ಲಿ ಬೋಟ್ ವ್ಯವಸ್ಥೆ, ಕೆಎಸ್‌ಆರ್‌ಟಿಸಿ ವತಿಯಿಂದ ಬಸ್ ವ್ಯವಸ್ಥೆ ಕೈಗೊಂಡು ದೇವರ ದರ್ಶನಕ್ಕೆ ತೊಂದರೆಯಾಗದಂತೆ ಸೂಕ್ತ ವ್ಯವಸ್ಥೆ ಕೈಗೊಳ್ಳಲಾಗಿತ್ತು. ಅಲ್ಲದೇ ಭಕ್ತರ ಅನುಕೂಲಕ್ಕಾಗಿ ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ, ವಾಹನ ಪಾರ್ಕಿಂಗ್ ಸೇರಿದಂತೆ ಅಗತ್ಯ ಮೂಲ ಸೌಕರ್ಯ ಕೈಗೊಳ್ಳಲಾಗಿತ್ತು. ಇನ್ನು ದೇವಾಲಯದ ಸುತ್ತಮುತ್ತ ತೆರೆದಿದ್ದ ಮಿಠಾಯಿ ಅಂಗಡಿಗಳು, ಹೂ ಅಂಗಡಿಗಳು ಸೇರಿದಂತೆ ಇನ್ನಿತರ ಅಂಗಡಿ ಮುಂಗಟ್ಟುಗಳ ವರ್ತಕರು ಭರ್ಜರಿ ವ್ಯಾಪಾರ ನಡೆಸಿದರು. ಯಾವುದೇ ಅಹಿತಕರ ಘಟನೆ ನಡೆಯದಂತೆ ಹೆಚ್.ಡಿ.ಕೋಟೆ ಪೊಲೀಸ್ ಠಾಣೆ ವತಿಯಿಂದ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿತ್ತು.

ಈ ವೇಳೆ ದೇವಸ್ಥಾನದ ಕಮಿಟಿ ಅಧ್ಯಕ್ಷ ಎಂ.ಪಿ.ಎಸ್. ಮೂರ್ತಿ, ಕಾರ್ಯದರ್ಶಿ ಎಂ.ಎನ್.ಜಗದೀಶ್, ಸದಸ್ಯರಾದ ದಯಾನಂದ, ಸೊಸೈಟಿ ಬಸವಣ್ಣ, ಗುರುಮಲ್ಲಪ್ಪ, ಗುರು ಮೂರ್ತಿ, ಜೆ.ಪಿ.ಶಿವರಾಜಪ್ಪ, ಬಾಡಗ ನಂಜಪ್ಪ, ಸುಬ್ರಹ್ಮಣ್ಯ ಹಾಜರಿದ್ದರು.

ಉಕ್ಕಲಗೆರೆಯಲ್ಲಿ ಚಿರತೆ ಪ್ರತ್ಯಕ್ಷ: ಆತಂಕದಲ್ಲಿ ಗ್ರಾಮಸ್ಥರು



ತಿ.ನರಸೀಪುರ, ಅ.21– ತಾಲೂಕಿನ ಉಕ್ಕಲಗೆರೆ ಗ್ರಾಮದಲ್ಲಿ ಸೋಮವಾರ ರಾತ್ರಿ ಚಿರತೆ ಪ್ರತ್ಯಕ್ಷವಾಗಿದ್ದು, ಗ್ರಾಮಸ್ಥರು ಆತಂಕಗೊಂಡಿದ್ದಾರೆ.

ಗ್ರಾಮದಿಂದ ಎಂ.ಎಲ್. ಹುಂಡಿ ಗ್ರಾಮಕ್ಕೆ ತೆರಳುವ ರಸ್ತೆಯಲ್ಲಿರುವ ರಾಜೇಶ್ ಅವರ ಮನೆ ಎದುರು ಚಿರತೆ ಕಾಣಿಸಿಕೊಂಡಿದೆ ಎನ್ನಲಾಗಿದೆ. ಕಳೆದ 3 ತಿಂಗಳಿಂದ 4ನೇ ಬಾರಿಗೆ ಚಿರತೆ ಕಾಣಿಸಿಕೊಳ್ಳುತ್ತಿದೆ. ಕಳೆದ ತಿಂಗಳು ರಾಜೇಶ್ ಅವರ ಪತ್ನಿ ಮನೆ ಎದುರು ಕೆಲಸ ಮಾಡುತ್ತಿದ್ದ ವೇಳೆ ದಿಢೀರ್ ಕಾಣಿಸಿಕೊಂಡಿದ್ದ ಚಿರತೆ ನಾಯಿಯನ್ನು ಹೊತ್ತೊಯ್ದಿತ್ತು. ಇದೀಗ ಸೋಮವಾರ ರಾತ್ರಿ ಮತ್ತೆ ಕಾಣಿಸಿಕೊಂಡಿರುವ ಚಿರತೆ ಮನೆಯ ಎದುರಿನ ಬೋನಿನಲ್ಲಿ ಕೂಡ ಹಾಕಿದ್ದ ನಾಯಿಯನ್ನು ಹೊತ್ತೊಯ್ದಿದೆ.

ಗ್ರಾಮಸ್ಥರ ಆಕ್ರೋಶ: ಗ್ರಾಮದಲ್ಲಿ ಚಿರತೆ ಹಾವಳಿ ಹೆಚ್ಚಾಗಿದೆ. ಕಳೆದ ಕೆಲ ತಿಂಗಳಿಂದ ಕಾಣಿಸಿಕೊಳ್ಳುತ್ತಿರುವ ಸೆರೆ ಹಿಡಿಯುವಂತೆ ಅರಣ್ಯ ಇಲಾಖೆ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಇದರಿಂದ ನಮ್ಮ ಜಮೀನುಗಳಿಗೆ ತೆರಳಿ ಕೆಲಸ ಮಾಡಲು ಭಯ ಪಡುವಂತಾಗಿದೆ. ಅರಣ್ಯ ಇಲಾಖೆ ಅಧಿಕಾರಿಗಳು ಚಿರತೆ ಸೆರೆಗೆ ಬೋನಿಟ್ಟಿದ್ದಾರೆಯೇ ಹೊರತು ಅದರ ಸೆರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಕಳೆದ 2 ವರ್ಷಗಳ ಹಿಂದೆ ಉಕ್ಕಲಗೆರೆ ಗ್ರಾಮದಲ್ಲಿ ಓರ್ವ ಯುವಕ, ಪಕ್ಕದ ಕೆಬ್ಬೇಹುಂಡಿಯಲ್ಲಿ ಮಹಿಳೆ ಹಾಗೂ ಹೊರಳಹಳ್ಳಿಯಲ್ಲಿ ಓರ್ವ ವಿದ್ಯಾರ್ಥಿಯನ್ನು ಚಿರತೆ ಬಲಿ ಪಡೆದಿತ್ತು. ಇದೀಗ ಮತ್ತೆ ಚಿರತೆ ಕಾಣಿಸಿಕೊಳ್ಳುತ್ತಿದ್ದು, ಮತ್ತೊಂದು ಪ್ರಾಣ ಹೋಗುವ ಮುನ್ನಾ ಅರಣ್ಯ ಇಲಾಖೆ ಅಧಿಕಾರಿಗಳು ಚಿರತೆ ಸೆರೆಗೆ ಮುಂದಾಗಬೇಕು. ಇಲ್ಲದಿದ್ದರೇ ಮುಂದಿನ ದಿನಗಳಲ್ಲಿ ಉಗ್ರ ಪ್ರತಿಭಟನೆ ಮಾಡಲಾಗುವುದು ಎಂದು ಉಕ್ಕಲಗೆರೆ ಗ್ರಾಮಸ್ಥರು ಎಚ್ಚರಿಕೆ ನೀಡಿದ್ದಾರೆ.

ಅಕ್ರಮವಾಗಿ ಸಾಗಿಸುತ್ತಿದ್ದ ಜಾನುವಾರುಗಳ ರಕ್ಷಣೆ

ನಂಜನಗೂಡು, ಅ.21– ಬೊಲೆರೋ ವಾಹನದಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ ಜಾನುವಾರುಗಳನ್ನು ರಕ್ಷಿಸುವಲ್ಲಿ ಹುಲ್ಲಹಳ್ಳಿ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ. ಮೈಸೂರು ತಾಲೂಕಿನ ಜಯಪುರ ಪೊಲೀಸರಿಗೆ ಅಕ್ರಮವಾಗಿ ಜಾನುವಾರುಗಳನ್ನು ಸಾಗಿಸುತ್ತಿರುವ ಬಗ್ಗೆ ಖಚಿತ ಮಾಹಿತಿ ಬಂದಿದ್ದು, ಎಸ್‌ಐ ಹೇಮಾವತಿ ಅವರು ಬೊಲೆರೋ ವಾಹನವನ್ನು ಸಿನಿಮೀಯ ರೀತಿ ಚೇಸ್ ಮಾಡಿದ್ದಾರೆ. ಈ ವೇಳೆ ಅತಿ ವೇಗವಾಗಿ ಬೊಲೆರೋ ಚಾಲನೆ ಮಾಡುತ್ತಿದ್ದ ಖದೀಮರು ಹುಲ್ಲಹಳ್ಳಿ ರಸ್ತೆ ಕಡೆಗೆ ತಿರುಗಿದ್ದಾರೆ. ಕೂಡಲೇ ಹೇಮಾವತಿ ಅವರು ಹುಲ್ಲಹಳ್ಳಿ ಎಸ್‌ಐ ಚೇತನ್ ಕುಮಾರ್ ಅವರಿಗೆ ಮಾಹಿತಿ ನೀಡಿದ್ದು, ಅವರು ತಮ್ಮ ಸಿಬ್ಬಂದಿಗಳೊಂದಿಗೆ ಜಾನುವಾರುಗಳನ್ನು ಸಾಗಿಸುತ್ತಿದ್ದ ವಾಹನ ಹಿಡಿಯಲು ಕಾರ್ಯಾಚರಣೆಗೆ ಮುಂದಾದಾಗ ಅಹಲ್ಯಾ ಗ್ರಾಮದ ಬಳಿ ಜಾನುವಾ ರುಗಳು ತುಂಬಿದ್ದ ಬೊಲೆರೋ



ಹುಲ್ಲಹಳ್ಳಿ ಪೊಲೀಸರು ಜಾನುವಾರುಗಳನ್ನು ವಶಕ್ಕೆ ಪಡೆದಿರುವುದು.

ಪಲ್ಟಿಯಾಗಿದ್ದು, ಅದರಲ್ಲಿದ್ದ ದುಷ್ಕರ್ಮಿಗಳು ಸ್ಥಳದಿಂದ ಪರಾರಿಯಾಗಿದ್ದಾರೆ. ಈ ವೇಳೆ ಸ್ಥಳಕ್ಕಾಗಮಿಸಿದ ಪೊಲೀಸರು ಸ್ಥಳೀಯರ ಸಹಾಯದಿಂದ 20 ಕರುಗಳನ್ನು ರಕ್ಷಿಸಿ ಮೈಸೂರಿನ ಪಿಂಜರಾ ಪೋಲ್‌ಗೆ ರವಾನಿಸಿ ಬೊಲೆರೋ ವಾಹನ ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ಹುಲ್ಲಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪೋಷಕರು ಮಕ್ಕಳನ್ನು ಜೋಪಾನವಾಗಿ ನೋಡಿಕೊಳ್ಳಿ

ಮೂವರು ಮಕ್ಕಳ ದಾರುಣ ಸಾವು ನೋವುಂಟು ಮಾಡಿದೆ: ಮಾಜಿ ಸಚಿವ ಸಾ.ರಾ.ಮಹೇಶ್

ಕೆ.ಆರ್.ನಗರ, ಅ.21– ಸಾಲಿಗ್ರಾಮದಲ್ಲಿ ನಿನ್ನೆ ನಡೆದ ಮುಸ್ಲಿಂ ಸಮಾಜದ ಮೂವರು ಮಕ್ಕಳ ದಾರುಣ ಸಾವು ನೋವುಂಟು ಮಾಡಿದೆ. ಪೋಷಕರು ರಜೆ ವೇಳೆ ತಮ್ಮ ಮಕ್ಕಳನ್ನು ಜೋಪಾನವಾಗಿ ನೋಡಿಕೊಳ್ಳಬೇಕು. ಇಂತಹ ಅವಘಡಗಳು ಸಂಭವಿಸದಂತೆ ಎಚ್ಚರ ವಹಿಸುವಂತೆ ಮಾಜಿ ಸಚಿವ ಸಾ.ರಾ.ಮಹೇಶ್ ಸಲಹೆ ನೀಡಿದರು.

ಪಟ್ಟಣದ 1ನೇ ವಾರ್ಡ್‌ನ ಮಧುವನಹಳ್ಳಿ ಬಡಾವಣೆಯಲ್ಲಿರುವ ಶ್ರೀವೀರಭದ್ರಸ್ವಾಮಿ ದೇವಾಲಯದಲ್ಲಿ ದೀಪಾವಳಿ ಹಬ್ಬದ ಕಾರ್ತಿಕ ಮಾಸದ ಅಂಗವಾಗಿ ಶ್ರೀಮಲೆ ಮಹದೇಶ್ವರಸ್ವಾಮಿ ಪೂಜಾ ಮಹೋತ್ಸವ ಹಾಗೂ ಅನ್ನ ದಾಸೋಹಕ್ಕೆ ಸಿಹಿ ಬಡಿಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಕೆ.ಆರ್.ಪೇಟೆಯ ನವೋದಯ ಶಾಲೆಯಲ್ಲಿ ಓದುತ್ತಿದ್ದ ಈ ಮೂವರು ಪ್ರತಿಭಾವಂತ ವಿದ್ಯಾರ್ಥಿಗಳು ದೀಪಾವಳಿ ಹಬ್ಬದ ಪ್ರಯುಕ್ತ ಶಾಲೆಗೆ ರಜೆ ಇದ್ದ ಕಾರಣ ತಮ್ಮ ಊರಾದ ಸಾಲಿಗ್ರಾಮಕ್ಕೆ ಬಂದಿದ್ದು, ಸ್ನೇಹಿತರಲ್ಲಾ ಒಟ್ಟುಗೂಡಿ ಕಾಲುವೆಯಲ್ಲಿ ಈಜಲು ಹೋಗಿ ದುರಾದೃಷ್ಟವಶಾತ್ ಮೃತಪಟ್ಟಿದ್ದಾರೆ. ಈ ವಿಷಯ ತಿಳಿದು ಮನಸ್ಸಿಗೆ ಬಹಳ ನೋವಾಗಿದೆ. ಅವರ ಕುಟುಂಬಗಳಿಗೆ ದೇವರು ದುಃಖ ಭರಿಸುವ ಶಕ್ತಿ ನೀಡಲಿ ಹಾಗೂ ಪೋಷಕರು ಮಕ್ಕಳ ಬಗ್ಗೆ ಎಚ್ಚರಿಕೆಯಿಂದ ಇರಬೇಕೆಂದು ಹೇಳಿದರು.



ಮಲೆ ಮಹದೇಶ್ವರಸ್ವಾಮಿ ಪೂಜಾ ಮಹೋತ್ಸವ ಹಾಗೂ ಅನ್ನ ದಾಸೋಹಕ್ಕೆ ಮಾಜಿ ಸಚಿವ ಸಾ.ರಾ.ಮಹೇಶ್ ಸಿಹಿ ಬಡಿಸುವ ಮೂಲಕ ಚಾಲನೆ ನೀಡಿದರು.

ರಾಜ್ಯದಲ್ಲಿ ವಿಪರೀತ ಮಳೆಯಾಗಿದ್ದು, ನದಿಗಳು ಮೈದುಂಬಿ ಹರಿಯುತ್ತಿವೆ. ಕೆರೆ ಕಟ್ಟೆಗಳು ತುಂಬಿವೆ. ನಾಲೆಗಳಲ್ಲಿ ನೀರು ರಭಸವಾಗಿ ಹರಿಯುತ್ತಿದೆ. ಆದ್ದರಿಂದ ಪೋಷಕರು ಯಾವುದೇ ಕಾರಣಕ್ಕೂ ನದಿ, ಕೆರೆಕಟ್ಟೆ ಹಾಗೂ ನಾಲೆಗಳಲ್ಲಿ ಈಜಲು ಮಕ್ಕಳನ್ನು ಕಳುಹಿಸಬಾರದು. ರಜೆ ವೇಳೆ ಮಕ್ಕಳ ಮೇಲೆ ತೀವ್ರ ನಿಗಾ ವಹಿಸಿ ಎಂದು ಮನವಿ ಮಾಡಿದರು.

ದೀಪಾವಳಿ ಕತ್ತಲೆಯನ್ನು ಹೋಗಲಾಡಿಸಿ ಬೆಳಕನ್ನು ಆನಂದಿಸುವ ಹಬ್ಬ. ಜೀವನದಲ್ಲಿ ನಕಾರಾತ್ಮಕ ಅಂಶಗಳನ್ನು ದೂರ ಮಾಡಿ, ಸಕಾರಾತ್ಮಕ ಅಂಶಗಳನ್ನು ಸ್ವಾಗತಿಸುವ ಕ್ಷಣ. ದೀಪಾವಳಿ ಹಬ್ಬ ಕತ್ತಲೆಯಿಂದ ಬೆಳಕಿನೆಡೆಗೆ ಮಾನವನ ಪಯಣವನ್ನು ಸೂಚಿಸುತ್ತದೆ ಎಂದರು. ರುದ್ರೇಶ್, ಬಂಗಾರಿ ಮತ್ತು ಸ್ನೇಹಿತರೆಲ್ಲರೂ ಒಗ್ಗೂಡಿ ಅನ್ನ ದಾಸೋಹ ಕಾರ್ಯಕ್ರಮ ಮಾಡುತ್ತಿದ್ದು, ಎಲ್ಲರಿಗೂ ದೀಪಾವಳಿ ಹಬ್ಬದ ಶುಭಾಶಯಗಳನ್ನು ಕೋರಿದರು.

ಈ ವೇಳೆ ಪುರಸಭಾ ಸದಸ್ಯರಾದ ಉಮೇಶ್, ಸರೋಜಾ, ನಗರ ಜೆಡಿಎಸ್ ಕಾರ್ಯದರ್ಶಿ ಕೆ.ಎಸ್.ರುದ್ರೇಶ್, ಪುರಸಭಾ ಮಾಜಿ ಅಧ್ಯಕ್ಷ ಕಾಂತರಾಜು, ಶಿವಕುಮಾರ್, ಎ.ಟಿ. ತಿಮ್ಮಪ್ಪ ಮುಖಂಡರಾದ ರುದ್ರೇಶ್, ಬಂಗಾರಿ, ಘನತೆ ಕುಮಾರ್, ಶಿವಣ್ಣ, ಬಸವಣ್ಣ, ಮಹೇಶ್, ರಾಮನಾಥ್ ಇತರರಿದ್ದರು.

ಅ.26ಕ್ಕೆ, ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಶತೋತ್ತರ ದಶಮಾನೋತ್ಸವ

ಸರಗೂರು, ಅ.21– ಪಟ್ಟಣದ ಜೆಎಸ್‌ಎಸ್ ಶಾಲಾವರಣದಲ್ಲಿ ಅ.26 ರಂದು ಬೆಳಗ್ಗೆ 10.30ಕ್ಕೆ ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಶತೋತ್ತರ ದಶಮಾನೋತ್ಸವ, ಮೈಸೂರು ಚಾಮರಾಜನಗರ ಜಿಲ್ಲಾ ವೀರಶೈವ ಲಿಂಗಾಯತ ಮಠಾಧಿಪತಿಗಳ ಗೋಷ್ಠಿ ಹಾಗೂ ದೀಕ್ಷಾ ಸಂಸ್ಕಾರ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಆಯೋಜಿಸಲಾಗಿದೆ.



ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಘಟಕ, ಶ್ರೀ ರಾಜೇಂದ್ರ ಸ್ವಾಮೀಜಿಗಳ ಭಕ್ತ ಬಳಗ, ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಸರಗೂರು ಇವರ ಸಹಯೋಗದಲ್ಲಿ ನಡೆಯುವ ಕಾರ್ಯಕ್ರಮದ ಸಾನಿಧ್ಯವನ್ನು ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಹಿಸಲಿದ್ದಾರೆ. ಹಂಚೀಪುರ ಮಠದ ಚನ್ನಬಸವ ಸ್ವಾಮೀಜಿ, ದಡದಹಳ್ಳಿ ಮಠದ ಷಡಕ್ಷರ ಸ್ವಾಮೀಜಿ, ಪಡುವಲು ಮಠದ ಮಹದೇವ ಸ್ವಾಮೀಜಿ, ಹಂಚೀಪುರ ಕಿರಿಯ ತೋಂಟದಾರ್ಯ ಸ್ವಾಮೀಜಿ ಭಾಗವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದ ಯದುವೀರ್, ಸುನೀಲ್ ಬೋಸ್, ಸಚಿವ ಈಶ್ವರ್ ಖಂಡ್ರೆ, ಅರಣ್ಯ ವಸತಿ ಮತ್ತು ವಿಹಾರಧಾಮಗಳ ಅಧ್ಯಕ್ಷ ಅನಿಲ್, ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್, ಮಾಜಿ ಸಚಿವ ಶಿವಣ್ಣ, ಮಾಜಿ ಸಚಿವ ಚಿಕ್ಕಣ್ಣ, ಶ್ರೀರಾಜೇಂದ್ರ ಸ್ವಾಮಿಗಳ ಭಕ್ತ ಬಳಗದ ಗೌರವಾಧ್ಯಕ್ಷ ಡಿ.ಜಿ. ಶಿವರಾಜು, ಅಧ್ಯಕ್ಷ ಡಾ.ಮಹೇಶ್, ವೀರಭದ್ರಪ್ಪ, ಗಣಪತಿ, ಸುಧಾ ಮೃತ್ಯುಂಜಯಪ್ಪ ಇತರರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಜೆಎಸ್‌ಎಸ್ ವಿವಾಹ ವೇದಿಕೆಯ ನವೀಕೃತ ವೆಬ್‌ಸೈಟ್ ಲೋಕಾರ್ಪಣೆ



ಜೆಎಸ್‌ಎಸ್ ವಿವಾಹ ವೇದಿಕೆಯ ನವೀಕೃತ ವೆಬ್‌ಸೈಟ್ ಅನ್ನು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅನಾವರಣಗೊಳಿಸಿದರು.

ಮೈಸೂರು, ಅ. 21– ನೂತನ ಸಂಬಂಧಗಳನ್ನು ಬೆಸೆಯುಲು ಆಯ್ಕೆಗಳಿಗೆ ಅವಕಾಶ ಕಲ್ಪಿಸಲು ನವೀಕೃತ ವೆಬ್‌ಸೈಟ್ ಅನ್ನು ಸಿದ್ಧಪಡಿಸಲಾಗಿದೆ ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ಅಕ್ಟೋಬರ್ 17ರಂದು ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಜೆಎಸ್‌ಎಸ್ ವಿವಾಹ ವೇದಿಕೆಯ ನವೀಕೃತ ವೆಬ್‌ಸೈಟ್ ಅನ್ನು ಅನಾವರಣಗೊಳಿಸಿದರು.

ಜೆಎಸ್‌ಎಸ್ ವಿವಾಹವೇದಿಕೆ ಮೂವತ್ತು ವರ್ಷಗಳಿಂದ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ. ಮೈಸೂರು, ಬೆಂಗಳೂರುಗಳಲ್ಲಿ ವಧು–ವರರ ಸಮಾವೇಶಗಳನ್ನು ಏರ್ಪಡಿಸಿಕೊಂಡು ಬರಲಾಗುತ್ತಿದೆ. ಚಾಮರಾಜನಗರದಲ್ಲಿ ಸದ್ಯದಲ್ಲಿಯೇ ವ್ಯವಸ್ಥೆ ಮಾಡಲಾಗುತ್ತಿದೆ. ವಿವಾಹದ ಆಯ್ಕೆಯ ವಿಧಾನಗಳು ಕಾಲಮಾನಕ್ಕೆ ತಕ್ಕಂತೆ ಬದಲಾಗುತ್ತಿರುತ್ತವೆ. ಇಂದಿನ ದಿನಮಾನದಲ್ಲಿ ಸಮಾನ ಮನಸ್ಕರು ಮತ್ತು ಸಮಾನ ಆಲೋಚನೆಗಳನ್ನು ಹೊಂದಿರುವವರನ್ನು ಸಂಗಾತಿಗಳಾಗಿ ಪಡೆಯಲು ಇಚ್ಛಿಸುತ್ತಾರೆ. ಬದಲಾದ ಕಾಲಘಟ್ಟದಲ್ಲಿ ಆನ್‌ಲೈನ್ ವಿವಾಹ ವೇದಿಕೆಯ ಜಾಲತಾಣಗಳ ಸಹಾಯದೊಂದಿಗೆ ವಿವಾಹಗಳು ನಿಶ್ಚಯಗೊಳ್ಳುತ್ತಿವೆ. ಜೆಎಸ್‌ಎಸ್ ವಿವಾಹ ವೇದಿಕೆಯ ನವೀಕೃತ ವೆಬ್‌ಸೈಟ್‌ನಲ್ಲಿ ತಂತ್ರಜ್ಞಾನವನ್ನು ಬಳಸಿಕೊಂಡು ಎಲ್ಲ ತರಹದ ಅವಕಾಶಗಳನ್ನು ನೀಡಲಾಗಿದೆ. ಈ ವೆಬ್‌ಸೈಟ್‌ನ್ನು ಕನ್ನಡ, ತಮಿಳು, ತೆಲಗು ಮತ್ತು ಹಿಂದಿ ಭಾಷೆಗಳಿಗೂ ಸಹ ಅನುವಾದಗೊಳಿಸಿ ಗ್ರಾಮಾಂತರ ಪ್ರದೇಶಗಳಿಗೂ ತಲುಪುವಂತೆ ಮಾಡಲು ಸೂಚಿಸಲಾಗಿದೆ ಎಂದು ಹೇಳಿದರು.

ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರಮಠ ಮಾತನಾಡಿ, ಮೊದಲೆಲ್ಲ ಸಾಂಪ್ರದಾಯಿಕವಾಗಿ ಜೀವನ ಸಂಗಾತಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುತ್ತಿತ್ತು. ಈಗ ತಂತ್ರಜ್ಞಾನದ ಆವಿಷ್ಕಾರದಿಂದ ಅದು ಬದಲಾಗಿದೆ. ಆನ್‌ಲೈನ್ ವಿವಾಹ ಜಾಲತಾಣಗಳ ಮೂಲಕ ಮದುವೆಗಳು ಏರ್ಪಡುತ್ತಿವೆ. ನವೀಕೃತ ವೆಬ್‌ಸೈಟ್ ಇಂದಿನ ದಿನಮಾನಕ್ಕೆ ಅವಶ್ಯವಿರುವ ಎಲ್ಲ ಆಯ್ಕೆ ಮತ್ತು ವಿಷಯಗಳನ್ನು ಒಳಗೊಂಡಿದೆ. ಅವಶ್ಯಕತೆಯಿರುವ ಎಲ್ಲರೂ ಇದರ ಪ್ರಯೋಜನವನ್ನು ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಕುಲಪತಿ ಡಾ. ಹೆಚ್. ಬಸವನಗೌಡಪ್ಪ ಮಾತನಾಡಿ, ಜೀವನದಲ್ಲಿ ವಿವಾಹ ಪ್ರಮುಖವಾದ ಘಟ್ಟ, ಲಿಂಗಾನುಪಾತದಲ್ಲಿ ವ್ಯತ್ಯಾಸವಿರುವುದರಿಂದ ಸರಿಯಾದ ವಯಸ್ಸಿಗೆ ವಿವಾಹಗಳು ಏರ್ಪಡುತ್ತಿಲ್ಲ. ಇಂತಹ ವೆಬ್‌ಸೈಟ್‌ಗಳಿಂದ ವಿವಾಹಗಳು ನಿಶ್ಚಯವಾಗಲು ಸಹಾಯಕವಾಗಲಿದೆ. ವಿವಾಹವಾಗಲು ಕಾಯುತ್ತಿರುವವರಿಗೆ ಇದರಿಂದ ಸಾಕಷ್ಟು ನೆರವಾಗಲಿದೆ ಎಂದು ಹೇಳಿದರು.

ಎಸ್‌ಜೆಸಿಇ ಸ್ಟೆಪ್‌ನ ಮುಖ್ಯ ಕಾರ್ಯನಿರ್ವಾಹಕ ಸಿ. ಶಿವಶಂಕರ್ ಅವರು ವೆಬ್‌ಸೈಟ್‌ನ ಬಗ್ಗೆ ಮಾಹಿತಿ ನೀಡಿ ಸಂಸ್ಕೃತಿಯೊಂದಿಗೆ ತಂತ್ರಜ್ಞಾನವನ್ನು ಸಮ್ಮಿಳತಗೊಳಿಸಿ ವಿವಾಹವೇದಿಕೆಯ ವೆಬ್‌ಸೈಟ್ ಅನ್ನು ನವೀಕೃತಗೊಳಿಸಲಾಗಿದೆ. ಜಗತ್ತಿನ ಎಲ್ಲ ಭಾಗಗಳಲ್ಲೂ ಇದಕ್ಕೆ ಪ್ರವೇಶ ಪಡೆದು ವಿವಾಹವಾಗಬಯಸುವವರು ನೋಂದಾಯಿಸಿಕೊಳ್ಳಬಹುದಾಗಿದೆ. ವೈಯಕ್ತಿಕ ಮಾಹಿತಿಗಳು ಸೋರಿಕೆಯಾಗದಂತೆ ಜಾಗರೂಕವಾಗಿ ಇರುವಂತೆ ಮಾಡಲಾಗಿದೆ. ಜೀವನ ಸಂಗಾತಿಗಳನ್ನು ಪಡೆಯಲು ಬಯಸುವವರಿಗೆ ಎಲ್ಲ ರೀತಿಯ ಆಯ್ಕೆಗಳನ್ನು ಅಳವಡಿಸಿ ಸುಲಭಗೊಳಿಸಲಾಗಿದೆ. ಸ್ಟೆಪ್‌ನ ಸ್ಟಾರ್ಟ್‌ಅಪ್ ಮೂಲಕ ಇದನ್ನು ಪ್ರಸ್ತುತ ದಿನಮಾನಕ್ಕೆ ತಕ್ಕಂತೆ ನವೀಕೃತಗೊಳಿಸಲಾಗಿದೆ ಎಂದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಎಸ್.ಪಿ. ಮಂಜುನಾಥ್, ನಿರ್ದೇಶಕ ಆರ್. ಮಹೇಶ್, ಎಸ್. ಶಿವಕುಮಾರಸ್ವಾಮಿ, ವಿವಾಹ ವೇದಿಕೆಯ ಸ್ವಯಂಸೇವಕರಾದ ಶ್ರೀಮತಿ ಎನ್. ಮಲ್ಲಿಕಾ ಉಪಸ್ಥಿತರಿದ್ದರು. ಕು. ವೈಶಾಲಿ ಮತ್ತು ಕು. ಕುಶಲ ಪ್ರಾರ್ಥಿಸಿ ದರು. ಶ್ರೀಮತಿ ಪಲ್ಲವಿ ಕಾರ್ಯಕ್ರಮ ನಿರೂಪಿಸಿದರು. ಆಸಕ್ತಿಯುಳ್ಳವರು ನವೀಕೃತ ವೆಬ್‌ಸೈಟ್ https://jssmatrimony.com/login ವಿಳಾಸದಲ್ಲಿ ನೋಂದಾಯಿಸಿಕೊಳ್ಳಬಹುದಾಗಿದೆ.

ಸಭಿಕರ ಗಮನ ಸೆಳೆದ ಕೆ.ಎಂ.ಲೇಖಾ ಭರತನಾಟ್ಯ



ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರದಲ್ಲಿ ಕೆ.ಎಂ. ಲೇಖಾ ಅವರ ರಂಗಾಭಿವಂದನೆ ಕಾರ್ಯಕ್ರಮಕ್ಕೆ ಗಣ್ಯರಿಂದ ಚಾಲನೆ ನೀಡಲಾಯಿತು.

ಮೈಸೂರು, ಅ. 21– ನಗರದ ಮಂಚೇಗೌಡನ ಕೊಪ್ಪಲಿನ ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರದ ಕಲೆಮನೆ ಸಭಾಂಗಣದಲ್ಲಿ ಭಾನುವಾರ 39 ನೇ ಭರತನಾಟ್ಯ ರಂಗ ಪ್ರವೇಶ ಕಾರ್ಯಕ್ರಮ ಏರ್ಪಡಿಸಲಾಗಿತ್ತು

ಕರ್ನಾಟಕ ಕಲಾಶ್ರೀ ಡಾ ಕೆ ಕುಮಾರ್ ಇವರ ಮಾರ್ಗದರ್ಶನದಲ್ಲಿ ಇವರ ಪುತ್ರಿಯಾದ ನೃತ್ಯ ವಿಶಾರದೆ ಕೆ ಎಂ ಲೇಖಾ ಭರತನಾಟ್ಯ ರಂಗಪ್ರವೇಶವನ್ನು ಯಶಸ್ವಿಯಾಗಿ ನಡೆಸಿಕೊಟ್ಟು ನೃತ್ಯಾಭಿಮಾನಿಗಳ ಮೆಚ್ಚುಗೆಗೆ ಪಾತ್ರರಾದರು. ಶಾರದಾವಿಲಾಸ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಎ.ವಿ. ಸೂರ್ಯನಾರಾಯಣ ಸ್ವಾಮಿ, ಕರ್ನಾಟಕ ಕಲಾಶ್ರೀ ವಿ ನಂಜುಂಡಸ್ವಾಮಿ, ರಾಜಕುಮಾರ್ ಭಾರತಿ, ಡಾ. ವಿ. ರಂಗನಾಥ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಡಾ. ಪಿ. ಪದ್ಮಪ್ರಿಯ ಮಣಿಕಂಠನ್, ಮಧುರೈ ಎಸ್ ಶಂಕರ್ ಪ್ರಸಾದ್, ಬಿ. ಬಾಲಕೃಷ್ಣಯ್ಯ, ಜಮುನಾ ರಾಣಿ ಮಿರ್ಲೆ, ರಂಗನಾಥ್ ಮೈಸೂರು, ವಿದುಷಿ ಲಲಿತಾ ರಾವ್ ಭಾಗವಹಿಸಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ವಿದುಷಿ ಡಾ ದೀಪಿಕಾ ಪಾಂಡುರಂಗಿ ನಡೆಸಿಕೊಟ್ಟರು. ಡಾ.ಕೆ. ಕುಮಾರ್ ಪ್ರಾಸ್ತಾವಿಕ ಭಾಷಣ ಮಾಡಿದರು. ಮಾಲತಿ, ಕೆ.ಎಂ. ನಿಧಿ ಇದ್ದರು.

ಜಿಲ್ಲಾ ಮಟ್ಟಕ್ಕೆ ಆಯ್ಕೆ



ಸಾರ್ವಜನಿಕ ಶಿಕ್ಷಣ ಇಲಾಖೆ ಆಶ್ರಯದಲ್ಲಿ ನಡೆದ ತಾಲೂಕು ಮಟ್ಟದ ಕ್ರೀಡಾ ಸ್ಪರ್ಧೆಯಲ್ಲಿ ದಕ್ಷಿಣ ವಲಯವನ್ನು ಪ್ರತಿನಿಧಿಸಿದ ವಿಶ್ವಮಾನವ ವಿದ್ಯಾನಿಕೇತನ ಪ್ರಾಥಮಿಕ ಮತ್ತು ಪ್ರೌಢಶಾಲಾ ಬಾಲಕ ಬಾಲಕಿಯರ ಎರಡು ವಿಭಾಗಗಳಲ್ಲಿ ಶಾಲೆಯ ಮಕ್ಕಳು ವಿಜೇತರಾಗಿ ಜಿಲ್ಲಾ ಮಟ್ಟಕ್ಕೆ ಬಾಲ್ ಬ್ಯಾಡ್ಮಿಂಟನ್ ವಿಭಾಗದಲ್ಲಿ ಆಯ್ಕೆಯಾಗಿದ್ದಾರೆ. ತರಬೇತಿ ನೀಡಿದ ದೈಹಿಕ ಶಿಕ್ಷಕ ವಿಶ್ವನಾಥ್.ಜಿ ಹಾಗೂ ಬಾಲಕಿಯರ ಮೇಲ್ವಿಚಾರಕರಾದ ಶ್ರೀಮತಿ ಶಿಲ್ಪಾಶ್ರೀ ಅಭಿನಂದಿಸಿದ್ದಾರೆ.

ಭಾರತ ಜಾಗತಿಕ ಜೀವವೈವಿಧ್ಯತೆಯ ತಾಣ

ನಿವೃತ್ತ ಹಿರಿಯ ವಿಜ್ಞಾನಿ ಡಾ. ಟಿ.ತಿಪ್ಪೇಸ್ವಾಮಿ



ಜೀವವೈವಿಧ್ಯತೆ ಮತ್ತು ಅದರ ಸಂರಕ್ಷಣೆ ಕುರಿತ ಕಾರ್ಯಾಗಾರದಲ್ಲಿ ಹಿರಿಯ ವಿಜ್ಞಾನಿ ಡಾ. ಟಿ. ತಿಪ್ಪೇಸ್ವಾಮಿ ಮಾತನಾಡಿದರು.

ಮೈಸೂರು, ಅ. 21– ಜೆಎಸ್‌ಎಸ್ ಮಹಿಳಾ ಕಾಲೇಜಿನ ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ ವಿಭಾಗಗಳು ಒಟ್ಟಾಗಿ ಮೈಸೂರು ವಿಜ್ಞಾನ ಪ್ರತಿಷ್ಠಾನದ ಸಹಯೋಗದೊಂದಿಗೆ ವನ್ಯಜೀವಿ ಸಪ್ತಾಹ–2025ರ ಅಂಗವಾಗಿ ಜೀವವೈವಿಧ್ಯತೆ ಮತ್ತು ಅದರ ಸಂರಕ್ಷಣೆ ವಿಷಯವಾಗಿ ನುರಿತ ತಜ್ಞರಿಂದ ಕಾರ್ಯಾಗಾರ ಆಯೋಜಿಸಲಾಗಿತ್ತು.

ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನಾ ಮತ್ತು ತರಬೇತಿ ಸಂಸ್ಥೆಯ ನಿವೃತ್ತ ಹಿರಿಯ ವಿಜ್ಞಾನಿ ಡಾ. ಟಿ ತಿಪ್ಪೇಸ್ವಾಮಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿ, ಪರಿಸರ ಸಮತೋಲನ ಕಾಪಾಡಲು ಜೀವವೈವಿಧ್ಯತೆಯ ಸಂರಕ್ಷಣೆ ಬಹಳ ಅವಶ್ಯಕವೆಂದರು. ಭಾರತವು ಸಂಪದ್ಭರಿತ ಜೀವ ವೈವಿಧ್ಯತೆಯ ತಾಣಗಳಾದ ಪಶ್ಚಿಮಘಟ್ಟ, ಹಿಮಾಲಯ, ಅಂಡಮಾನ್ ಮತ್ತು ನಿಕೋಬರ್ ದ್ವೀಪಗಳಂತಹ ಪ್ರದೇಶಗಳನ್ನು ಹೊಂದಿದ್ದು ಇವುಗಳ ರಕ್ಷಣೆ ಅತೀ ಅವಶ್ಯಕ ಎಂದು ಹೇಳಿದರು. ಜನಸಂಖ್ಯಾ ಸ್ಫೋಟ ಜೀವವೈವಿಧ್ಯತೆಯ ಮೇಲೆ ತನ್ನ ಪರಿಣಾಮ ಬೀರುವುದರಿಂದ ಜನಸಂಖ್ಯಾ ನಿಯಂತ್ರಣ ಕೈಗೊಳ್ಳಬೇಕೆಂದು ತಿಳಿಸಿದರು.

ಮೈಸೂರಿನ ಮಹಾರಾಜ ಸರ್ಕಾರಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕ ಡಾ. ಎ.ಎನ್ ಸಂತೋಷ್ ಅವರು ತಮ್ಮ ಉಪನ್ಯಾಸದಲ್ಲಿ ಸಸ್ಯ ಮತ್ತು ಪ್ರಾಣಿ ವರ್ಗಗಳ ಸಮನ್ವಯತೆ ಮತ್ತು ಸಹಬಾಳ್ವೆಯನ್ನು ಕೇಂದ್ರೀಕರಿಸಿ ಜೀವವೈವಿಧ್ಯತೆಯ ವ್ಯಾಪ್ತಿಯನ್ನು ವಿವರಿಸಿದರು.

ಹೋಮಿಯೋಪತಿ ವೈದ್ಯರು ಹಾಗೂ ಸಾವಯವ ಕೃಷಿಕ ಡಾ. ಎ.ಪಿ.ಸಿ ಅಭಿಜಿತ್ ಅವರು ಜೇಡದ ವಿವಿಧ ಪ್ರಭೇದಗಳನ್ನು ವಿವರಿಸುತ್ತಾ, ಅವುಗಳು ಕಲ್ಲುಹೂಗಳು, ಮರದ ರೆಂಬೆಗಳಲ್ಲಿ ಇರುವೆಗಳಂತೆ ಹೇಗೆ ಮರೆಮಾಚಿಕೊಂಡಿರುತ್ತವೆ ಎಂಬುದನ್ನು ವಿವರಿಸಿದರು. ಪ್ರಾಂಶುಪಾಲ ಡಾ. ರೇಚಣ್ಣ ಅಧ್ಯಕ್ಷತೆ ವಹಿಸಿದ್ದರು, ಮೈಸೂರು ವಿಜ್ಞಾನ ಪ್ರತಿಷ್ಠಾನದ ಅಧ್ಯಕ್ಷ ಸಿ. ಕೃಷ್ಣೇಗೌಡ, ಕಾರ್ಯದರ್ಶಿ ಜಿ. ಬಿ ಸಂತೋಷ ಕುಮಾರ್, ಅಧ್ಯಾಪಕರು, ವಿದ್ಯಾರ್ಥಿನಿಯರು, ವಿಜ್ಞಾನ ಪ್ರತಿಷ್ಠಾನದ ಸದಸ್ಯರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

ಫಲಿತಾಂಶ ಸುಧಾರಣೆ ಕುರಿತು ಮಾಹಿತಿ ಸಭೆ



ತಾಲೂಕು ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಮತ್ತು ಉಪನ್ಯಾಸಕರ ಫಲಿತಾಂಶ ಸುಧಾರಣಾ ಕಾರ್ಯಗಾರ ನಡೆಯಿತು.

ಮೈಸೂರು, ಅ.21– ನಮ್ಮ ಸಮೂಹ ಶ್ರಮದಿಂದಲೇ ಕಾಲೇಜು ಶ್ರೇಷ್ಠ ಫಲಿತಾಂಶ ಗಳಿಸಬಹುದು ಎಂದು ಫಲಿತಾಂಶ ಸುಧಾರಣೆಯ ಜಿಲ್ಲಾ ಮಟ್ಟದ ಸಂಚಾಲಕ ಜಾರ್ಜ್ ಫ್ರಾನ್ಸಿಸ್ ಅಭಿಪ್ರಾಯಪಟ್ಟರು.

ನಂಜನಗೂಡಿನ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಿದ್ದ ನಂಜನಗೂಡು ತಾಲೂಕು ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಮತ್ತು ಉಪನ್ಯಾಸಕರ ಫಲಿತಾಂಶ ಸುಧಾರಣಾ ಕಾರ್ಯಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸಭೆಯ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಸಿ.ಆರ್. ದಿನೇಶ್ ಮಾತನಾಡಿ, ಪ್ರತಿ ಉಪನ್ಯಾಸಕರು ತಮ್ಮ ವಿಷಯದ ವಿದ್ಯಾರ್ಥಿಗಳೊಂದಿಗೆ ನಿಕಟ ಸಂಪರ್ಕ ಕಾಯ್ದುಕೊಂಡು, ಹಿಂದುಳಿದ ವಿದ್ಯಾರ್ಥಿಗಳನ್ನು ಗುರುತಿಸಿ ಅವರಿಗೆ ಹೆಚ್ಚುವರಿ ಮಾರ್ಗದರ್ಶನ ನೀಡುವುದು ಅತ್ಯವಶ್ಯಕ. ನಿರಂತರ ಪರೀಕ್ಷೆಗಳು ಮತ್ತು ಫಲಿತಾಂಶ ವಿಶ್ಲೇಷಣೆಯಿಂದ ವಿದ್ಯಾರ್ಥಿಗಳ ಮಟ್ಟವನ್ನು ಸುಧಾರಿಸಬಹುದು ಎಂದರು

ಕಾರ್ಯಕ್ರಮದಲ್ಲಿ ವಿಷಯವಾರು ಫಲಿತಾಂಶ ವಿಶ್ಲೇಷಣೆ, ಅಭ್ಯಾಸ ಪತ್ರಗಳು, ಮತ್ತು ಬೋಧನಾ ವಿಧಾನಗಳ ಕುರಿತು ಚರ್ಚೆ ನಡೆಯಿತು. ಉಪನ್ಯಾಸಕರಾದ ಗಿರೀಶ ಹಾಗೂ ಶಶಿಧರ್ ಅವರು ಫಲಿತಾಂಶ ಸುಧಾರಣೆಗೆ ನೂತನ ಆಲೋಚನೆಗಳನ್ನು ಮಂಡಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಫಲಿತಾಂಶ ಸುಧಾರಣೆ ಸದಸ್ಯರಾದ ಸಂತೋಷ್, ವೆಂಕಟೇಶ್, ಜನಾರ್ಧನ್, ರಮೇಶ್, ರಾಜಲಕ್ಷ್ಮಿ, ವಾಸು, ಚಂದ್ರಶೇಖರ ಬಾಬು, ಬಿ.ಎಸ್ ನಾಗರಾಜು, ಸರಳ, ಚೆನ್ನಬಸಪ್ಪ, ಕೆಂಡಗಣ್ಣಸ್ವಾಮಿ, ಪ್ರವೀಣ್, ಹೇಮಂತ್ ಕುಮಾರ್ ಮತ್ತು ಸರ್ಕಾರಿ ಕಾಲೇಜಿನ ಉಪನ್ಯಾಸಕರು ಉಪಸ್ಥಿತರಿದ್ದರು.

ಭವಿಷ್ಯದ ಆಹಾರ ಉತ್ಪಾದನೆಯಲ್ಲಿ ಸೂಕ್ಷ್ಮ ಜೀವಿಗಳ ಗುರುತರ ಪಾತ್ರವಿದೆ

ಸಿಎಫ್‌ಟಿಆರ್‌ಐನ ಮುಖ್ಯ ವಿಜ್ಞಾನಿ ಡಾ. ಪ್ರಕಾಶ್ ಎಂ ಹಲಾಮಿ ಅಭಿಮತ



ಮೈಕ್ರೋ ವಿಷನ್ ಕ್ಲಬ್ ಉದ್ಘಾಟನೆ ಮತ್ತು ವಿಶ್ವ ಆಹಾರ ದಿನವನ್ನು ಆಚರಿಸಲಾಯಿತು.

ಮೈಸೂರು, ಅ.21– ನಮ್ಮ ಮುಂದಿನ ಭವಿಷ್ಯಕ್ಕಾಗಿ ಆರೋಗ್ಯಕರ ಪೌಷ್ಟಿಕತೆಯನ್ನು ಒದಗಿಸುವಲ್ಲಿ ಸೂಕ್ಷ್ಮ ಜೀವಿಯ ಸಂಯೋಜಕಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದು ಮೈಸೂರಿನ ಸಿಎಫ್‌ಟಿಆರ್‌ಐನ ಮುಖ್ಯ ವಿಜ್ಞಾನಿ ಹಾಗೂ ಸೂಕ್ಷ್ಮ ಜೀವಶಾಸ್ತ್ರ ಮತ್ತು ಫರ್ಮೆಂಟೇಶನ್ ತಂತ್ರಜ್ಞಾನದ ಮುಖ್ಯಸ್ಥರು ಡಾ. ಪ್ರಕಾಶ್ ಎಂ ಹಲಾಮಿ ತಿಳಿಸಿದರು.

ಮೈಸೂರಿನ ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಸೂಕ್ಷ್ಮ ಜೀವಶಾಸ್ತ್ರ ವಿಭಾಗದ ವತಿಯಿಂದ ಮೈಕ್ರೋ ವಿಷನ್ ಕ್ಲಬ್ ಉದ್ಘಾಟನೆ ಮತ್ತು ವಿಶ್ವ ಆಹಾರ ದಿನ ಆಚರಿಸಲಾಯಿತು.

ಸೂಕ್ಷ್ಮಜೀವಿಯ ಆಹಾರ ಸೇರ್ಪಡೆಗಳು: ಆರೋಗ್ಯಕರ ಪೋಷಣೆಯ ಜಾಗೃತಿ ವಿಷಯ ಕುರಿತಂತೆ ಡಾ. ಪ್ರಕಾಶ್ ಅವರು ಉದ್ಘಾಟಿಸಿ ಮಾತನಾಡುತ್ತ, ನಾವು ಬಳಸುವ ಆಹಾರ ಭದ್ರತೆಯ ಮಹತ್ವ ಕುರಿತಂತೆ ವಿವರಿಸಿದರು. ಜೊತೆಗೆ ಆಹಾರ ಅಭದ್ರತೆಯನ್ನು ಎದುರಿಸಲು ಗುರುತರವಾದ ಕಾರ್ಯತಂತ್ರಗಳನ್ನು ಕುರಿತಂತೆ ಮಾತನಾಡಿದರು. ಸುಸ್ಥಿರ ಕೃಷಿಗಳ ಪದ್ಧತಿಗಳ ಮೂಲಕ ಭಾರತವು ವಿಶ್ವದ ಆಹಾರದ ತೊಟ್ಟಿಯಾಗುವ ಸಾಮರ್ಥ್ಯವನ್ನು ಗಳಿಸಿಕೊಂಡಿದೆ. ಅಪೌಷ್ಟಿಕತೆಯ ಬಗ್ಗೆ ಜಾಗೃತಿಯನ್ನು ಮೂಡಿಸುವ ಅಗತ್ಯತೆ ಕುರಿತಂತೆ ತಿಳಿಸುತ್ತಾ, ಇಂತಹ ಜಾಗತಿಕ ಸವಾಲನ್ನು ಎದುರಿಸಲು ಸುಸ್ಥಿರ ಕೃಷಿಯನ್ನು ಬಳಸಿಕೊಳ್ಳುವ ಅವಶ್ಯಕತೆ ಬಗ್ಗೆ ತಿಳಿಸಿದರು. ಕಾಲೇಜಿನ ಪ್ರಾಂಶುಪಾಲ ಡಾ. ರೇಚಣ್ಣ ಅವರು, ಸೂಕ್ಷ್ಮ ಜೀವಶಾಸ್ತ್ರ ವಿಭಾಗದ ಮುಖ್ಯಸ್ಥ ಗಿರೀಶ್ ಎಂ ಉಪಸ್ಥಿತರಿದ್ದರು. ಜೈವಿಕ ಶಾಸ್ತ್ರದ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಡೀಸೆಲ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ತಮ್ಮ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ರಾಜಕಮಲ್	
ಬೈಸನ್ (ತ)	4 ಪ್ರದರ್ಶನಗಳು
ಸಂಗಂ	
ಡ್ಯೂಡ್ (ತ)	4 ಪ್ರದರ್ಶನಗಳು
ಲಿಡೋ	
ತೆಲುಸು ಕದ (ತ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಪ್ರೇಮಿಗಳ ಗಮನಕ್ಕೆ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	**ಕಾಂತಾರ ಚಾಪ್ಟರ್ 1(ಕ):** ಮ.1.00ಕ್ಕೆ, ರಾ.7.00ಕ್ಕೆ, ರಾ.10.30ಕ್ಕೆ, **ಡ್ಯೂಡ್ (ತ):** ಬೆ.10.10ಕ್ಕೆ, ಸಂ.4.20ಕ್ಕೆ
ಸ್ಕ್ರೀನ್ 2	**ಬೈಸನ್ (ತ):** ಮ.1.00ಕ್ಕೆ, ಸಂಜೆ 4.15ಕ್ಕೆ, **ಡೀಸೆಲ್ (ತ):** ಮ.1.20ಕ್ಕೆ, **ತೆಲುಸು ಕದ (ತೆ):** ರಾ.7.35ಕ್ಕೆ, **ದಿ ಪೆಟ್ ಡಿಟೆಕ್ಟಿವ್ (ಇ):** ರಾ.10.20ಕ್ಕೆ
ಸ್ಕ್ರೀನ್ 3	**ಡ್ಯೂಡ್ (ತ):** ರಾ.7.20ಕ್ಕೆ, ರಾ. 10.15ಕ್ಕೆ, **ಕಾಂತಾರ ಚಾಪ್ಟರ್ 1(ಕ):** ಸಂ. 4.00ಕ್ಕೆ, **ಪ್ರೇಮಿಗಳ ಗಮನಕ್ಕೆ (ಕ):** ಬೆ.10.25ಕ್ಕೆ, **ಟೈಮ್ ಪಾಸ್ (ಕ):** ಮ.1.15ಕ್ಕೆ
ಸ್ಕ್ರೀನ್ 4	**ಕಾಂತಾರ ಚಾಪ್ಟರ್ 1(ಕ):** ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ.

ನೆಕ್ಸಸ್ ಮಾಲ್

ಕಾಂತಾರ ಚಾಪ್ಟರ್ 1(ಕ) : ಬೆ: 8.05ಕ್ಕೆ, 9.05ಕ್ಕೆ, 10.25ಕ್ಕೆ, 11.15ಕ್ಕೆ, ಮ: 12.15ಕ್ಕೆ, 2.40ಕ್ಕೆ, 3.40ಕ್ಕೆ, ಸಂಜೆ 6.05ಕ್ಕೆ, 6.55ಕ್ಕೆ, ರಾತ್ರಿ: 7.05ಕ್ಕೆ, 9.30ಕ್ಕೆ, 9.45ಕ್ಕೆ, 10ಕ್ಕೆ, 10.30ಕ್ಕೆ.
ಕಾಂತಾರ ಚಾಪ್ಟರ್ 1(ಹಿ): ಬೆ: 9.10ಕ್ಕೆ, ಮ.3.10ಕ್ಕೆ.
ಡ್ಯೂಡ್ (ತ): ಬೆ: 10ಕ್ಕೆ, ಸಂ: 4ಕ್ಕೆ, ರಾ: 10.20ಕ್ಕೆ
ಟೈಮ್ ಪಾಸ್ (ಕ): ಬೆ: 11.15ಕ್ಕೆ
ತೆಲುಸು ಕಾದಾ (ತೆ): ಮ: 12.20ಕ್ಕೆ, ರಾತ್ರಿ 7.20ಕ್ಕೆ
ಬೈಸನ್ ಕಾಳಮಂದಾನ್ (ತ): ಬೆ: ಮ: 12.40ಕ್ಕೆ, ಸಂಜೆ 6.35ಕ್ಕೆ
ಡೀಸೆಲ್ (ತ): ಮ: 1.40ಕ್ಕೆ
ಮಹಾಯೋಧ ರಾಮ (ಹಿ): ಮ: 1.50ಕ್ಕೆ
ಕೆ–ರ್‍ಯಾಂಪ್ (ತೆ): ಸಂ: 4.15ಕ್ಕೆ, ರಾ: 10.10ಕ್ಕೆ
ಮಿತ್ರ ಮಂಡಳಿ (ತೆ): ಸಂ: 4.40ಕ್ಕೆ
ಗುಡ್ ಫಾರ್ಚ್ಯೂನ್ (ಇ): ಸಂ: 7.30ಕ್ಕೆ

ಗರುಡ ಮಾಲ್

ಕಾಂತಾರ ಚಾಪ್ಟರ್ 1(ಕ) : ಬೆ: 8.20ಕ್ಕೆ, 9.05ಕ್ಕೆ, 9.40ಕ್ಕೆ, 11.30ಕ್ಕೆ, ಮ: 12.15ಕ್ಕೆ, 2.55ಕ್ಕೆ, 3.40ಕ್ಕೆ, ಸಂ: 6.20ಕ್ಕೆ, 7.05ಕ್ಕೆ, ರಾ: 9.45ಕ್ಕೆ, 10.30ಕ್ಕೆ
ಪ್ರೇಮಿಗಳ ಗಮನಕ್ಕೆ (ಕ): ಬೆ: 11.05ಕ್ಕೆ
ಡ್ಯೂಡ್ (ತ): ಮ: 12.50ಕ್ಕೆ, ರಾ: 7.10ಕ್ಕೆ
ಟೈಮ್ ಪಾಸ್ (ಕ): ಮ: 1.50ಕ್ಕೆ
ಬೈಸನ್ ಕಾಳಮಂದಾನ್ (ತ): ಮ: 3.40ಕ್ಕೆ, ರಾ.10.05ಕ್ಕೆ
ತೆಲುಸು ಕಾದಾ (ತೆ): ಮ: 4.30ಕ್ಕೆ
ಕೆ–ರ್‍ಯಾಂಪ್ (ತೆ): ರಾ: 7.20ಕ್ಕೆ
ಮಿತ್ರ ಮಂಡಳಿ (ತೆ): ರಾ: 10.15ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪರಿಸರ ಸ್ನೇಹಿ ಜೂಪ್ಲಾಂಕ್ಟನ್‌ಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಅವಶ್ಯ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪರಿಸರ ವಿಜ್ಞಾನ ವಿಭಾಗದ ಮುಖ್ಯಸ್ಥ ಡಾ. ಟಿ.ಎಸ್. ಹರ್ಷ ಅಭಿಮತ



ಕಾರ್ಯಾಗಾರವನ್ನು ಮುಕ್ತ ವಿಶ್ವವಿದ್ಯಾನಿಲಯದ ಪರಿಸರ ವಿಜ್ಞಾನ ವಿಭಾಗದ ಸಹ ಪ್ರಾಧ್ಯಾಪಕರು ಮತ್ತು ವಿಭಾಗದ ಅಧ್ಯಕ್ಷ ಡಾ. ಟಿ. ಎಸ್. ಹರ್ಷ ಉದ್ಘಾಟಿಸಿದರು.

ಮೈಸೂರು, ಅ. 21– ಜೂಪ್ಲಾಂಕ್ಟನ್‌ಗಳ ಕುರಿತ ಪ್ರಾಯೋಗಿಕ ಮತ್ತು ಸಂಶೋಧನಾತ್ಮಕ ಅಧ್ಯಯನ ಇಂದು ಹೆಚ್ಚು ಮಹತ್ವವನ್ನು ಪಡೆದುಕೊಂಡಿದೆ. ಪರಿಸರ ಸ್ನೇಹಿಯಾಗಿರುವ ಜೂಪ್ಲಾಂಕ್ಟನ್‌ಗಳು ವಿವಿಧ ಆಯಾಮಗಳಲ್ಲಿ ಮಹತ್ವವನ್ನು ಪಡೆದುಕೊಳ್ಳುತ್ತಿವೆ. ಇವುಗಳ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಇರಬೇಕು ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪರಿಸರ ವಿಜ್ಞಾನ ವಿಭಾಗದ ಸಹ ಪ್ರಾಧ್ಯಾಪಕರು ಮತ್ತು ವಿಭಾಗದ ಅಧ್ಯಕ್ಷರಾದ ಡಾ. ಟಿ. ಎಸ್. ಹರ್ಷ ಹೇಳಿದರು.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ ಜೂಪ್ಲಾಂಕ್ಟನ್‌ಗಳ ಗುರುತಿಸುವಿಕೆ ಮತ್ತು ಸಂಸ್ಕರಣೆ ಕುರಿತು ನಡೆದ ಒಂದು ದಿನದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಜೂಪ್ಲಾಂಕ್ಟನ್‌ಗಳು ನೀರಿನಲ್ಲಿ ತೇಲುತ್ತಾ, ತುಂಬಾ ದುರ್ಬಲವಾಗಿ ಈಜುತ್ತಾ ಇರುತ್ತವೆ. ಇವುಗಳ ಗುರುತಿಸುವಿಕೆಗೆ ಪ್ರಾಯೋಗಿಕ ಅಧ್ಯಯನದಿಂದ ಮಾತ್ರ ಸಾಧ್ಯ. ಇವುಗಳ ಸಂಸ್ಕರಣೆಯ ಬಗ್ಗೆ ಸರಿಯಾದ ತರಬೇತಿ ಮತ್ತು ಜ್ಞಾನ ಇರಬೇಕು. ಇದರಿಂದ ಆರ್ಥಿಕವಾಗಿಯೂ ಲಾಭಗಳಿವೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜು ಸಮುಚ್ಚಯದ ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ. ಸಾಂಬಶಿವಯ್ಯ ಮಾತನಾಡಿ, ಉನ್ನತ ಶಿಕ್ಷಣದಲ್ಲಿ ಕೌಶಲ್ಯಾಧಾರಿತ ಕಲಿಕೆ ಮತ್ತು ಸಂಶೋಧನಾ ಆಧಾರಿತ ಶಿಕ್ಷಣದ ಅಗತ್ಯತೆ ತುಂಬಾ ಇದೆ. ಕ್ಷೇತ್ರಾಧಾರಿತ ಅಧ್ಯಯನವನ್ನು ಪ್ರಯೋಗಾಲಯದೊಂದಿಗೆ ಸಂಯೋಜಿಸಬೇಕು. ಜೂಪ್ಲಾಂಕ್ಟನ್‌ಗಳು ಮೀನು ಮತ್ತು ಇತರ ದೊಡ್ಡ ಪ್ರಾಣಿಗಳ ಆಹಾರ ಸರಪಳಿಯಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ. ವಿದ್ಯಾರ್ಥಿಗಳು ಇವುಗಳ ಬಗ್ಗೆ ನಡೆದಿರುವ ಅಧ್ಯಯನಗಳನ್ನು ತಿಳಿದುಕೊಂಡು ಮುಂದಿನ ದಿನಗಳಲ್ಲಿ ಸಂಶೋಧನಾತ್ಮಕವಾಗಿ ಈ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಬೇಕು ಎಂದರು.


ಕಾಲೇಜಿನ ಪ್ರಾಂಶುಪಾಲ ಡಾ. ಪ್ರಭು ಅವರು ಕಾರ್ಯಾಗಾರ ಕುರಿತು ಪರಿಚಯಾತ್ಮಕ ಮಾತುಗಳನ್ನಾಡುತ್ತಾ ಕಲಿಕೆ ಅನುಭವಾಧಾರಿತ ಮತ್ತು ಪ್ರಾಯೋಗಿಕವಾಗಿರಬೇಕು. ಜೂಪ್ಲಾಂಕ್ಟನ್‌ಗಳನ್ನು ಗುರುತಿಸುವ ಮತ್ತು ಸಂಸ್ಕರಣೆ ಮಾಡುವ ವಿಧಾನಗಳು ಹಲವಾರು ಬಗೆಯಲ್ಲಿವೆ. ಅವುಗಳನ್ನು ಈ ಕಾರ್ಯಾಗಾರದ ಮೂಲಕ ತಿಳಿಯುವಿರಿ ಎಂದರು. ಕು. ಚಿನ್ಮಯಿ ಪ್ರಾರ್ಥಿಸಿದರು. ವಿಭಾಗದ ಮುಖ್ಯಸ್ಥರಾದ ಡಾ. ಎಂ.ರಮ್ಯಶ್ರೀ ಸ್ವಾಗತಿಸಿದರು. ಕು. ಮಿಸ್ಬಾ ಅಂಜುಂ ನಿರೂಪಿಸಿದರು. ಶೀತಲ್ ವಂದಿಸಿದರು. ವಿಭಾಗದ ಪ್ರಾಧ್ಯಾಪಕರು ಮತ್ತು 60 ವಿದ್ಯಾರ್ಥಿಗಳು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

ಡಾ.ಜಯಪ್ಪ ಹೊನ್ನಾಳಿ ಆಯ್ಕೆ



ಮೈಸೂರು, ಅ. 21– ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್, ಮೈಸೂರು ನಗರ ಘಟಕದ ಅಧ್ಯಕ್ಷರಾಗಿ ನಾಡಿನ ಸುಪ್ರಸಿದ್ಧ ಕವಿ, ಆಧುನಿಕ ವಚನಕಾರರಾದ ಡಾ.ಜಯಪ್ಪ ಹೊನ್ನಾಳಿ ಆಯ್ಕೆಯಾಗಿದ್ದಾರೆ ಎಂದು ರಾಜ್ಯಾಧ್ಯಕ್ಷ ಡಾ. ಸಿ.ಸೋಮಶೇಖರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

9ನೇ ವರ್ಷದ ಪುಣ್ಯಸ್ಮರಣೆ



ನಾಗರಾಜು.ಸಿ (ಹೊಸಟ್ಟಿ)
ಯರಗನಹಳ್ಳಿ, ಮೈಸೂರು

ಸದಾ ನಿಮ್ಮ ನೆನಪಿನಲ್ಲಿರುವ ಶ್ರೀಮತಿ ಮಂಜುಳ ನಾಗರಾಜು, ಚಂದನ ಪರಮೇಶ್.ವೈ.ಎನ್, ಡಾ||ಮಹೇಶ್.ವೈ.ಎನ್. ಕುಟುಂಬವರ್ಗದವರು ಬಂಧುಮಿತ್ರರು, ಯರಗನಹಳ್ಳಿ ಗ್ರಾಮಸ್ಥರು.

4ನೇ ವರ್ಷದ ಪುಣ್ಯಸ್ಮರಣೆ



ಶ್ರೀ. ಬೋರಪ್ಪರವರು
(ಪ್ರಧಾನ ಕಾರ್ಯದರ್ಶಿ, ಶ್ರೀ. ಸಿದ್ದಪ್ಪಾಜಿ ದೇವಸ್ಥಾನ ಟ್ರಸ್ಟ್)
ಕುಂಬಾರಗೇರಿ, ಲಷ್ಕರ್ ಮೊಹಲ್ಲಾ, ಮೈಸೂರು
ದುಃಖತಪ್ತರು: ಸ್ನೇಹ ಬಳಗ

First Year Remembrance



Vanaja B Pandit

May 09, 1942 - October 22, 2024

w/o Late Prof. B S Pandit
Founder member & Hon. Secretary, GSSS(R), Mysuru

Your legacy of humility, generosity and purpose will continue to inspire us !

Management, staff and students
Geetha Shishu Shikshana Sangha (R)
Gita Bharati School of Excellence
GSSS Bantwal Madhava Shenoy High School
Badriprasadji Pre-University College
GSSS Simha Subbamahalakshmi First Grade College
GSSS Institute of Engineering and Technology for Women
GSSS School of Architecture for Women

ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ



ಶ್ರೀಮತಿ ಗೌರಮ್ಮ ನವರು

ಎಂ. ವೆಂಕಟೇಶ್, ಸಂತೇಪೇಟೆ, ಮೈಸೂರು, ಮನೆ ನಂ: 267/1 ನೂರ್ ಅಲಿಷಾ ಮಕಾನ್ ರಸ್ತೆ, ಕೆ ಟಿ ಸ್ಟ್ರೀಟ್, ಮೈಸೂರು ಇವರು ಮಾಡುವ ವಿಜ್ಞಾಪನೆಗಳು. ನನ್ನ ಧರ್ಮ ಪತ್ನಿಯವರಾದ ಶ್ರೀಮತಿ ಗೌರಮ್ಮನವರು ದಿ: 11–10–2025 ನೇ ಶನಿವಾರ, ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇನೆ. ತತ್ಸಂಬಂಧವಾದ ವೈಕುಂಠ ಸಮಾರಾಧನೆ ಕಾರ್ಯವನ್ನು ದಿ:22–10–2025, ಬುಧವಾರ ಮಧ್ಯಾಹ್ನ 12–30ಕ್ಕೆ ದೇವರಾಜ ರಸ್ತೆಯಲ್ಲಿರುವ 'ಲೋಕಾಭಿರಾಮ ಮಂದಿರ' ದಲ್ಲಿ ನಡೆಸಲು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ. ಭಜನ ಕಾರ್ಯಕ್ರಮವು ಕೋಲತ್ತೂರಿನ ಮಹದೇವಸ್ವಾಮಿ ತಂಡದವರಿಂದ ಬೆಳಿಗ್ಗೆ 10–30 ರಿಂದ ಪ್ರಾರಂಭವಾಗಲಿದೆ.

ದುಃಖತಪ್ತರು

ಪತಿ–ಎಂ. ವೆಂಕಟೇಶ್ ಹಾಗೂ ಮಕ್ಕಳಾದ ನಾಗರತ್ನ, ಪುಷ್ಪಲತಾ ಹಾಗೂ ಮೊಮ್ಮಕ್ಕಳು



ನಾಯಿ ಕಾಣೆಯಾಗಿದೆ

2 ವರ್ಷ ವಯಸ್ಸಿನ ಬೆಲ್ಜಿಯನ್ ಮೆಲಿನೋಇಯಿಸ್ (ಸಿಂಬಾ) ನಾಯಿ ಮೈಸೂರಿನ ವಿಜಯನಗರ 2ನೇ ಹಂತದ, ಕೆ.ಡಿ. ವೃತ್ತದ ಬಳಿಯಲ್ಲಿ ಕಾಣೆಯಾಗಿದೆ. ಯಾರಿಗಾದರೂ ಸಿಕ್ಕರೆ ದಯವಿಟ್ಟು ಕರೆ ಮಾಡಿ

9980565997, 9738617177

ಹುಡುಕಿಕೊಟ್ಟವರಿಗೆ ಸೂಕ್ತ ಬಹುಮಾನ ನೀಡಲಾಗುವುದು.

ಕರ್ನಾಟಕ ಸರ್ಕಾರ

ಗ್ರಾಮ ಪಂಚಾಯತ್ ಕಾರ್ಯಾಲಯ ಉಯಿಗೊಂಡನಹಳ್ಳಿ

ಜಿಲ್ಲಾ ಪಂಚಾಯತ್ - ಮೈಸೂರು ತಾಲ್ಲೂಕು ಪಂಚಾಯತ್ - ಹುಣಸೂರು

ಸಂಖ್ಯೆ:ಗ್ರಾಪಂಕಾ/ಸರಬರಾಜು ./RDPR/2025-26/IND11891

-:ಟೆಂಡರ್ ಪ್ರಕಟಣೆ:-

ವಿಷಯ: ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕು ಉಯಿಗೊಂಡನಹಳ್ಳಿ ಗ್ರಾಮ ಪಂಚಾಯಿತಿಯ ರಾಜೀವ್ ಗಾಂಧಿ ಸೇವಾ ಕೇಂದ್ರ ನಿರ್ಮಾಣ ಕಾಮಗಾರಿ (ಮುಂದುವರಿದ ಕಾಮಗಾರಿ) ಅನುಷ್ಠಾನಗೊಳಿಸಲು ಸಾಮಗ್ರಿ ಖರೀದಿ

2022-23ನೇ ಸಾಲಿನ MGNREGA ಯೋಜನೆ ಅನುಮೋದಿತ ಕ್ರಿಯಾಯೋಜನೆಯಲ್ಲಿ (ಅನುಷ್ಠಾನ ವರ್ಷ 2025-26) ಉಯಿಗೊಂಡನಹಳ್ಳಿ ಗ್ರಾಮ ಪಂಚಾಯ್ತಿ ಈ ಕೆಳಕಾಣಿಸಿದ ಕಾಮಗಾರಿಗೆ ಅರ್ಹ MGNREGA MIS Software ನಲ್ಲಿ ನೋಂದಾಯಿತ ಸರಬರಾಜುದಾರರು ದ್ವಿ-ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಈ ಬಗ್ಗೆ ಸಂಕ್ಷಿಪ್ತ ವಿವರ ಈ ಕೆಳಗಿನಂತಿದೆ.

1 ಟೆಂಡರ್ ಪ್ರಕಟಣೆ ದಿನಾಂಕ : 17.10.2025
2 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ : 03.11.2025 04.00 PM
3 ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ : 04.11.2025 04.30 PM
4 ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ : 06.11.2025 05.00 PM

ಕ್ರ.ಸಂ.	ಕಾಮಗಾರಿ ಹೆಸರು	ಟೆಂಡರ್‌ಗಿಟ್ಟ ಮೊತ್ತ ರೂ.	EMD ಮೊತ್ತ
01	ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕು ಉಯಿಗೊಂಡನಹಳ್ಳಿ ಗ್ರಾಮ ಪಂಚಾಯಿತಿಯ ರಾಜೀವ್ ಗಾಂಧಿ ಸೇವಾ ಕೇಂದ್ರ ನಿರ್ಮಾಣ ಕಾಮಗಾರಿ (ಮುಂದುವರಿದ ಕಾಮಗಾರಿ) ಅನುಷ್ಠಾನಗೊಳಿಸಲು ಸಾಮಾಗ್ರಿ ಖರೀದಿ	6,52,819.36	16,500

* ಹೆಚ್ಚಿನ ವಿವರಗಳಿಗೆ ಗ್ರಾಮ ಪಂಚಾಯತ್ ಕಾರ್ಯಾಲಯ, ಉಯಿಗೊಂಡನಹಳ್ಳಿ ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು

ಸಹಿ/– ಅಧ್ಯಕ್ಷರು,
ಗ್ರಾಮಪಂಚಾಯಿತಿ, ಉಯಿಗೊಂಡನಹಳ್ಳಿ

ಸಹಿ/- ಪಂಚಾಯತ್ ಅಭಿವೃದ್ಧಿ ಅಧಿಕಾರಿ
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಗ್ರಾಮ ಪಂಚಾಯತ್
ಉಯಿಗೊಂಡನಹಳ್ಳಿ

ಸ್ಥಳ: ಉಯಿಗೊಂಡನಹಳ್ಳಿ, ದಿನಾಂಕ: 15.10.2025

ಕರ್ನಾಟಕ ಸರ್ಕಾರ

ಗ್ರಾಮ ಪಂಚಾಯತ್ ಕಾರ್ಯಾಲಯ ಉಯಿಗೊಂಡನಹಳ್ಳಿ

ಜಿಲ್ಲಾ ಪಂಚಾಯತ್ - ಮೈಸೂರು ತಾಲ್ಲೂಕು ಪಂಚಾಯತ್ - ಹುಣಸೂರು

ಸಂಖ್ಯೆ:ಗ್ರಾಪಂಕಾ/ಸರಬರಾಜು ./RDPR/2025-26/IND11800

-:ಟೆಂಡರ್ ಪ್ರಕಟಣೆ:-

ವಿಷಯ: ಉಯಿಗೊಂಡನಹಳ್ಳಿ ಪಂಚಾಯ್ತಿ ವ್ಯಾಪ್ತಿಯ ಕುಡಿನೀರುಮುದ್ದನಹಳ್ಳಿ ಗ್ರಾಮದ ಮುಸ್ಲಿಂ ಜನಾಂಗದ ಸ್ಮಶಾನ ಅಭಿವೃದ್ಧಿ ಕಾಮಗಾರಿ ಅನುಷ್ಠಾನಕ್ಕಾಗಿ ಸಾಮಗ್ರಿ ಖರೀದಿ

2023-24ನೇ ಸಾಲಿನ MGNREGA ಯೋಜನೆ ಅನುಮೋದಿತ ಕ್ರಿಯಾಯೋಜನೆಯಲ್ಲಿ (ಅನುಷ್ಠಾನ ವರ್ಷ 2025-26) ಉಯಿಗೊಂಡನಹಳ್ಳಿ ಗ್ರಾಮ ಪಂಚಾಯ್ತಿ ಈ ಕೆಳಕಾಣಿಸಿದ ಕಾಮಗಾರಿಗೆ ಅರ್ಹ MGNREGA MIS Software ನಲ್ಲಿ ನೋಂದಾಯಿತ ಸರಬರಾಜುದಾರರು ದ್ವಿ-ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಈ ಬಗ್ಗೆ ಸಂಕ್ಷಿಪ್ತ ವಿವರ ಈ ಕೆಳಗಿನಂತಿದೆ.

1. ಟೆಂಡರ್ ಪ್ರಕಟಣೆ ದಿನಾಂಕ : 17.10.2025
2. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ : 03.11.2025 04.00 PM
3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ : 04.11.2025 04.30 PM
4. ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ : 06.11.2025 05.00 PM

ಕ್ರ.ಸಂ.	ಕಾಮಗಾರಿ ಹೆಸರು	ಟೆಂಡರ್‌ಗಿಟ್ಟ ಮೊತ್ತ ರೂ.	EMD ಮೊತ್ತ
01	ಉಯಿಗೊಂಡನಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಕುಡಿನೀರುಮುದ್ದನಹಳ್ಳಿ ಗ್ರಾಮದ ಮುಸ್ಲಿಂ ಜನಾಂಗದ ಸ್ಮಶಾನ ಅಭಿವೃದ್ಧಿ ಕಾಮಗಾರಿ ಅನುಷ್ಠಾನಕ್ಕಾಗಿ ಸಾಮಾಗ್ರಿ ಖರೀದಿ	7,05,562.08	17,700

* ಹೆಚ್ಚಿನ ವಿವರಗಳಿಗೆ ಗ್ರಾಮ ಪಂಚಾಯತ್ ಕಾರ್ಯಾಲಯ, ಉಯಿಗೊಂಡನಹಳ್ಳಿ ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು

ಸಹಿ/– ಅಧ್ಯಕ್ಷರು,
ಗ್ರಾಮಪಂಚಾಯಿತಿ, ಉಯಿಗೊಂಡನಹಳ್ಳಿ

ಸಹಿ/- ಪಂಚಾಯತ್ ಅಭಿವೃದ್ಧಿ ಅಧಿಕಾರಿ
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಗ್ರಾಮ ಪಂಚಾಯತ್
ಉಯಿಗೊಂಡನಹಳ್ಳಿ

ಸ್ಥಳ: ಉಯಿಗೊಂಡನಹಳ್ಳಿ, ದಿನಾಂಕ: 15.10.2025